
# ಕರ್ನಾಟಕ ವಿಕಾಸ

ಸೆಪ್ಟೆಂಬರ್ 2011



## ಪ್ರಶಸ್ತಿಯ ಹಿರಿಮೆಯಲ್ಲಿ ಧಾರವಾಡ ಜಿಲ್ಲಾ ಪಂಚಾಯತ್








**ಶ್ರೀ ಡಿ.ವಿ. ಸದಾನಂದಗೌಡರು**
ಮಾನ್ಯ ಮುಖ್ಯಮಂತ್ರಿಗಳು

**ಶ್ರೀ ಜಗದೀಶ್ ಶೆಟ್ಟರ್**
ಮಾನ್ಯ ಗ್ರಾ. ಮತ್ತು ಪಂ. ರಾಜ್ ಸಚಿವರು





ಇಲಾಖೆಯ ಪ್ರಗತಿ ಪರಿಶೀಲನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು

# ಪ್ರಗತಿ ಪರಿಶೀಲನೆ, ಒಂದು ಸಂವಾದ



ನಲ್ಲೂರು ಗ್ರಾಮ ಪಂಚಾಯತಿಯಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಡಾ. ಅಮಿತ್ರಾ ಪ್ರಸಾದ್



ಸಂವಾದದಲ್ಲಿ ಪ್ರಧಾನ ಕಾರ್ಯದರ್ಶಿಗಳು

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ತುಮಕೂರು ಜಿಲ್ಲಾ ಪ್ರವಾಸ

ದಿನಾಂಕ 06-08-2011




ಪ್ರಕಾಶಕರು

**ಪಿ. ಕುಮಾರ್**

ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು

**ಬಿ.ಸಿ. ಜಯಪಾಲ ರೆಡ್ಡಿ**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು

**ಡಾ|| ಎಂ.ಎಸ್. ಮಂಜುನಾಥ**


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**

# ಕರ್ನಾಟಕ ವಿಕಾಸ


**ಸೆಪ್ಟೆಂಬರ್ 2011**

ಸಂಪುಟ : 52 ಸಂಚಿಕೆ : 10


## ಈ ಸಂಚಿಕೆಯಲ್ಲಿ


5 ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರಿಚಯ

7 ಸಚಿವಾಲಯದಿಂದ ಸಂದೇಶ – ಡಾ. ಅಮಿತಾ ಪ್ರಸಾದ್

9 ಪ್ರವಾಸ ಶಿವಯೋಗಿ. ಚ. ಕಳಸದ

13 ಯಶೋಗಾಥೆಗಳು

30 ಗ್ರಾಮ ಸ್ವರಾಜ್

32 ಸುತ್ತೋಲೆಗಳು



**ವಾರ್ಷಿಕ ಚಂದಾ :**

ವ್ಯಕ್ತಿಗಳಿಗೆ ರೂ. 50/–

ಸಂಸ್ಥೆಗಳಿಗೆ ರೂ. 60/–


ಬಿಡಿ ಪ್ರತಿ ರೂ. 5/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**

ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
**email:karnatakavikasa@ymail.com**

ಪತ್ರಿಕೆ ಕುರಿತು ನಿಮ್ಮ ನುಡಿ

ಮಾನ್ಯರೇ,

ಸ್ವಾತಂತ್ರ್ಯ ಶುಭಾಶಯಗಳೊಂದಿಗೆ, ತಮಗೆ ತಿಳಿಸುವುದೇನೆಂದರೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ, ಕೆಲವು ಸುಧಾರಣೆಗಳನ್ನು ತಂದಿರುವುದು ಭ್ರಷ್ಟಾಚಾರವನ್ನು ತಡೆಯುವಲ್ಲಿ ಯಶಸ್ವಿಯಾಗಬಹುದು. ಆದರೂ ಸಹ ಆಡಳಿತ ಸಿಬ್ಬಂದಿಯವರೂ ಪ್ರಾಮಾಣಿಕರಾದರೆ ಇನ್ನೂ ಒಳ್ಳೆಯದು.

**– ಪ್ರಹ್ಲಾದ ವೀರಪ್ಪ ಬಡಿಗೇರ**

ಎಂ.ಕೆ. ಹುಬ್ಬಳ್ಳಿ ಗ್ರಾಮ, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ – 591 118.

ಆಗಸ್ಟ್ 2011ರ 'ಕರ್ನಾಟಕ ವಿಕಾಸ' ಸಂಚಿಕೆ ಚೆನ್ನಾಗಿ ಮೂಡಿ ಬಂದಿದೆ. ಲೇಖನಗಳ ಆಯ್ಕೆ, ಅದನ್ನು ವಿಶ್ಲೇಷಿಸುವ ರೀತಿಯಿಂದ ಓದುಗರ ಮನಸ್ಸಿನಲ್ಲಿ ತನ್ನದೇ ಆದ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡಿದೆ. ಪ್ರೌಢ ಬರವಣಿಗೆಗಳಿಂದ ತುಂಬಿರುವ 'ಕರ್ನಾಟಕ ವಿಕಾಸ'ದ ಕೀರ್ತಿ ವಿಕಾಸವಾಗಲಿ, ಉತ್ತುಂಗಗೇರಲಿ. ಡಾ. ಎಸ್.ಬಿ. ದಂಡಿನರವರ 'ಕೃಷಿ ಕಲಿಕೆ' (ಎ–ಲರ್ನಿಂಗ್) ಲೇಖನದಲ್ಲಿ ಪ್ರಾಥಮಿಕ ಶಿಕ್ಷಣ ಹಂತದಲ್ಲಿಯೇ ಕೃಷಿ ವಿಷಯದ ಜ್ಞಾನದ ಮೂಡಿಸುವ ಕಳಕಳಿ ಕಂಡುಬರುತ್ತದೆ. ಡಾ. ನಾಗಶ್ರೀ ಕೆ.ಎಸ್. ರವರ 'ಅಭ್ಯಂಗ' ಲೇಖನ ಚೆನ್ನಾಗಿದೆ. ರೋಗ ರುಜಿನಗಳು ಬಾರದಂತೆ ಆರೋಗ್ಯವನ್ನು ರಕ್ಷಿಸಿಕೊಳ್ಳುವ 'ಅಭ್ಯಂಗ'ದಂತಹ ಹಲವಾರು ಆಚರಣೆಗಳು ದೈವತ್ವಕ್ಕೆ ಸೇರುತ್ತಿರುವುದು ವಿಷಾದನೀಯ. 'ಅಭ್ಯಂಗ'ದ ಬಗ್ಗೆ ವಿವರವಾಗಿ ತಿಳಿಸಿದ ಲೇಖಕರಿಗೆ ಅಭಿನಂದನೆಗಳು.

**– ನಾಮದೇವ ಕಾಗದಗಾರ**

ಕಲಾವಿದ, 'ಶ್ರೀಹರಿ ನಿವಾಸ', 1ನೇ ಮೈನ್, 3ನೇ ಕ್ರಾಸ್, ಅಶೋಕನಗರ, ರಾಣಿಬೆನ್ನೂರು – 581 115.

ನಮ್ಮ ನೆಚ್ಚಿನ ಕರ್ನಾಟಕ ವಿಕಾಸದ ಸಚಿವಾಲಯದಿಂದ ಸಂದೇಶ ಡಾ॥ ಅಮಿತಾ ಪ್ರಸಾದ್‌ರವರ 'ಸ್ಪಂದನಶೀಲ ಆಡಳಿತ ರೂಢಿಗತವಾಗಲಿ' ಬರಹದಿಂದ 1947 ಆಗಸ್ಟ್ 15ರಂದು ಸ್ವತಂತ್ರ ಸಿಕ್ಕಾಗ ಹೇಗೆ ನಾವು ಆಂಗ್ಲರ ದಾಸ್ಯದಿಂದ ಬಿಡುಗಡೆ ಹೊಂದಿದೆವೊ ಸ್ವತಂತ್ರ್ಯ ಬದುಕು ನಮ್ಮದಾಯಿತು. ಹಾಗೆಯೇ ಈ ಬರಹದಿಂದ ನಮ್ಮ ಸಮಸ್ತ ರೈತಾಪಿವರ್ಗ ಧನ್ಯತೆಯನ್ನು ಅನುಭವಿಸುವಂತಹ ಬರಹವನ್ನು ನೀಡಿದ್ದಾರೆ. ಡಾ॥ ಪಾಟೀಲ ಪುಟ್ಟಪ್ಪನವರ 'ಮನುಷ್ಯನಲ್ಲಿ ಆಲೋಚನೆ ಮುಂದಾಗಬೇಕು' ಬದುಕುವ ಮಾತು ಲೇಖನ ಚಿಕ್ಕದಾದರೂ ಚೊಕ್ಕ ಚಿನ್ನದಂತಿದೆ. ಇಂದಿನ ಯುವ ಪೀಳಿಗೆಗೆ ದಾರಿ ದೀಪದಂತಿರುವ ಬರಹವಾಗಿದೆ.

**– ರಾಜೇಂದ್ರ ಹೆಗಡೆ ಹಾವೇರಿ**

ಕಂದಾಯ ಇಲಾಖೆ, ಮಂಜುನಾಥನಗರ, ತಾಂಡೂರ ಕಟ್ಟಡ ಎದುರು,
ಇಜಾರಿಕಮಾಪುರ ಗ್ರಾಮ, ಹಾವೇರಿ – 581 110.

'ಕರ್ನಾಟಕ ವಿಕಾಸ' ಪತ್ರಿಕಾ ಮಿತ್ರರಿಗೆ ಸ್ವಾತಂತ್ರ್ಯ ಮಹೋತ್ಸವದ ಶುಭಾಶಯಗಳು. ಮಿತ್ರರೆ ತಮ್ಮ ಪತ್ರಿಕೆಯು ಪ್ರತಿ ತಿಂಗಳು ತುಂಬಾ ಸೊಗಸಾಗಿ ಮೂಡಿಬರುತ್ತಿದ್ದು ಓದುಗರಿಗೆ ಮಹತ್ವದಾಯಕ ಅಂಕಣಗಳೊಂದಿಗೆ ಉತ್ತಮ ಮೌಲ್ಯಗಳನ್ನು ರೂಪಿಸತೊಡಗಿವೆ. ಅಲ್ಲದೆ ಇಲಾಖೆಯ ಮುಂದಿನ ಕಾರ್ಯ ಯೋಜನೆಗಳ ಚಿತ್ರಣವನ್ನು ನೀಡುತ್ತಿದೆ.

**– ಎನ್.ಎಂ. ಪಾಟೀಲ್**


ಕಿರಿಯ ತರಬೇತಿ ಅಧಿಕಾರಿ, ಶ್ರೀ ಜ. ಅನ್ನದಾನೀಶ್ವರ ಐ.ಟಿ.ಸಿ. ಬೆಳ್ಳಟ್ಟಿ, ಶಿರಹಟ್ಟಿ ತಾ॥, ಗದಗ ಜಿಲ್ಲೆ.

ಆಗಸ್ಟ್ 2011ರ 'ಕರ್ನಾಟಕ ವಿಕಾಸ'ದಲ್ಲಿ ಡಾ. ಎಸ್.ಬಿ. ದಂಡಿನ ಅವರು ಬರೆದ 'ಕೃಷಿ ಕಲಿಕೆ'ಯ ಲೇಖನದಲ್ಲಿ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ 'ಕೃಷಿ ಕ್ಷೇತ್ರ'ದ ಪಾತ್ರ ಬಹಳ ಪ್ರಮುಖವಾಗಿದ್ದು, ಮುಂದಿನ ಯುವ ಪೀಳಿಗೆಗೆ ಕೃಷಿ ಕ್ಷೇತ್ರದ ಕಡೆಗೆ ಆಸಕ್ತಿ ಮೂಡಿಸುವ ಅಂಶಗಳು ತಿಳಿಸಿದ್ದಾರೆ. ಇಂದು ಆಹಾರದ ಕೊರತೆ ಬಗ್ಗೆ ಪ್ರತಿಯೊಬ್ಬರ ಗಮನ ಹರಿಸಬೇಕು. ಈ ನಿಟ್ಟಿನಲ್ಲಿ ಸಂಚಿಕೆಯಲ್ಲಿ ಮೂಡಿಬಂದ ಶಿಕ್ಷಣದ ಜೊತೆಗೆ 'ಕೃಷಿ ಕಲಿಕೆ'ಯ ಲೇಖನ ತುಂಬಾ ಚೆನ್ನಾಗಿತ್ತು. ಲೇಖಕರಿಗೆ ಹಾಗೂ ಸಂಪಾದಕರಿಗೂ ನನ್ನ ವಂದನೆಗಳು.

**– ಶ್ರೀಕಾಂತ ಟಿ.**

ಶ್ರೀ ಲಕ್ಷ್ಮೀನಿವಾಸ, ವಾಲ್ಮೀಕಿ ಕಲ್ಯಾಣ ಮಂಟಪ ಹತ್ತಿರ, ಆಕಾಶವಾಣಿ, 35ನೇ ವಾರ್ಡ್,
ಹೊಸಪೇಟೆ ತಾ, ಪೋ, ಬಳ್ಳಾರಿ ಜಿಲ್ಲೆ.



ಶ್ರೀ ಡಿ.ವಿ. ಸದಾನಂದಗೌಡ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕದ 26ನೇ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ಡಿ.ವಿ. ಸದಾನಂದಗೌಡರು ಜನಪರ ಕಾಳಜಿ ಉಳ್ಳವರು. ಕರ್ನಾಟಕದ ಸಮಗ್ರ ಅಭಿವೃದ್ಧಿಯ ಕನಸು ಕಂಡವರು. ಅವರ ಅಧಿಕಾರವಧಿಯಲ್ಲಿ ಅವರ ಕನಸು ನನಸಾಗಲಿ ಎಂದು 'ಕರ್ನಾಟಕ ವಿಕಾಸ' ಶುಭವನ್ನು ಹಾರೈಸುತ್ತದೆ.

# ಶ್ರೀ ಡಿ.ವಿ. ಸದಾನಂದಗೌಡ

ಕರ್ನಾಟಕ ರಾಜ್ಯದ 26ನೇ ಮುಖ್ಯಮಂತ್ರಿಯಾಗಿ ದಿನಾಂಕ : 04.08.2011 ರಂದು ಅಧಿಕಾರ ವಹಿಸಿಕೊಂಡ ಶ್ರೀ ಡಿ.ವಿ. ಸದಾನಂದಗೌಡರ ಹುಟ್ಟೂರು ಸುಳ್ಯ ತಾಲ್ಲೂಕಿನ ಮಂಡೆಕೋಲು ಗ್ರಾಮ ವ್ಯಾಪ್ತಿಯ ದೇವರಗೊಂಡ ಎಂಬ ಸಣ್ಣ ಗ್ರಾಮ. ಕೃಷಿಕ ಮನೆತನಕ್ಕೆ ಸೇರಿದ ದಿ॥ ವೆಂಕಟಪ್ಪಗೌಡ ಮತ್ತು ಶ್ರೀಮತಿ ಕಮಲ ದಂಪತಿಗಳಿಗೆ 1953 ರಲ್ಲಿ ಸುಪುತ್ರರಾಗಿ ಜನಿಸಿದ ಮಾನ್ಯರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಹುಟ್ಟೂರಲ್ಲೇ ಪೂರೈಸಿ, ಪುತ್ತೂರಿನ ಸೆಂಟ್ ಫಿಲೋಮಿನ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ ಪಡೆದು ನಂತರ ಉಡುಪಿಯ ಲಾ ಕಾಲೇಜಿನಲ್ಲಿ ಕಾನೂನು ಪದವಿಯನ್ನು ಪಡೆದರು.

ವೃತ್ತಿ ಬದುಕಿನ ಆರಂಭದ ದಿನಗಳಲ್ಲಿ ಪುತ್ತೂರಿನ ನ್ಯಾಯಾಲಯದಲ್ಲಿ ನ್ಯಾಯವಾದಿಗಳಾಗಿ ಕೆಲಸ ಮಾಡುತ್ತಾ ತಮ್ಮ ಅದ್ಭುತ ವಾಕ್ಚಾತುರ್ಯ, ನ್ಯಾಯ ಪ್ರತಿಪಾದನೆಯ ಸಾಮರ್ಥ್ಯದ ಹಿನ್ನೆಲೆಯಲ್ಲಿ ಶಿರಸಿ ನ್ಯಾಯಾಲಯದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡು ಸಾರ್ವಜನಿಕರ ಕುಂದು ಕೊರತೆಗಳ ಪರಿಹಾರಕ್ಕಾಗಿ ದುಡಿದಿದ್ದರು. ಹಲವಾರು ಸಂಘ ಸಂಸ್ಥೆಗಳಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಮಾನ್ಯ ಶ್ರೀ ಸದಾನಂದಗೌಡರು 1994 ರಿಂದ 2004 ರವರೆಗೆ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿ ರಾಜಕೀಯ ಕ್ಷೇತ್ರದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. 2004 ಮತ್ತು 2009 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಜಯಭೇರಿ ಬಾರಿಸಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾದರು. ಬದಲಾದ ರಾಜಕೀಯ ವಿದ್ಯಮಾನದ ಹಿನ್ನೆಲೆಯಲ್ಲಿ ಶ್ರೀ ಡಿ.ವಿ. ಸದಾನಂದಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿ ಸಮಗ್ರ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ.

ಸರಳ, ಸಜ್ಜನಿಕೆಯೊಂದಿಗೆ ಸದಾ ಹಸನ್ಮುಖರಾಗಿಯೇ ಗುರುತಿಸಿಕೊಳ್ಳುವ ಸನ್ಮಾನ್ಯ ಮುಖ್ಯಮಂತ್ರಿಗಳ ಆಡಳಿತದಲ್ಲಿ ಮಹಾತ್ಮಗಾಂಧಿ ಕನಸಿನ ಗ್ರಾಮ ಸ್ವರಾಜ್ ಸಾಕಾರಗೊಳ್ಳುವಂತಾಲಿ ಎಂದು 'ಕರ್ನಾಟಕ ವಿಕಾಸ' ಅಭಿನಂದನೆಗಳೊಂದಿಗೆ ಶುಭವನ್ನು ಹಾರೈಸುತ್ತದೆ.

❑






**ಶ್ರೀ ಜಗದೀಶ ಶೆಟ್ಟರ**
**ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು**

ಮಾನ್ಯ ಸಚಿವರಾದ ಜಗದೀಶ ಶೆಟ್ಟರರವರ ನೇತೃತ್ವದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮತ್ತಷ್ಟು ಕ್ರಿಯಾಶೀಲವಾಗಿ ಸಮಗ್ರ ಗ್ರಾಮೀಣಾಭಿವೃದ್ಧಿಗೆ ಸಹಕಾರಿಯಾಗಲಿ ಎಂದು ಹಾರೈಸುತ್ತಾ 'ಕರ್ನಾಟಕ ವಿಕಾಸ' ಬಳಗವು ಮಾನ್ಯ ಸಚಿವರಿಗೆ ಈ ಸಂದರ್ಭದಲ್ಲಿ ಶುಭ ಕಾಮನೆಗಳನ್ನು ಕೋರುತ್ತದೆ.

# ಶ್ರೀ ಜಗದೀಶ ಶೆಟ್ಟರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಪುಟ ದರ್ಜೆಯ ಸಚಿವರಾಗಿ ಎರಡನೆಯ ಬಾರಿಗೆ ಅಧಿಕಾರ ಚುಕ್ಕಾಣಿಯನ್ನು ಹಿಡಿದಿರುವ ಶ್ರೀ ಜಗದೀಶ ಶೆಟ್ಟರ ಅವರು ಜನಪರ ಕಾಳಜಿಯುಳ್ಳವರು. ಸರಳತೆ, ಸಜ್ಜನಿಕೆ, ಸಹೃದಯತೆಗೆ ಹೆಸರಾದ ಶ್ರೀ ಶೆಟ್ಟರವರು ರಾಜಕೀಯದಷ್ಟೇ ಸಾಹಿತ್ಯದ ಬಗ್ಗೆ ಪ್ರೀತಿಯುಳ್ಳವರು. ತಮ್ಮ ಬಿಡುವಿನ ವೇಳೆಯನ್ನು ಉತ್ತಮ ಗ್ರಂಥಗಳ ಅಧ್ಯಯನಕ್ಕೆ ಮೀಸಲಾಗಿಡುತ್ತಾ ಬಂದಿದ್ದಾರೆ. ಇದು ಅವರಿಗೆ ಕಾಲೇಜು ದಿನಗಳಿಂದಲೇ ಅಂಟಿಕೊಂಡು ಬಂದ ಹವ್ಯಾಸ.

ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲ್ಲೂಕಿನ ಕೆರೂರ ಗ್ರಾಮ ಶ್ರೀ ಜಗದೀಶ ಶೆಟ್ಟರವರ ಜನ್ಮಸ್ಥಳ. ಶ್ರೀ ಶೆಟ್ಟರವರ ತಂದೆಯವರು ಹುಬ್ಬಳ್ಳಿ ಮಹಾನಗರ ಪಾಲಿಕೆಗೆ ಸತತ ಐದು ಬಾರಿ ಚುನಾಯಿತರಾಗಿ ಮಹಾನಗರ ಪಾಲಿಕೆಯ ಮೊದಲ ಜನಸಂಘದ ಮೇಯರ್ ಆಗಿದ್ದವರು. ಇಂತಹ ರಾಜಕೀಯ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದು ಬಂದ ಶ್ರೀ ಶೆಟ್ಟರವರು ಬಿ.ಕಾಂ., ಎಲ್.ಎಲ್.ಬಿ. ಪದವೀಧರರರು.

ಮೂಲತಃ ಗ್ರಾಮೀಣ ಪರಿಸರದಲ್ಲಿ ಬಾಲ್ಯವನ್ನು ಕಳೆದ ಶ್ರೀ ಜಗದೀಶ ಶೆಟ್ಟರವರಿಗೆ ಗ್ರಾಮೀಣ ಸಮಸ್ಯೆಗಳ, ಗ್ರಾಮೀಣ ಜನರ ದುಃಖ ದುಮ್ಮಾನಗಳ ಬಗ್ಗೆ ಚೆನ್ನಾಗಿ ಅರಿವಿದೆ. ಅವರ ಕಷ್ಟಗಳಿಗೆ ಸ್ಪಂದಿಸುವ ಹೃದಯ ವೈಶಾಲ್ಯತೆಯನ್ನು ಹೊಂದಿರುವ ಸನ್ಮಾನ್ಯ ಸಚಿವರು ಸಮಸ್ಯೆಗಳ ನಿವಾರಣೆಯತ್ತ ಸದಾ ಚಿಂತನೆಮಾಡುವ ಮನಸ್ಸುಳ್ಳವರಾಗಿದ್ದಾರೆ. ಇಂತಹ ಹಿನ್ನೆಲೆಯುಳ್ಳ ಶ್ರೀ ಜಗದೀಶ ಶೆಟ್ಟರರವರು ಪ್ರಸ್ತುತ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಂಪುಟ ದರ್ಜೆಯ ಸಚಿವರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಸಮಗ್ರ ಗ್ರಾಮೀಣಾಭಿವೃದ್ಧಿಯ ಬಗ್ಗೆ ಸದಾಶಯವನ್ನು ಹೊಂದಿದ್ದು ಇಲಾಖೆಯ ಪ್ರಮುಖ ಯೋಜನೆಗಳಾದ ಉದ್ಯೋಗ ಖಾತರಿ ಯೋಜನೆ, ಸುವರ್ಣ ಗ್ರಾಮೋದಯ, ಗ್ರಾಮ ಸ್ವರಾಜ್ ಯೋಜನೆಗಳ ಸರ್ವಾಂಗೀಣ ಅನುಷ್ಠಾನ ಹಾಗೂ ಹಲವಾರು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವಲ್ಲಿ ಕ್ರಿಯಶೀಲ ಹೆಜ್ಜೆಗಳನ್ನಿಟ್ಟಿದ್ದಾರೆ. ಈ ಶುಭ ಸಂದರ್ಭದಲ್ಲಿ ನೂತನ ಸಚಿವರಿಗೆ 'ಕರ್ನಾಟಕ ವಿಕಾಸ' ಬಳಗವು ಶುಭ ಹಾಗೂ ಯಶಸ್ಸನ್ನು ಕೋರುತ್ತದೆ.

❑

## ಸಚಿವಾಲಯದಿಂದ ಸಂದೇಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.



ಡಾ. ಅಮಿತಾ ಪ್ರಸಾದ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

**ಬಂಧುಗಳೇ,**

# ಪ್ರಶಸ್ತಿ ಪಡೆದ ಜಿಲ್ಲೆಗಳ ಯಶೋಗಾಥೆ ನಿಮಗೆ ಮಾದರಿಯಾಗಲಿ

ಸ್ವಾತಂತ್ರ್ಯಾ ನಂತರದ ಮುನ್ನಡೆಯಲ್ಲಿ ನಿರುದ್ಯೋಗ ನಿವಾರಣೆ, ಹಳ್ಳಿಯ ಜನಗಳ ಹಾಗೂ ಜನತಾಣಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಾ ಬಂದಿರುವುದನ್ನು ಮತ್ತು ಬರುತ್ತಿರುವುದನ್ನು ತಾವುಗಳು ಸಹ ಮನಗಂಡಿದ್ದೀರಿ. ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಹಳ್ಳಿಗಳಲ್ಲಿ ವರ್ಷದ ಎಲ್ಲಾ ದಿನಗಳಲ್ಲೂ ಕೆಲಸ ದೊರೆಯದೇ ಇರುವುದು, ದೊರಕಿದಂತಹ ಸಂದರ್ಭಗಳಲ್ಲಿ ಕೂಲಿ ನೀಡುವಿಕೆಯಲ್ಲಿ ಗಂಡು–ಹೆಣ್ಣುಗಳಿಗೆ ತಾರತಮ್ಯ ಮಾಡುವುದನ್ನು ನಾವು ಕಂಡಿದ್ದೇವೆ. ಬರಗಾಲದಂತಹ ಕಾಲಘಟ್ಟಗಳಲ್ಲಿ ಉದ್ಯೋಗವನ್ನರಸಿ ಊರಿಂದ ಊರಿಗೆ ವಲಸೆ ಹೋಗುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ.

ಗ್ರಾಮೀಣ ಜನರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ, ದುಡಿಯುವ ಸಾಮರ್ಥ್ಯ, ಅಗತ್ಯತೆ ಮತ್ತು ಗಂಡು–ಹೆಣ್ಣೆಂಬ ಲಿಂಗ ತಾರತಮ್ಯವಿಲ್ಲದೆ ಒಂದಷ್ಟು ಉದ್ಯೋಗವನ್ನು ದುಡಿಯುವ ಕೈಗಳಿಗೆ ಒದಗಿಸಬೇಕು. ಸ್ವಾವಲಂಬಿ ಬದುಕನ್ನು ನಡೆಸುವ ಅವಕಾಶವನ್ನು ಪ್ರತಿಯೊಬ್ಬರಿಗೂ ಕಲ್ಪಿಸಬೇಕಾಗಿರುವುದು ಇವತ್ತಿನ ಕಾಲಘಟ್ಟದ ಮಹತ್ವದ ಆದ್ಯತೆಗಳಲ್ಲಿ ಒಂದಾಗಿದೆ. ತನ್ಮೂಲಕ ಸುಸ್ಥಿರ ಹಾಗೂ ಸದೃಢ ಸಮಾಜವನ್ನು ಕಟ್ಟುವ ಆಶಯ ರಾಜ್ಯ ಮತ್ತು ಕೇಂದ್ರ ಸರ್ಕಾರದ್ದಾಗಿದೆ.

ಈ ಹಾದಿಯಲ್ಲಿ ಫೆಬ್ರವರಿ 2006ರಿಂದ ಜಾರಿಗೆಬಂದಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಮೊದಲ ಹಂತದಲ್ಲಿ 5 ಜಿಲ್ಲೆಗಳಲ್ಲಿ ಆರಂಭವಾಗಿ ನಂತರ ಏಪ್ರಿಲ್ 2007ರಿಂದ 2ನೇ ಹಂತದ ಹೆಚ್ಚುವರಿಯಾಗಿ 6 ಜಿಲ್ಲೆಗಳಲ್ಲಿ ವಿಸ್ತರಿಸಿ ಆ ನಂತರ ಏಪ್ರಿಲ್ 2008ರಿಂದ ರಾಜ್ಯದ ಉಳಿದ 18 ಜಿಲ್ಲೆಗಳಲ್ಲೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತಂದು ಪ್ರಸ್ತುತ ಅನುಷ್ಠಾನದಲ್ಲಿರುವುದು ತಮಗೆಲ್ಲಾ ತಿಳಿದಿರುವ ಸಂಗತಿ.

ಯಾವುದೇ ಗ್ರಾಮೀಣ ಪರವಾದಂತಹ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕಾದರೆ ಜನರ ಸಹಭಾಗಿತ್ವ ಅತ್ಯಗತ್ಯ. ಈ ಪಾಲ್ಗೊಳ್ಳುವಿಕೆ ಗಣನೀಯವಾಗಿ ಗರಿಷ್ಟಗೊಳ್ಳಲು ಅಧಿಕಾರಿಗಳ ಹೊಣೆಗಾರಿಕೆಯೂ ಅಷ್ಟೇ ಮಹತ್ವದಾಗಿರುತ್ತದೆ. ಈ ಮಹತ್ವದ ಜವಾಬ್ದಾರಿಯನ್ನು ತಾವುಗಳೆಲ್ಲರೂ ಸಮರ್ಥವಾಗಿ ನಿಭಾಯಿಸುತ್ತೀರೆಂದು ನಂಬಿರುತ್ತೇನೆ.

ಇದಕ್ಕೆ ಅನುಕ್ರಮವಾಗಿ ಗುಲ್ಬರ್ಗಾ, ಬೆಳಗಾವಿ ಮತ್ತು ಇತ್ತೀಚಿನ ವರ್ಷದಲ್ಲಿ ಧಾರವಾಡ ಜಿಲ್ಲಾ ಪಂಚಾಯತಿಯು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಉತ್ತಮ ಅನುಷ್ಠಾನಕ್ಕಾಗಿ ಪ್ರಶಸ್ತಿಯನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಂಡಿರುವುದು ಅಭಿನಂದನೀಯ ವಿಷಯ. ಇವರು ಮಾಡಿರುವ ಸಾಧನೆ ಮತ್ತು ಯಶೋಗಾಥೆಗಳ ಕುರಿತು ಈ ಸಂಚಿಕೆಯಲ್ಲಿ ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪರಿಚಯಿಸಿ ಕೊಡುವ ಪ್ರಯತ್ನ ಮಾಡಲಾಗಿದೆ. ಈ ಯಶೋಗಾಥೆಗಳು ತಮ್ಮ ಜಿಲ್ಲೆಗಳಿಗೂ ಮಾದರಿಯಾಗಿ ತಾವುಗಳೆಲ್ಲರೂ ಸಹ ಉತ್ತಮ ರೀತಿಯಲ್ಲಿ ಕಾರ್ಯೋನ್ಮುಖರಾಗಿ, ಯೋಜನೆಯ ಅನುಷ್ಠಾನದಲ್ಲಿ ಗುಣಮಟ್ಟವನ್ನು ಕಾಪಾಡಿಕೊಂಡು ಪ್ರಶಸ್ತಿಗೆ ಭಾಜನರಾಗುವಂತೆ ಕಾರ್ಯಪ್ರವೃತ್ತಿರಾಗುತ್ತೀರೆಂದು ನಾನು ಆಶಿಸುತ್ತೇನೆ.

ಯೋಜನೆಯ ಅನುಷ್ಠಾನ, ಕಾರ್ಯಾಚರಣೆ ಸಮರ್ಪಕವಾಗಿದ್ದಲ್ಲಿ ಮಾತ್ರ ಯಶಸ್ಸು ಸಾಧ್ಯ. ಇದಕ್ಕಾಗಿ ಆಯಾ ಗ್ರಾಮ ಪಂಚಾಯತಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಗಣಕೀಕರಿಸಿ ಮಾಹಿತಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು. ಸಾಮಾಜಿಕ ಲೆಕ್ಕ ಪರಿಶೋಧನೆಗೆ ಹೆಚ್ಚು ಒತ್ತನ್ನು ನೀಡಿ ಕಾರ್ಯಾನುಷ್ಠಾನದಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಕಾಯ್ದುಕೊಂಡು ಯಾವುದೇ ದೂರುಗಳಿಗೆ ಆಸ್ಪದವಿಲ್ಲದಂತೆ ಕಾರ್ಯನಿರ್ವಹಿಸುವಂತೆ ಸೂಚಿಸಬಯಸುತ್ತೇನೆ.

ಈ ಸಂಚಿಕೆಯಲ್ಲಿರುವ ಮಾಹಿತಿಯನ್ನು ತಾವುಗಳೆಲ್ಲರೂ ಪಡೆದು, ಯೋಜನೆಯ ಉದ್ದೇಶವನ್ನು ಗ್ರಾಮೀಣ ಜನರಿಗೆ ತಲುಪಿಸುವ ಮೂಲಕ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದಲ್ಲಿ ಯಶಸ್ವಿಗೊಳಿಸುತ್ತೀರೆಂದು ಆಶಿಸುತ್ತೇನೆ.

(ಡಾ. ಅಮಿತಾ ಪ್ರಸಾದ್)




# ಪ್ರವಾಸ : ಒಂದು ಸಂವಾದ

– ಶಿವಯೋಗಿ. ಚ. ಕಳಸದ *

ಡಾ. ಅಮಿತಾ ಪ್ರಸಾದ್, ಐ.ಎ.ಎಸ್ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರು ತುಮಕೂರು ಜಿಲ್ಲೆ ಪ್ರವಾಸ ಕೈಗೊಂಡು ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಿದ ಚಿತ್ರಣ ಈ ಲೇಖನದಲ್ಲಿದೆ.

ಡಾ. ಅಮಿತಾ ಪ್ರಸಾದ್, ಐ.ಎ.ಎಸ್ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರು ಶ್ರೀ ಶಿವಯೋಗಿ, ಚ.ಕಳಸದ ಕೆ.ಎ.ಎಸ್. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ಇವರೊಡನೆ ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ 15 ಪ್ರಗತಿ ಕೇಂದ್ರಗಳ ಪೈಕಿ ಗುಬ್ಬಿ ತಾಲ್ಲೂಕು ವ್ಯಾಪ್ತಿಗೆ ಬರುವ ನಲ್ಲೂರು ಮತ್ತು ಕೊಪ್ಪ ಗ್ರಾಮ ಪಂಚಾಯತ್ ಕೇಂದ್ರ ಕಛೇರಿಗಳಲ್ಲಿ ಸ್ಥಾಪಿಸಲಾಗಿರುವ ಸಾಮಾನ್ಯ ಸೇವಾ ಕೇಂದ್ರಗಳಿಗೆ (ಪ್ರಗತಿ) ದಿನಾಂಕ : 06.08.2011 ರಂದು ಭೇಟಿ ನೀಡಿ ಪರಿಶೀಲಿಸಿ ಹಲವಾರು ಸಲಹೆ ಸೂಚನೆಗಳನ್ನು ನೀಡಿರುತ್ತಾರೆ.

## 1. ನಲ್ಲೂರು ಗ್ರಾಮ ಪಂಚಾಯತ್ :

ನಲ್ಲೂರು ಗ್ರಾಮ ಪಂಚಾಯತ್ ಕಛೇರಿಯ ಆವರಣದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರ ಸಹಭಾಗಿತ್ವ ಮತ್ತು ತೆರೆಸಾಫ್ಟ್ ಸಂಸ್ಥೆಯ ಮಾರ್ಗದರ್ಶನದಲ್ಲಿ ಸಾಮಾನ್ಯ ಸೇವಾ ಕೇಂದ್ರವು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಭಾಗದಲ್ಲಿರುವ ಬಡ ವರ್ಗದ ಜನತೆಗೆ ಅತ್ಯವಶ್ಯವಾದ ಕಂದಾಯ ಮತ್ತು ಅಭಿವೃದ್ಧಿ ಇಲಾಖೆಗಳ ಸುಮಾರು 42 ದಾಖಲಾತಿಗಳು ಅಲ್ಲಿಯೇ ವಿತರಣೆಯಾಗುತ್ತಿರುವ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಖುದ್ದು ಪರಿಶೀಲಿಸಿದರು.



* ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ತುಮಕೂರು.




ಸಾಮಾನ್ಯ ಸೇವಾ ಕೇಂದ್ರದಲ್ಲಿ ಸಾರ್ವಜನಿಕರಿಗೆ ದೊರೆಯುವಂತ ಸೇವೆಗಳ ಬಗ್ಗೆ ಐ.ಐ.ಎಂ.ಬಿ. ಅಧಿಕಾರಿಗಳು ಮಾಹಿತಿ ಒದಗಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ತುಮಕೂರು ಹಾಗೂ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಈ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ಚರ್ಚಿಸಿದರು. ಆರೋಗ್ಯ ಇಲಾಖೆಯ ಅಧಿಕಾರಿಗಳು ಟೆಲಿ ಮೆಡಿಸನ್ ಕುರಿತು ಮಾಹಿತಿ ನೀಡಿದರು.

ಪ್ರಗತಿ ಕೇಂದ್ರವು ನಿಗದಿತ ಸೇವಾ ಶುಲ್ಕದೊಂದಿಗೆ ಹಲವು ಇಲಾಖೆಯ ದಾಖಲೆ ಒದಗಿಸುವ ಕೇಂದ್ರ ಇದಾಗಬೇಕು ಮತ್ತು ವಿದ್ಯುತ್ ಬಿಲ್, ಟೆಲಿಫೋನ್ ಬಿಲ್, ಕೆ.ಎಸ್.ಆರ್.ಟಿ.ಸಿ. ಬಸ್ ಟಿಕೇಟ್ ಕಾಯ್ದಿರಿಸುವಿಕೆ, ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಿಸಿದಂತೆ ಬೇಕಾದ ಬೀಜ, ಗೊಬ್ಬರ ಹಾಗೂ ಮಾರುಕಟ್ಟೆ ವ್ಯವಸ್ಥೆ ಬಗ್ಗೆ ಮಾಹಿತಿ ನೀಡುವುದು ಸೂಕ್ತವೆಂದರು. ಅಲ್ಲದೇ ಜಿಲ್ಲೆಯಲ್ಲಿ ಪ್ರಬಲವಾಗಿ ಬೆಳೆದ ಸ್ತ್ರೀ ಶಕ್ತಿ ಸಂಘಗಳ ಆರ್ಥಿಕ ಸದೃಢತೆಗೆ ಬೆನ್ನೆಲುಬಾಗಿ ಕೇಂದ್ರ ಸರ್ಕಾರ ಮತ್ತು ಬ್ಯಾಂಕ್ ಸೇವೆ ಬಗ್ಗೆ ಗ್ರಾಮೀಣ ಜನತೆಗೆ ಮನೆ ಬಾಗಿಲಿಗೆ ಸೇವೆ ಒದಗಿಸುವ ಪ್ರಗತಿ ಕೇಂದ್ರವು ವ್ಯವಸ್ಥಿತವಾಗಿ ನಡೆಸುವುದು ಸೂಕ್ತವೆಂದರು.

ಗ್ರಾಮ ಪಂಚಾಯಿತಿ ವತಿಯಿಂದ ಕೈಗೊಳ್ಳಲಾಗಿರುವ ವಿವಿಧ ಕಾಮಗಾರಿಗಳ ಆರ್ಥಿಕ ವರ್ಷವಾರು ಕ್ರಿಯಾ ಯೋಜನೆಗಳ ಬಗ್ಗೆ ಗೋಡೆ ಬರಹಗಳನ್ನು ಪರಿಶೀಲಿಸಿದರು.

## 2. ಕೊಪ್ಪ ಗ್ರಾಮ ಪಂಚಾಯತ್

ಕೊಪ್ಪ ಗ್ರಾಮ ಪಂಚಾಯತ್ ಕೇಂದ್ರ ಕಛೇರಿಯಲ್ಲಿ ಐ.ಐ.ಎಂ.ಬಿ. ಸಹಭಾಗಿತ್ವ ಮತ್ತು ಐ.ಡಿ.ಎಫ್. ಸಂಸ್ಥೆಯ ಸಹಕಾರದೊಂದಿಗೆ ಸಾಮಾನ್ಯ ಸೇವಾ ಕೇಂದ್ರವು ವಿವಿಧ ಸೇವೆಗಳನ್ನು ಒದಗಿಸುತ್ತಿದ್ದು, ಸದರಿ ಸೇವಾ ಕೇಂದ್ರಕ್ಕೆ ಪ್ರಧಾನ ಕಾರ್ಯದರ್ಶಿಗಳು ಭೇಟಿ ನೀಡಿ ಪರಿಶೀಲಿಸಿದರು.

ಐ.ಡಿ.ಎಫ್. ಸಂಸ್ಥೆಯ ಅಧಿಕಾರಿಗಳು, ಗ್ರಾಮ ಪಂಚಾಯತ್ ಸದಸ್ಯರು, ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಸಾಮಾನ್ಯ ಸೇವಾ ಕೇಂದ್ರದಲ್ಲಿ ಸಾರ್ವಜನಿಕರಿಗೆ ಒದಗಿಸುವ ಸೇವೆಗಳ ಬಗ್ಗೆ ಸಾರ್ವಜನಿಕರಿಂದ ಅಹವಾಲುಗಳನ್ನು ಆಲಿಸಿದರು. ಅಲ್ಲದೇ ಉದ್ಯೋಗಕ್ಕಾಗಿ ಇರುವ ಅವಕಾಶಗಳ ಬಗ್ಗೆ ತಾಂತ್ರಿಕ ವಿವರಗಳನ್ನು ನಿರುದ್ಯೋಗಿಗಳಿಗೆ ಒದಗಿಸುವುದು ಮತ್ತು ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸುವ ಉದ್ಯೋಗಾಂಕಾಕ್ಷಿಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವುದು ಸೂಕ್ತವೆಂದರು.

ಗ್ರಾಮೀಣ ಭಾಗದಲ್ಲಿನ ಬಡವರ್ಗದ ಜನತೆಗೆ ಅತ್ಯವಶ್ಯವಾದ ಕಂದಾಯ ಇಲಾಖೆಯ ಆರ್.ಟಿ.ಸಿ. ವಿತರಣೆ, ಆದಾಯ ಮತ್ತು ಜಾತಿ ಪ್ರಮಾಣ ಪತ್ರ ವಿತರಣೆ ಯಶಸ್ವಿಯಾಗಿ ನಡೆಯುತ್ತಿದ್ದು, ಶಿಕ್ಷಣ, ಕೃಷಿ ಮತ್ತು ಬೆಳೆಗಳ ಕುರಿತ ರೈತರಿಗೆ ಮಾಹಿತಿ ನೀಡುವುದು ಸೂಕ್ತವೆಂದರು.

ಕೊಪ್ಪ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2010–11 ನೇ ಸಾಲಿನಲ್ಲಿ ನಿರ್ಮಿಸಿದ ಚರಂಡಿ ಕಾಮಗಾರಿಯನ್ನು ವೀಕ್ಷಿಸಿದರು.

ದಿನಾಂಕ 21.06.2011 ರಂದು ಸಂಜೆ 6.30 ಗಂಟೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ತುಮಕೂರು ಇವರು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ತುಮಕೂರು ನಗರದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಬೇಟಿ ನೀಡಿ ಕೈಗೊಂಡ ಪರಿಶೀಲನಾ ವರದಿ.

1. ಊಟ–ಉಪಹಾರದ ಬಗ್ಗೆ :– ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ತುಮಕೂರು ನಗರದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಬೇಟಿ ನೀಡಿ ಪರಿಶೀಲಿಸ ಲಾಯಿತು. ಪರಿಶೀಲನಾ ಸಂದರ್ಭದಲ್ಲಿ ಸಂಜೆ ಮಕ್ಕಳಿಗೆ

ಉಪ್ಪಿಟ್ಟು ನೀಡಲಾಗುತ್ತಿದ್ದು, ಪ್ರತಿ ದಿನ ಪ್ರತ್ಯೇಕ ಉಪಹಾರ ನೀಡಲು ಮೇಲ್ವಿಚಾರಕರಿಗೆ ಸೂಚನೆ ನೀಡಲಾಯಿತು.

2. ವಿದ್ಯುತ್ ಸಮಸ್ಯೆ ಮತ್ತು ನೀರಿನ ಸಮಸ್ಯೆ : ಬೆಸ್ಕಾಂಗೆ ವಿದ್ಯುತ್ ಬಿಲ್ ಪಾವತಿಸದೇ ಇರುವುದರಿಂದ ವಿದ್ಯುತ್ ಕಟಾಯಿಸಿರುವುದಾಗಿ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರು ತಿಳಿಸಿದ್ದು ತಕ್ಷಣ ವಿದ್ಯುತ್ ಬಿಲ್ ಪಾವತಿಸಲು ಜಿಲ್ಲಾ ಸಮಾಜ ಕಲ್ಯಾಣ ಇಲಾಖಾಧಿಕಾರಿಗಳಿಗೆ ತಿಳಿಸಲಾಯಿತು. ನೀರಿಗೆ ಸಂಬಂಧಿಸಿದಂತೆ ತುಮಕೂರು ಮಹಾನಗರ ಪಾಲಿಕೆಗೆ ಸಂಪರ್ಕಿಸಿ ಹೆಚ್ಚಿನ ನೀರು ಒದಗಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

3. ದಾಸ್ತಾನು ಬಗ್ಗೆ : ನಾಗವಲ್ಲಿ ಮತ್ತು ಕೆಸ್ತೂರು ವಿದ್ಯಾರ್ಥಿ ನಿಲಯಕ್ಕೆ ಸೇರಿದ ಆಹಾರ ಸಾಮಗ್ರಿಗಳು ಇಲ್ಲಿನ ದಾಸ್ತಾನು ಕೊಠಡಿಯಲ್ಲಿರುವುದು ಕಂಡು ಬಂದಿರುತ್ತದೆ. ಈ ರೀತಿ ಬೇರೆ ವಿದ್ಯಾರ್ಥಿ ನಿಲಯದ ಆಹಾರ ಸಾಮಗ್ರಿಗಳನ್ನು ಇನ್ನಾವುದೇ ವಿದ್ಯಾರ್ಥಿ ನಿಲಯದಲ್ಲಿರುವುದು ಸರಿಯಿಲ್ಲ. ಈ ಬಗ್ಗೆ ತಕ್ಷಣ ಸಂಬಂಧಿಸಿದ ವಿದ್ಯಾರ್ಥಿ ನಿಲಯಗಳಿಗೆ ಕಳುಹಿಸಲು/ತೆಗೆದುಕೊಂಡು ಹೋಗಲು ನಿರ್ದೇಶನ ನೀಡುವಂತೆ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳಿಗೆ/ಮೇಲ್ವಿಚಾರಕರಿಗೆ ಸೂಚಿಸಲಾಯಿತು.

ವಿವಿಧ ಆಹಾರ ಪದಾರ್ಥಗಳ ದಾಸ್ತಾನು ಪರಿಶೀಲಿಸಿ ದಾಸ್ತಾನು ಪುಸ್ತಕವನ್ನು ಮೇಲ್ವಿಚಾರಕರಿಗೆ ಕೇಳಲಾಗಿ ಇನ್ನೂ ಪೂರ್ಣ ಪ್ರಮಾಣದಲ್ಲಿ ದಾಸ್ತಾನು ನಮೂದಿಸಿರುವುದಿಲ್ಲ ವೆಂದು ತಿಳಿಸಿದರು. ತಕ್ಷಣ ದಾಸ್ತಾನು ಪುಸ್ತಕ ಅಪ್‌ಡೇಟ್ ಮಾಡಲು ಮೇಲ್ವಿಚಾರಕರಿಗೆ ತಿಳಿಸಲಾಯಿತು.

4. ಸೌರಶಕ್ತಿ ನೀರು ಕಾಯಿಸುವ ಯಂತ್ರ : ಮಕ್ಕಳಿಗೆ ಬಿಸಿ ನೀರು ಒದಗಿಸಲು ಸೌರಶಕ್ತಿ ನೀರು ಕಾಯಿಸುವ ಯಂತ್ರ ಪೂರ್ಣ ಪ್ರಮಾಣದಲ್ಲಿ ಅಳವಡಿಸದೇ ಇರುವುದರಿಂದ ಬಿಸಿ ನೀರು ಬರುತ್ತಿಲ್ಲದಿರುವ ಬಗ್ಗೆ ಮೇಲ್ವಿಚಾರಕರಿಗೆ ತಿಳಿಸಿದ್ದು, ತಕ್ಷಣ ಸೌರ ಶಕ್ತಿ ನೀರು ಕಾಯಿಸುವ ಯಂತ್ರವನ್ನು ಅಳವಡಿಸುತ್ತಿರುವ ತುಮಕೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಸಂಪರ್ಕಿಸಲು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯವರಿಗೆ ಸೂಚಿಸಲಾಯಿತು.



5. ಆರೋಗ್ಯ ತಪಾಸಣೆ : ಆರೋಗ್ಯ ಸರಿಯಿಲ್ಲದ ಮಕ್ಕಳಿಗೆ ಆರೋಗ್ಯ ತಪಾಸಣೆ ಕೈಗೊಳ್ಳಲಾಗುತ್ತಿರುವುದಾಗಿ ತಿಳಿದುಬಂದಿದ್ದು, ಆರೋಗ್ಯ ಸರಿ ಇಲ್ಲದ ಮತ್ತು ಇರುವ ಎಲ್ಲಾ ಮಕ್ಕಳಿಗೂ ಆರೋಗ್ಯ ತಪಾಸಣೆ ಕೈಗೊಳ್ಳಲು ಕ್ರಮವಹಿಸುವಂತೆ ಮೇಲ್ವಿಚಾರಕರಿಗೆ ತಿಳಿಸಲಾಯಿತು.

6. ಹಿಂದಿನ ಸಾಲಿನಲ್ಲಿ ಬಂದಿರುವ ಹೊದಿಕೆ ಇತ್ಯಾದಿ ಸಾಮಗ್ರಿ ಬಗ್ಗೆ :– ಹಿಂದಿನ ಸಾಲಿನಲ್ಲಿ ಹೊಸದಾಗಿ ಹೊದಿಕೆಗಳು/ ಟ್ರಂಕ್‌ಗಳ ಮತ್ತು ಇತರೆ ಆಟಿಕೆ ಸಾಮಗ್ರಿಗಳು ಸರಬರಾಜು ಆಗಿದ್ದು ವಿದ್ಯಾರ್ಥಿಗಳಿಗೆ ವಿತರಿಸದೇ ಇರುವುದು ಕಂಡು ಬಂದಿದ್ದು ತಕ್ಷಣ ಅವಶ್ಯಕತೆಗೆ ಅನುಗುಣವಾಗಿ ವಿವರಿಸಲು ಕ್ರಮ ವಹಿಸುವಂತೆ ಮೇಲ್ವಿಚಾರಕರಿಗೆ ತಿಳಿಸಲಾಯಿತು.

7. ಹೊಸ ಕಟ್ಟಡ ಬಗ್ಗೆ : ಹಾಲಿ ಈಗಿರುವ ವಿದ್ಯಾರ್ಥಿ ನಿಲಯದ ಕೊಠಡಿ ವೆಚ್ಚ ರೂ. 9.50ಲಕ್ಷಗಳಲ್ಲಿ ಹೊಸದಾಗಿ ಕೊಠಡಿ ನಿರ್ಮಿಸಲು ನಿರ್ಮಿತಿ ಕೇಂದ್ರ ಏಜೆನ್ಸಿಯನ್ನಾಗಿ ನೇಮಕ ಮಾಡಲಾಗಿದ್ದು ರಜೆಯ ಅವಧಿಯಲ್ಲಿ ನಿರ್ಮಾಣ ಕಾರ್ಯ ಪ್ರಾರಂಭಿಸಿಲ್ಲ. ಈ ಬಗ್ಗೆ ತಕ್ಷಣ ಪ್ರಾರಂಭಿಸಲು ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ, ತುಮಕೂರು ಇವರಿಗೆ ಸೂಚಿಸಲಾಯಿತು.

8. ಶಾಲಾ ಸಮವಸ್ತ್ರದ ಬಗ್ಗೆ : ವಿದ್ಯಾರ್ಥಿಗಳಿಗೆ ನೀಡಲು ಶಾಲಾ ಸಮವಸ್ತ್ರಗಳು ಇದುವರೆಗೂ ಬಂದಿಲ್ಲದಿರುವ ಬಗ್ಗೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿರವರು ಕೆ.ಎಸ್.ಐ.ಡಿ.ಸಿ. ಇವರಿಗೆ ಆದೇಶ ನೀಡಿರುವುದಾಗಿ ತಿಳಿಸಿದ್ದು ತಕ್ಷಣ ಹೊಸದಾಗಿ ಸೇರುವ ಹಾಸ್ಟಲ್

ವಿದ್ಯಾರ್ಥಿಗಳಿಗೂ ಸೇರಿ ಎಲ್ಲರಿಗೂ ಸಮವಸ್ತ್ರ ವಿತರಿಸಲು ಕೆ.ಎಸ್.ಐ.ಡಿ.ಸಿ. ಸಂಪರ್ಕಿಸಲು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಸೂಚಿಸಲಾಯಿತು.

9. ಟಿ.ವಿ ಮತ್ತು ಯು.ಪಿ.ಎಸ್. ಬಗ್ಗೆ : ಊಟದ ಕೊಠಡಿಯಲ್ಲಿ ಅಳವಡಿಸಲಾಗಿದ್ದು ಯು.ಪಿ.ಎಸ್. ಕೆಟ್ಟು ಹೋಗಿದ್ದು ಇದಕ್ಕೆ ಪರ್ಯಾಯವಾಗಿ ಸೌರಶಕ್ತಿ ಮನೆ ದೀಪ ಅಳವಡಿಸಲು ಮತ್ತು ಕಳೆದ ಆರು ತಿಂಗಳಿಂದ ಕೆಟ್ಟು ಹೋಗಿರುವ ಟಿ.ವಿ.ಯನ್ನು ದುರಸ್ಥಿ ಮಾಡಿಸಲು ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರಿಗೆ ಸೂಚಿಸಲಾಯಿತು.

10. ವಾಚನಾಲಯದ ಬಗ್ಗೆ : ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಲವಾರು ಪುಸ್ತಕಗಳಿದ್ದು ಕಛೇರಿಯಲ್ಲಿಟ್ಟು ಬೀಗ ಹಾಕಿರುವುದರಿಂದ ವಿದ್ಯಾರ್ಥಿಗಳಿಗೆ ಅದರ ಉಪಯೋಗ ಪಡೆಯಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಪುಸ್ತಕಗಳನ್ನು ಮಕ್ಕಳಿಗೆ ಒದಗಿಸಲು ಅನುಕೂಲವಾಗುವಂತೆ ಪ್ರತ್ಯೇಕ ಕೊಠಡಿ ಅಥವಾ ಕಛೇರಿಯ ಬೀಗವನ್ನು ತೆರೆದಿಡಲು ಮೇಲ್ವಿಚಾರಕರಿಗೆ ಸೂಚಿಸಲಾಯಿತು.

11. ಶೌಚಾಲಯ ಮತ್ತು ಸ್ನಾನದ ಕೊಠಡಿ ಬಗ್ಗೆ : ಶೌಚಾಲಯ ಮತ್ತು ಸ್ನಾನದ ಕೊಠಡಿಗಳು ಶುಚಿಯಾಗಿಲ್ಲದಿರುವ ಬಗ್ಗೆ ಪರಿಶೀಲಿಸಿ ಶುಚಿಯಾಗಿಡಲು ಸೂಚಿಸಲಾಯಿತು. ಊಟ ಉಪಹಾರ ಮುಗಿಸಿದ ನಂತರ ಸೂಕ್ತ ಸ್ಥಳಗಳಲ್ಲಿ ತಟ್ಟೆಗಳನ್ನು ತೊಳೆಯಲು ಮಕ್ಕಳಿಗೆ ತಿಳಿ ಹೇಳಿ ತಿಳಿಸಲಾಯಿತು.

1) **ಸಂವಾದ :** ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳೊಡನೆ ಓದು-ಊಟ-ಉಪಹಾರ ಮತ್ತು ಇತರೆ ಸೌಲಭ್ಯಗಳ ಬಗ್ಗೆ ಚರ್ಚಿಸಲಾಯಿತು. ಮತ್ತು ಸೂಕ್ತ ಮಾರ್ಗದರ್ಶನ ನೀಡಲಾಯಿತು. ಉಪಹಾರವನ್ನು ಪ್ರತಿ ದಿನ ಬೇರೆ ಬೇರೆ ಉಪಹಾರ ನೀಡಲು ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರಿಗೆ ಸೂಚಿಸಲಾಯಿತು.

2) **ಎಸ್.ಎಸ್.ಎಲ್.ಸಿ. ಫಲಿತಾಂಶದ ಬಗ್ಗೆ :** 2009-10 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶೇ. 100ರಷ್ಟು ಫಲಿತಾಂಶ ಬಂದಿದ್ದು 2010-11 ನೇ ಸಾಲಿನಲ್ಲಿ ಶೇ. 90ರಷ್ಟು ಬಂದಿರುವುದರ ಬಗ್ಗೆ 2011-12 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಶೇ. 100ರಷ್ಟು ಫಲಿತಾಂಶ ಬರಲು ಪ್ರಯತ್ನಿಸಬೇಕು ಮಕ್ಕಳಿಗೆ ಈ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲು ಮೇಲ್ವಿಚಾರಕರಿಗೆ ಸೂಚಿಸಲಾಯಿತು.

3) **ಸಾಮಾನ್ಯ ಷರಾ :**

ಅ. ಅಡಿಗೆ ಮನೆ/ಸ್ನಾನದ ಮನೆ/ಶೌಚಾಲಯಗಳನ್ನು ಶುಚಿಯಾಗಿಡಲು ಹೆಚ್ಚಿನ ಆದ್ಯತೆ ನೀಡಬೇಕು

ಆ. ಪ್ರತಿ 2 ತಿಂಗಳಿಗೊಮ್ಮೆ ಎಲ್ಲಾ ಮಕ್ಕಳಿಗೆ ಆರೋಗ್ಯ ತಪಾಸಣೆಗೆ ಒಳಪಡಿಸಬೇಕು

ಇ. ಊಟ-ಉಪಹಾರಗಳನ್ನು ನಿಗಧಿತ ಅವಧಿಯೊಳಗೆ ಮತ್ತು ಹೆಚ್ಚಿನ ಪೋಷಕಾಂಶ ಇರುವ ಆಹಾರ ನೀಡಬೇಕು.

ಈ. ಮಕ್ಕಳಿಗೆ ವಿದ್ಯುತ್ ಇಲ್ಲದ ಸಂದರ್ಭದಲ್ಲಿ ಬದಲಿ ಅನುಕೂಲವಾಗುವಂತೆ ಸೂಕ್ತ ಪರ್ಯಾಯ ವ್ಯವಸ್ಥೆ ಮಾಡುವುದು.

ಉ. ಶಾಲಾ ಸಮವಸ್ತ್ರ ವಿತರಿಸಲು ಅವಶ್ಯ ಕ್ರಮ ಕೈಗೊಳ್ಳುವುದು.

ಊ. ವಾಚನಾಲಯದ ಪುಸ್ತಕಗಳನ್ನು ಮಕ್ಕಳಿಗೆ ಬದಲಿ ಸೂಕ್ತ ವ್ಯವಸ್ಥೆ ಮಾಡುವುದು.

ಋ. ದಾಸ್ತಾನು ವಹಿ ಪ್ರತಿ ದಿನ ಅಪ್‌ಡೇಟ್ ಮಾಡುವುದು

ಎ. ದಾಸ್ತಾನಿನಲ್ಲಿರುವ ವಿವಿಧ ಸಾಮಗ್ರಿಗಳನ್ನು ಮಕ್ಕಳಿಗೆ ವಿತರಿಸುವುದು

ಏ. ದಾಸ್ತಾನು ಕೊಠಡಿ ಸುಸ್ಥಿತಿಯಲ್ಲಿಡುವುದು.

❑

---

ಕಷ್ಟಪಟ್ಟು ದುಡಿದರೆ ಅದರ ಪ್ರತಿಫಲ ನಿಮ್ಮ ಮನೆಯ ಬಾಗಿಲಿಗೆ ಬರಲಿದೆ.

**- ಗೋಲ್ಡ್‌ಸ್ಮಿತ್**

## ಧಾರವಾಡ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಜೊತೆಗೆ ವಿವಿಧ ಇಲಾಖಾ ಕಾರ್ಯಕ್ರಮಗಳನ್ನು ಸಂಯೋಜಿಸುವ ಕುರಿತು

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವು ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಪೂರ್ವನಿದರ್ಶನವಿಲ್ಲದ ಶ್ರೇಣಿಯಲ್ಲಿ ಅಕುಶಲ ಕೂಲಿಕಾರ್ಮಿಗಳಿಗೆ ಉದ್ಯೋಗ ಖಾತರಿ ನೀಡುವ ಕಾನೂನು ಆಗಿದೆ. ಯೋಜನೆಯು ಗ್ರಾಮೀಣ ಬಡವರ ಜೀವನೋಪಾಯದ ಭದ್ರತೆ ಬಲಪಡಿಸಲು, ಕುಶಲವಲ್ಲದ ದೈಹಿಕ ಕೆಲಸವನ್ನು ಸ್ವ–ಇಚ್ಛೆಯಿಂದ ಮಾಡಲಿಚ್ಛಿಸುವ ವಯಸ್ಕ ಸದಸ್ಯರ ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೆ ವಾರ್ಷಿಕ ಕನಿಷ್ಠ 100 ದಿನಗಳ ಉದ್ಯೋಗ ನೀಡುವ ಉದ್ದೇಶ ಹೊಂದಿದೆ. ಈ ಅಧಿನಿಯಮದಡಿ ಕೈಗೆತ್ತಿಕೊಂಡ ಕಾಮಗಾರಿಗಳು ಹಾನಿಗೊಳಗಾದ ನೈಸರ್ಗಿಕ ಸಂಪನ್ಮೂಲಗಳ ಮರುಪೂರಣಗೊಳಿಸುವುದು ಮತ್ತು ತೀವ್ರ ಬಡತನಕ್ಕೆ ಕಾರಣವಾದ ಬರಗಾಲ, ಅರಣ್ಯನಾಶ, ಭೂ ಸವಕಳಿ, ನೆರೆ, ದುರ್ಬಲ ಗ್ರಾಮೀಣ ಸಂಪರ್ಕ ಮುಂತಾದವುಗಳಿಗೆ ಪರಿಹಾರ ನೀಡುತ್ತದೆ. ಈ ಅಧಿನಿಯಮವು ಸ್ಥಳೀಯ ಆಡಳಿತದಲ್ಲಿ ಪ್ರಜಾಪ್ರಭುತ್ವ, ಪಾರದರ್ಶಕತೆ, ಉತ್ತರದಾಯಿತ್ವವನ್ನು ಬಲಪಡಿಸುತ್ತದೆ.

ಈ ಅಧಿನಿಯಮದಲ್ಲಿ ಕೈಗೊಳ್ಳುವ ಕಾಮಗಾರಿಗಳನ್ನು ಸರಿಯಾಗಿ ಯೋಜಿಸಿ, ಅನುಷ್ಠಾನದಲ್ಲಿ ಗುಣಮಟ್ಟ ಕಾಯ್ದುಕೊಂಡಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸಬಹುದಾಗಿದೆ. ಸಂಪನ್ಮೂಲ ಅಭಿವೃದ್ಧಿ ಪಡಿಸುವುದರ ಜೊತೆಗೆ ಗ್ರಾಮೀಣ ಕೂಲಿಕಾರರ ಜೀವನ ಗುಣಮಟ್ಟವನ್ನು ಸಹ ಸುಧಾರಿಸಬಹುದಾಗಿದೆ. ವಿವಿಧ ಯೋಜನೆಗಳಲ್ಲಿಯ ಸೌಲಭ್ಯಗಳನ್ನು ಸರಿಯಾಗಿ ಸಂಯೋಜಿಸಿ ಅನುಷ್ಠಾನ ಮಾಡಿದಲ್ಲಿ ದೀರ್ಘಾವಧಿಯ ಪ್ರಯೋಜನೆ ಹಾಗೂ ಸುಸ್ಥಿರ ಅಭಿವೃದ್ಧಿಯ ಸಾಧ್ಯತೆ ಇದೆ. ಇದನ್ನು ಮನಗಂಡು ಧಾರವಾಡ ಜಿಲ್ಲೆಯ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅನುಷ್ಠಾನ ತಂಡವು ಈ ಯೋಜನೆಯನ್ನು ವಿವಿಧ ಇಲಾಖಾ ಯೋಜನೆಗಳೊಂದಿಗೆ

ವಿವಿಧ ಯೋಜನೆಗಳಲ್ಲಿಯ ಸೌಲಭ್ಯಗಳನ್ನು ಸರಿಯಾಗಿ ಸಂಯೋಜಿಸಿ ಅನುಷ್ಠಾನ ಮಾಡಿದಲ್ಲಿ ದೀರ್ಘಾವಧಿಯ ಪ್ರಯೋಜನೆ ಹಾಗೂ ಸುಸ್ಥಿರ ಅಭಿವೃದ್ಧಿಯ ಸಾಧ್ಯತೆ ಇದೆ.



ಪ್ರಶಸ್ತಿಯೊಂದಿಗೆ ಧಾರವಾಡ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಶಿಖಾ



ಸಂಯೋಜಿಸಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳಿಂದ ಗರಿಷ್ಠ ಪ್ರಮಾಣದ ಉತ್ಪಾದನೆ ಕೈಗೊಂಡು ಗ್ರಾಮೀಣ ಭಾಗದ ಜನರ ಜೀವನ ಮಟ್ಟವನ್ನು ಸುಧಾರಿಸಲು ಇರುವ ಅವಕಾಶ ಗಳನ್ನು ಗುರುತಿಸಿದೆ.

ಧಾರವಾಡ ಜಿಲ್ಲೆಯ ಕರ್ನಾಟಕದ ವಾಯುವ್ಯ ಭಾಗದಲ್ಲಿದ್ದು ಒಟ್ಟು 16.04 ಲಕ್ಷ ಜನಸಂಖ್ಯೆಯನ್ನು ಹೊಂದಿದೆ ಅದರಲ್ಲಿ 8.82 ಲಕ್ಷ ನಗರ ಪ್ರದೇಶದಲ್ಲಿ ಇದ್ದು ಇದರಿಂದ ಗ್ರಾಮೀಣ ಪ್ರದೇಶಕ್ಕಿಂತ ನಗರ ಪ್ರದೇಶದಲ್ಲಿಯೇ ಹೆಚ್ಚಿನ ಜನಸಂಖ್ಯೆ ಇರುತ್ತದೆ. 1.33 ಲಕ್ಷಗಳ ಗ್ರಾಮೀಣ ಕುಟುಂಬಗಳ ಪೈಕಿ 1 ಲಕ್ಷ ಕುಟುಂಬಗಳ ಒಟ್ಟು 2.80 ಲಕ್ಷ ಕೂಲಿಕಾರರು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೊಂದಾಯಿಸಿಕೊಂಡಿದ್ದು ಅವರೆಲ್ಲರಿಗೂ ಉದ್ಯೋಗ ಚೀಟಿ ನೀಡಲಾಗಿದೆ. ಕೆಲಸ ಕೇಳಿದ ಉದ್ಯೋಗ ಚೀಟಿ ಹೊಂದಿರುವ ಅಕುಶಲ ಕಾರ್ಮಿಕರಿಗೆ ಯೋಜನೆಯಡಿ ಉದ್ಯೋಗ ನೀಡಿ, ಜಿಲ್ಲೆಯಲ್ಲಿ ಡಿಸೆಂಬರ್–2009ರ ಅಂತ್ಯಕ್ಕೆ 18 ಲಕ್ಷ ಮಾನ್ಯ ಮಾನವ ದಿನಗಳನ್ನು ಸೃಜಿಸಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಶಾಸನವಾಗಿರುವುದರಿಂದ ಸಂಪನ್ಮೂಲಗಳ ಲಭ್ಯತೆಯ ಖಾತರಿ ಇದೆ. ಈ ಅಧಿನಿಯಮವು ಪಾರದರ್ಶಕತೆ ಹಾಗೂ ಉತ್ತರದಾಯಿತ್ವವನ್ನು ಕಾನೂನು ರೀತ್ಯ ಕಾಪಾಡಿಕೊಳ್ಳುತ್ತದೆ. ಅನಿರ್ಬಂದಿತ ಅನುದಾನ ಹಾಗೂ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಕೆಳ ಹಂತದಲ್ಲಿ ಜನರ ಬೇಡಿಕೆಗಳನ್ವಯ ಯೋಜನೆಯನ್ನು ತಯಾರಿಸಲು ಅವಕಾಶವಿದೆ.

ಧಾರವಾಡ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಇನ್ನುಳಿದ ಯೋಜನೆಗಳೊಂದಿಗೆ ಎರಡು ವಿಧದಲ್ಲಿ ಸಂಯೋಜಿಸ ಲಾಗಿದೆ.

1. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜನ ಕಲ್ಯಾಣ ಯೋಜನೆ ಗಳೊಂದಿಗೆ ಸಂಯೋಜನೆ.
2. ಸರ್ಕಾರದ ಇತರೇ ಅಭಿವೃದ್ಧಿ ಯೋಜನೆಗಳೊಂದಿಗೆ ಸಂಯೋಜನೆ.


ಧಾರವಾಡ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ತಂಡದ ಪರಿಕಲ್ಪನೆಯಂತೆ ಮೊದಲ ಹಂತವಾಗಿ ಎನ್.ಆರ್.ಇ.ಜಿ.ಎ. ಕಾಮಗಾರಿ ಸ್ಥಳಗಳನ್ನು ಕಲ್ಯಾಣ ಕೇಂದ್ರಗಳನ್ನಾಗಿ ಪರಿವರ್ತಿಸಿ, ಎಲ್ಲಾ ಅಭಿವೃದ್ಧಿ ಯೋಜನೆ ಹಾಗೂ ಅವುಗಳ ಮಾಹಿತಿಯನ್ನು ಕೂಲಿಕಾರರಿಗೆ ಕೆಲಸದ ಸ್ಥಳದಲ್ಲಿಯೇ ಕಲ್ಪಿಸುವುದು ಇಂತಹ ಮಾದರಿಯು ದೀರ್ಘಾವಧಿಯಲ್ಲಿ ಅತ್ಯಂತ ಬಡವ ಹಾಗೂ ಅರ್ಹ ಕೂಲಿಕಾರರ ಎಲ್ಲಾ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ನಿಸ್ಸಂಶಯವಾಗಿ ಅಭಿವೃದ್ಧಿ ಕಾಣಬಹುದು. ಕಾಮಗಾರಿ



ಸ್ಥಳವನ್ನೇ ಅನುಷ್ಠಾನ ಕೇಂದ್ರವಾಗಿ, ಯೋಜನೆಯ ಕೂಲಿಕಾರರನ್ನೇ ಫಲಾನುಭವಿಗಳಾಗಿ ಪರಿಗಣಿಸಿದಲ್ಲಿ ಕಲ್ಯಾಣ ಯೋಜನೆಗಳ ಲಾಭವನ್ನು ಅರ್ಹ ಕುಟುಂಬಗಳಿಗೆ ತಲುಪಿಸು ವುದನ್ನು ದೃಢಪಡಿಸಬಹುದಾಗಿದೆ.


ಈ ಕೆಳಗಿನ ಚಿತ್ರಣವು ಈಗಿರುವ ವ್ಯವಸ್ಥೆಯಲ್ಲಿ ಫಲಾನುಭವಿಗಳು ಸೌಲಭ್ಯಕ್ಕಾಗಿ ಸಂಪರ್ಕಿಸಬೇಕಾದ ಬೇರೆ ಬೇರೆ ಸಂಸ್ಥೆಗಳು/ ಇಲಾಖೆಗಳು/ಏಜೆನ್ಸಿಗಳು.

### ಚಾಲ್ತಿಯಲ್ಲಿರುವ ಸೇವಾ ಸೌಕರ್ಯಗಳ ನೀಡುವಿಕೆಯ ಚಿತ್ರಣ




ಹೊಸ ಪದ್ಧತಿಯಲ್ಲಿ ಸಂಬಂಧಿಸಿದ ಇಲಾಖೆಗಳು ತಮ್ಮ ತಮ್ಮ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳ ಸೌಲಭ್ಯಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಡೆಯುವ ಸ್ಥಳಗಳಲ್ಲಿ ಒದಗಿಸಬಹುದಾಗಿದೆ. ಈ ಮಾದರಿಯಿಂದ ಕಾರ್ಯಕ್ರಮಗಳ ಗರಿಷ್ಠ ಲಾಭವನ್ನು ಮುಟ್ಟಿಸುವುದರ ಜೊತೆಗೆ ಕಾರ್ಯಕ್ರಮದ ಮೂಲ ಉದ್ದೇಶವನ್ನು ತಲುಪಿಸಿದಂತಾಗುತ್ತದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಧಿನಿಯಮದಂತೆ ಕಾಮಗಾರಿಗಳ ಸ್ಥಳಗಳಲ್ಲಿ ಎಲ್ಲಾ ಸೌಲಭ್ಯಗಳನ್ನು ನೀಡಿದಂತಾಗುತ್ತದೆ.

### ಎನ್.ಆರ್.ಇ.ಜಿ.ಎ. ಕಾಮಗಾರಿ ಸ್ಥಳಗಳು ಕಲ್ಯಾಣ ಕಾರ್ಯಕ್ರಮಗಳಿಗೆ ಅನುಷ್ಠಾನ ಕೇಂದ್ರಗಳು



## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಸಂಯೋಜನೆ

1995 ರಿಂದ ಕೇಂದ್ರ ಪುರಸ್ಕೃತ ಯೋಜನೆಯಾದ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ ಪ್ರಾರಂಭವಾಗಿದ್ದು, ವಯಸ್ಕ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ನಿರ್ದಿಷ್ಟ ಪ್ರದೇಶಕ್ಕೆ ಕಾಲಮಿತಿಗೆ ಒಳಪಟ್ಟು ಸ್ವಯಂ ಸೇವಕರ ಮುಖಾಂತರ ಸಮುದಾಯ ಆಧಾರಿತ ಆಂದೋಲನಾ ಸ್ವರೂಪದ ಕಾರ್ಯಕ್ರಮವಾಗಿರುತ್ತದೆ. ಈ ಯೋಜನೆಯಲ್ಲಿ ನೇಮಿಸಲ್ಪಟ್ಟ ಪ್ರೇರಕರು ಹಾಗೂ ಉಪಪ್ರೇರಕರ ಅವಧಿಯು ಮಾರ್ಚ್ 2008 ರಂದು ಮುಕ್ತಾಯಗೊಂಡಿರುವುದರಿಂದ ಈ ಯೋಜನೆಯನ್ನು ಮುಂದುವರೆಸುವಲ್ಲಿ ಸಮಸ್ಯೆಯಾಗಿದೆ. ಇದರಿಂದಾಗಿ ಈ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಪ್ರೇರಕ ಹಾಗೂ ಉಪಪ್ರೇರಕರ ಗೌರವಧನ ಪಡೆಯಲು ಅರ್ಹರಿಲ್ಲದಿರುವುದರಿಂದ ಧಾರವಾಡ ಜಿಲ್ಲೆಯಲ್ಲಿ ಅಂತಹ 704 ಪ್ರೇರಕ ಹಾಗೂ ಉಪಪ್ರೇರಕರ ಪೈಕಿ ಕ್ರಿಯಾಶೀಲರನ್ನು



ಆಯ್ಕೆ ಮಾಡಿ ತರಬೇತಿಗೊಳಿಸಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ಮಿತ್ರರನ್ನಾಗಿ ಈ ಕೆಳಗಿನ ಉದ್ದೇಶಗಳಿಗಾಗಿ ನೇಮಿಸಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ.

ಅ) ಮುಂದುವರಿಕೆ ಶಿಕ್ಷಣ ಕೇಂದ್ರಗಳು ಮುಚ್ಚಿದ ನಂತರ ನಿರುದ್ಯೋಗಿಗಳಾದ ಪ್ರೇರಕ ಹಾಗೂ ಉಪಪ್ರೇರಕರನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ಮಿತ್ರರನ್ನಾಗಿ ನೇಮಿಸಲಾಗಿದೆ.

ಆ) ಈಗಾಗಲೇ ಸರಕಾರದ ಯೋಜನೆಯಲ್ಲಿ ಕೆಲಸ ಮಾಡಿ ಜನಸಂಪರ್ಕ ಹೊಂದಿದ ಪ್ರೇರಕ ಹಾಗೂ ಉಪ ಪ್ರೇರಕರನ್ನು ತರಬೇತಿಗೊಳಿಸಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ತೊಡಗಿಸಿಕೊಳ್ಳಲು ಸುಲಭವಾಗಿದೆ.

ಇ) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೆಲಸ ಮುಗಿದ ನಂತರ ಉದ್ಯೋಗ ಮಿತ್ರರು ಪ್ರೇರಕರಾಗಿ ಕೂಲಿಕಾರರಿಗೆ ಶಿಕ್ಷಣ ನೀಡುವದು.

ಈ) ಈ ವ್ಯವಸ್ಥೆಯಿಂದಾಗಿ ಎರಡು ಯೋಜನೆಗಳು ಪರಸ್ಪರ ಪೂರಕವಾಗಿವೆ.

- ಮುಂದುವರಿಕೆ ಶಿಕ್ಷಣದ ಕಲಿಕಾ ಸಾಮಗ್ರಿಗಳನ್ನು ಗ್ರಾಮ ಪಂಚಾಯತ್‌ಗಳಿಗೆ ಹಸ್ತಾಂತರಿಸಲಾಗಿದೆ.
- ಉದ್ಯೋಗ ಮಿತ್ರರಿಗೆ ಈ ಕೆಳಗಿನ ಹೆಚ್ಚುವರಿ ಜವಾಬ್ದಾರಿಯನ್ನು ವಹಿಸಲಾಗಿದೆ.
  1. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಕೆಲಸ ಮುಗಿದ ನಂತರ ಉದ್ಯೋಗ ಮಿತ್ರರು ಪ್ರೇರಕವಾಗಿ ಕೂಲಿಕಾರರಿಗೆ ಶಿಕ್ಷಣ ನೀಡುವುದು.
  2. ಅಧಿನಿಯಮದ ಬಗ್ಗೆ ತಿಳುವಳಿಕೆ ನೀಡುವುದು.
- 2009–10ನೇ ಸಾಲಿಗೆ 142 ಸಮುದಾಯ ಕಲಿಕೆ ಮತ್ತು ವೃತ್ತಿ ತರಬೇತಿ ಕೇಂದ್ರಗಳನ್ನು ವಿಶೇಷ ಅಭಿವೃದ್ಧಿ ಯೋಜನೆಯು ತಾಲ್ಲೂಕುಗಳಾದ ಕಲಘಟಗಿ, ನವಲಗುಂದ ಹಾಗೂ ಕುಂದಗೋಳದಲ್ಲಿ ಗುರುತಿಸಲಾಗಿದೆ.
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ಧಾರವಾಡ ಜಿಲ್ಲಾ ಸಾಕ್ಷರತಾ ಸಮಿತಿಯಿಂದ ಹೆಚ್ಚುವರಿ 121 ಕೇಂದ್ರಗಳನ್ನು ಮಂಜೂರಿಗಾಗಿ ಪ್ರಸ್ತಾವಿಸಲಾಗಿದೆ.

- ಈ ಹೆಚ್ಚುವರಿ ಕೇಂದ್ರಗಳು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ನಡೆಯುವ ಸ್ಥಳದಲ್ಲಿ ನಡೆಯಲಿದ್ದು, ಅಲ್ಲಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗ ಮಿತ್ರರು ಸಮುದಾಯ ಕಲಿಕಾ ಮತ್ತು ವೃತ್ತಿ ತರಬೇತಿ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಿರುತ್ತಾರೆ. ಇದಕ್ಕಾಗಿ ಅವರಿಗೆ ಪ್ರತಿ ತಿಂಗಳು ರೂ. 750/- ಗಳ ಗೌರವಧನ ನೀಡುತ್ತಿದ್ದು, ಕೆಲಸ ನಡೆಯುವ ಸ್ಥಳಗಳಲ್ಲಿ ಸಾಕ್ಷರತಾ ಕೇಂದ್ರವನ್ನು ನಡೆಸಲು ಉತ್ತೇಜನದಾಯಕವಾಗಿದೆ.
- 2009 ಡಿಸೆಂಬರ್ ಅಂತ್ಯದವರೆಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೋಂದಾಯಿಸಿಕೊಂಡ 5260 ಅನಕ್ಷರಸ್ಥ ಕೂಲಿಕಾರರನ್ನು ಸಾಕ್ಷರರನ್ನಾಗಿ ಮಾಡಲಾಗಿದೆ.
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೋಂದಾಯಿಸಿಕೊಳ್ಳದ ಅನಕ್ಷರಸ್ಥ ಕೂಲಿಕಾರರಿಗೆ ಸಮುದಾಯ ಕಲಿಕಾ ಹಾಗೂ ವೃತ್ತಿ ತರಬೇತಿ ಕೇಂದ್ರವು ಬಹಳ ಉಪಯುಕ್ತವಾಗಿದೆ. ಆದರೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನಕ್ಷರಸ್ಥ ಕೂಲಿಕಾರರಿಗೆ ಈ ಕೆಳಗಿನ ಕಾರಣಗಳಿಂದಾಗಿ ಸಮುದಾಯ ಕಲಿಕಾ ಹಾಗೂ ವೃತ್ತಿ ತರಬೇತಿ ಕೇಂದ್ರವು ಮಾದರಿಯಾಗಿದೆ.

  ಅ) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೆಲಸದಿಂದಾಗಿ ಕೂಲಿಕಾರರ ವಲಸೆ ಕಡಿಮೆಯಾಗಿ ಕಲಿಕಾ ಕೇಂದ್ರದಲ್ಲಿ ಹಾಜರಾತಿ ಉತ್ತಮವಾಗಿದೆ.





  ಬ) ಕೂಲಿಕಾರರ ಅನುಕೂಲಕ್ಕೆ ಅನುಗುಣವಾಗಿ ಕಲಿಕಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತೀರುವುದರಿಂದ ಕಲಿಕೆಗೆ ಹಾಜರಾಗುವಂತೆ ಮನ ಒಲಿಸಲು ಅನುಕೂಲವಾಗಿದೆ.

## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್‌ನೊಂದಿಗೆ ಸಂಯೋಜನೆ :

ಇದೊಂದು ಕೇಂದ್ರ ಸರ್ಕಾರ ಯೋಜನೆಯಾಗಿದ್ದು ದೇಶಾದ್ಯಂತ ಗ್ರಾಮೀಣ ಕುಟುಂಬಗಳಿಗೆ ಅತ್ಯಮೂಲ್ಯ ಆರೋಗ್ಯ ಸೇವೆಯನ್ನು ಕೊಡುವ ಮಹತ್ತರ ಗುರಿಯನ್ನು ಹೊಂದಿರುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವದು ಹಾಗೂ ಸುಧಾರಿತ ಆರೋಗ್ಯ ಸೇವೆಯನ್ನು ಮಹಿಳಾ ಆರೋಗ್ಯ ಕಾರ್ಯಕರ್ತೆ(ಆಶಾ) ಮುಖಾಂತರ ಗ್ರಾಮೀಣ ಕುಟುಂಬಗಳಿಗೆ ನೀಡುವ ಉದ್ದೇಶ ಹೊಂದಿದೆ.

ಧಾರವಾಡ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೊಂದಣಿಯಾದ 2.80 ಲಕ್ಷ ಕೂಲಿಕಾರರಲ್ಲಿ ಸುಮಾರು ಶೇ.45 ರಷ್ಟು ಮಹಿಳೆಯರಾಗಿರುತ್ತಾರೆ. ಕೆಲಸದಲ್ಲಿ ತೊಡಗಿರುವ ಒಟ್ಟು ಕೂಲಿಕಾರರಲ್ಲಿ ಮಹಿಳೆಯರ ಪಾಲು ಶೇ. 38 ರಷ್ಟು, ಜಿಲ್ಲೆಯಲ್ಲಿ ಡಿಸೆಂಬರ್-2009ರ ಅಂತ್ಯಕ್ಕೆ 18.00 ಲಕ್ಷ ಸೃಜಿಸಲಾದ ಮಾನವದಿನಗಳಲ್ಲಿ 6.80 ಲಕ್ಷ ಮಾನವದಿನಗಳಷ್ಟು ಮಹಿಳೆಯರು. ಇದನ್ನು ಗಮನಿಸಿದಾಗ ಇತರೇ ಸರ್ಕಾರದ ಯೋಜನೆಗಳೊಂದಿಗೆ ಹೋಲಿಸಿದಾಗ ಈ ಯೋಜನೆಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕೆಲಸದಲ್ಲಿ ತೊಡಗಿರುವುದು ಕಂಡು ಬರುತ್ತದೆ. ಆದ್ದರಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ



ಕಾಮಗಾರಿ ಸ್ಥಳಗಳು, ಮಹಿಳೆಯರು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ತಿಳುವಳಿಕೆ ಹಾಗೂ ಮಾಹಿತಿ ನೀಡಲು ಸೂಕ್ತ ಸ್ಥಳವಾಗಿವೆ.

ಪ್ರತಿ ವಾರ ಒಂದು ನಿಗದಿತ ದಿನದಂದು ಆರೋಗ್ಯ ಇಲಾಖೆಯ ಕಾರ್ಯಕರ್ತರು/ಆಶಾ ಇವರು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ನಡೆಯುವ ಸ್ಥಳಕ್ಕೆ ಬಂದು ನೈರ್ಮಲ್ಯ ಮತ್ತು ಸ್ವಚ್ಛತೆ, ಪೌಷ್ಠಿಕ ಆಹಾರ, ಶುದ್ಧ ಕುಡಿಯುವ ನೀರಿನ ಮಹತ್ವ, ಸರ್ಕಾರದ ವಿವಿಧ ಆರೋಗ್ಯ ಯೋಜನೆಗಳಾದ ಕುಟುಂಬ ಕಲ್ಯಾಣ, ಜನನಿ ಸುರಕ್ಷಾ, ಸುರಕ್ಷಿತ ಹೆರಿಗೆ, ಮಡಿಲು, ಕಾಲ ಕಾಲಕ್ಕೆ ಮಕ್ಕಳಿಗೆ ಹಾಕಬೇಕಾದ ಲಸಿಕೆಗಳು ಹಾಗೂ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ ಇತ್ಯಾದಿಗಳ ಬಗ್ಗೆ ಮಾಹಿತಿ ನೀಡುವುದು.

ಜಿಲ್ಲೆಯಲ್ಲಿ ಬಹಳಷ್ಟು ಹೆರಿಗೆ ವೇಳೆಯಲ್ಲಿ ಮಹಿಳೆಯರು ಸಾವನ್ನಪ್ಪಲು ಅನೇಮಿಯಾ ಕಾರಣವಾಗಿದ್ದು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಕೆಲಸದ ಸ್ಥಳಗಳಿಗೆ ಮಹಿಳಾ ಆರೋಗ್ಯ ಕಾರ್ಯಕರ್ತೆಯರು/ಆಶಾ ಭೇಟಿ ನೀಡಿ ಕಬ್ಬಿಣಾಂಶದ ಹಾಗೂ ಪೋಲಿಕ್ ಆಸಿಡ್ ಗುಳಿಗೆಗಳನ್ನು ಮಹಿಳಾ ಕೂಲಿಕಾರರಿಗೆ ಒದಗಿಸುವುದು.

ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ ವತಿಯಿಂದ ಉದ್ಯೋಗ ಮಿತ್ರರಿಗೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್‌ಯಡಿಯಲ್ಲಿ ವೈದ್ಯಕೀಯ ಪೆಟ್ಟಿಗೆಯನ್ನು ಪೂರೈಸಲಾಗಿದೆ, ಕಾಮಗಾರಿ ಸ್ಥಳಗಳಲ್ಲಿ ಸಣ್ಣ ಪುಟ್ಟ ಗಾಯವಾದಲ್ಲಿ ಉಪಚಾರ ಮಾಡಲು ತರಬೇತಿ ನೀಡಲಾಗಿದೆ, ಈ ಮಾದರಿಯನ್ನು ರಾಜ್ಯದ ಇತರೇ ಜಿಲ್ಲೆಗಳು ಅನುಸರಿಸಲು ರಾಜ್ಯ ಸರ್ಕಾರವು ನಿರ್ದೇಶನ ನೀಡಿರುತ್ತದೆ.

## ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ವಿಮಾ ಯೋಜನೆಯೊಂದಿಗೆ ಸಂಯೋಜನೆ.

1. ಭಾರತದಲ್ಲಿ ಗ್ರಾಮೀಣ ಕುಟುಂಬಗಳಿಗೆ ವಿಮಾ ಸೌಲಭ್ಯ ಅಷ್ಟೊಂದು ಪರಿಣಾಮಕಾರಿ ಯೋಜನೆ ಆಗಿಲ್ಲ. ಕಾರಣ ಈಗಾಗಲೇ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಗ್ರಾಮೀಣ ಕುಟುಂಬಗಳಿಗೆ ವಿಮೆ ಕಂತು ಹೆಚ್ಚಿನ ಭಾರವಾಗುವುದರಿಂದಲೇ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನೊಂದಾಯಿಸಿದ ಗ್ರಾಮೀಣ ಕೂಲಿಕಾರರನ್ನು ವಿಮೆ ಯೋಜನೆ ಅಡಿಯಲ್ಲಿ ಲಾಭ ಪಡೆಯುವಂತೆ ಮಾಡಲು ಗ್ರಾಮ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ತಂಡಗಳಿಂದ ಇದನ್ನು ಸವಾಲಾಗಿ ಸ್ವೀಕರಿಸಿ ವಿಮೆ ಯೋಜನೆಯನ್ನು ಅಳವಡಿಸಲಾಗುತ್ತಿದೆ.
2. ಎಲ್.ಐ.ಸಿ.ಯ ಆಮ್ ಆದ್ಮಿ ಮತ್ತು ಜನಶ್ರೀ ಭೀಮಾ ಯೋಜನಾ ಪಾಲಿಸಿಗಳ ಸ್ಕಾಲರ್‌ಶಿಪ್ ಯೋಜನೆಗಳಾಗಿದ್ದು, ಎನ್.ಆರ್.ಇ.ಜಿ.ಎ ಕೂಲಿಕಾರರ ಕುಟುಂಬಗಳ ಮಕ್ಕಳಿಗಾಗಿಯೇ ಹೊರಡಿಸಿದ್ದು, ಇಂತ ವಿಮೆ ಯೋಜನೆಗಳನ್ನು ಕೂಲಿಕಾರರ ಮಕ್ಕಳು 9 ರಿಂದ 12 ನೇ ತರಗತಿಯಲ್ಲಿ ಓದುತ್ತಿದ್ದರೆ, ಅಂತಹ ಮಕ್ಕಳಿಗೆ ತ್ರೈಮಾಸಿಕಕ್ಕೆ ರೂ.300/–ರಂತೆ ಅಂದರೆ ವರ್ಷಕ್ಕೆ ರೂ. 1200/–ಗಳನ್ನು ಸ್ಕಾಲರ್‌ಶಿಪ್ ಅವಕಾಶವಿದ್ದು, ಪ್ರತಿ ಕುಟುಂಬದ ಇಬ್ಬರು ಮಕ್ಕಳಿಗೆ ಈ ಸೌಲಭ್ಯ ಒದಗಿಸಲಾಗುತ್ತಿದೆ. ಈ ಯೋಜನೆಗಳಡಿ ಕೂಲಿಕಾರರು ಅಪಘಾತದಲ್ಲಿ ಮೃತಪಟ್ಟರೆ ರೂ. 75,000/–ಗಳ ವಿಮಾ ಸೌಲಭ್ಯ, ಸಾಮಾನ್ಯ ಸಾವಾಗಿದ್ದರೆ ರೂ. 30,000/–ಗಳನ್ನು, ಅಪಘಾತದಿಂದ ಅಂಗಹೀನತೆ ಆದಲ್ಲಿ ರೂ. 37,500/–ಗಳ ವಿಮಾ ಸೌಲಭ್ಯ ಒದಗಿಸಲಾಗುತ್ತಿದೆ.
3. ವಿಮಾ ಸಂಸ್ಥೆಯ ಸುತ್ತೋಲೆ ನಂ:ಪಿ&ಜಿ.ಎಸ್./ಜೆ.ಬಿವೈ. ದಿನಾಂಕ : 15–07–2008 ಎಲ್.ಐ.ಸಿ. ಪ್ರಕಾರ ಕೇಂದ್ರ ಸರ್ಕಾರದಿಂದ ಮಂಜೂರಾತಿ ಆದೇಶದ ಪ್ರಕಾರ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮೀಣ ಬಡ ಕೂಲಿಕಾರರ ಕುಟುಂಬಗಳನ್ನು ಜನಶ್ರೀ ಭೀಮಾ ಯೋಜನೆಯಡಿ ಯಲ್ಲಿ ಸೇರಿಸಿದ್ದು, ಜನಶ್ರೀ ಭೀಮಾ ಯೋಜನೆಯಡಿ ಹೆಸರು ನೊಂದಾಯಿಸಿದ ಕುಟುಂಬದ ಮುಖ್ಯಸ್ಥ ವಿಮೆ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.

4. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನೊಂದಾಯಿಸಿದ ಕೂಲಿಕಾರನು ಭೂರಹಿತ ಕಾರ್ಮಿಕನಾಗಿದ್ದರೆ, ಆಮ್ ಆದ್ಮಿ, ಭೀಮಾ ಯೋಜನೆಯಡಿಯಲ್ಲಿ ಅಳವಡಿಸ ಬಹುದಾಗಿದೆ. ಈ ವಿಮಾ ಯೋಜನೆಯ ಪೂರ್ಣ ವಿಮಾ ಕಂತು ರೂ.200/-ಗಳನ್ನು ಕೇಂದ್ರ ಸರ್ಕಾರದಿಂದಲೇ ಭರಿಸಲಿದ್ದು, ಈ ಹಣವನ್ನು ಎಲ್.ಐ.ಸಿ.ಯಲ್ಲಿರುವ ಸಾಮಾಜಿಕ ಭದ್ರತೆ ಅನುದಾನ ದಿಂದ ಭರಿಸುತ್ತಿದ್ದು, ಇನ್ನುಳಿದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿಕಾರರನ್ನು ಜನಶ್ರೀ ಭೀಮಾ ಯೋಜನೆಯಡಿಯಲ್ಲಿ ಅಳವಡಿಸಿದ್ದು, ವಿಮೆ ಕಂತಿನ ಶೇ. 50 ರಷ್ಟನ್ನು ಕೇಂದ್ರ ಸರ್ಕಾರ ಇನ್ನುಳಿದ ಶೇ. 50ರಷ್ಟನ್ನು ಅಂದರೆ ರೂ.100/-ಗಳನ್ನು ಫಲಾನುಭವಿಗಳು ಭರಿಸಬೇಕು. ಧಾರವಾಡ ಜಿಲ್ಲೆಯಲ್ಲಿ ಡಿಸೆಂಬರ್ 2009ರ ಅಂತ್ಯಕ್ಕೆ ಒಟ್ಟು 7874 ಕೂಲಿಕಾರರನ್ನು ಆಮ್‌ಆದ್ಮಿ ಮತ್ತು ಜನಶ್ರೀ ಭೀಮಾ ಯೋಜನೆಯಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕ ಪಂಚಾಯತಿಗಳ ಪ್ರಯತ್ನದಿಂದ ನೊಂದಾಯಿಸ ಲಾಗಿದೆ. ಡಿಸೆಂಬರ್ 2010ರೊಳಗಾಗಿ ಜಿಲ್ಲೆಯಲ್ಲಿ ಕನಿಷ್ಠ 25000 ಕುಟುಂಬಗಳನ್ನು ಈ ವಿಮಾ ಯೋಜನೆಗಳಡಿ ಯಲ್ಲಿ ನೊಂದಾಯಿಸುವ ಗುರಿಯನ್ನು ಹೊಂದಲಾಗಿದೆ.

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಬ್ಯಾಂಕಿಂಗ್ ವಲಯದ ಆರ್ಥಿಕ ಸೇರ್ಪಡೆಯೊಂದಿಗೆ ಸಂಯೋಜಿಸಿಕೊಂಡಿರುವ ಬಗ್ಗೆ.**

1. ಆರ್ಥಿಕ ಸೇರ್ಪಡೆಯೆಂದರೆ ಅತ್ಯಂತ ಕಡಿಮೆ ಖರ್ಚಿನಲ್ಲಿ ಬ್ಯಾಂಕಿನ ಸೇವೆಯನ್ನು ಅಲಕ್ಷಿತ, ಕಡಿಮೆ ಆದಾಯ ದವರಿಗೆ ಒದಗಿಸಬಹುದಾಗಿದೆ, ಮಹಾತ್ಮಗಾಂಧಿ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಜಾರಿಗೆ ಬಂದ ನಂತರ ಹಣ ಪಾವತಿಸಲು ಬ್ಯಾಂಕಿನಲ್ಲಿ ಖಾತೆ ತೆರೆಯುವದು ಅವಶ್ಯವಾಗಿರುವುದರಿಂದ ಬ್ಯಾಂಕ್ ಖಾತೆ ಹೊಂದಿದವರ ಸಂಖ್ಯೆ ಹೆಚ್ಚಿದೆ. 2008-09ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿಯೇ 83997 ಬ್ಯಾಂಕ್/ ಅಂಚೆ ಕಛೇರಿ ಖಾತೆಗಳನ್ನು ತೆರೆಯಲಾಗಿದೆ. ಕೂಲಿಕಾರರಿಗೆ ಕಾಮಗಾರಿ ಸ್ಥಳದಲ್ಲಿಯೇ ಕೂಲಿ ಹಣ ಪಾವತಿಯಾಗುವಂತೆ ಮಾಡುವದು ಮುಂದಿನ ಹೆಜ್ಜೆಯಾಗಿದೆ.

2. ಧಾರವಾಡ ಜಿಲ್ಲೆಯಲ್ಲಿ "ಒಂದು ಜಿಲ್ಲೆ ಒಂದು ಬ್ಯಾಂಕ್" ಮಾದರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. AXIS ಬ್ಯಾಂಕಿನ ತಾಂತ್ರಿಕ ಸೇವಾ ಸಹಕಾರದಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿಕಾರರಿಗೆ ಮಾಹಿತಿ ತಂತ್ರಜ್ಞಾನ ಆಧಾರಿತ Biometric Card ಮುಖಾಂತರ ಕೂಲಿ ಸಂದಾಯಗಳನ್ನು ಪ್ರತಿವಾರ ನಿಗದಿತ ದಿನದಂದು ಕೂಲಿಕಾರರಿಗೆ ಕೂಲಿಯನ್ನು ಕಾಮಗಾರಿ ಸ್ಥಳದಲ್ಲಿಯೇ ಪಾವತಿ ವ್ಯವಸ್ಥೆ ಮಾಡಲಾಗುತ್ತಿದೆ. ಈ ವ್ಯವಸ್ಥೆಯಿಂದ ಕೂಲಿಕಾರರು ಕೂಲಿ ಹಣ ತೆಗೆಯಲು ಪ್ರತಿವಾರ ಬ್ಯಾಂಕಿಗೆ ಹೋಗುವುದನ್ನು ತಪ್ಪಿಸಿದಂತಾಗುತ್ತದೆ.

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಇನ್ನುಳಿದ ಅಭಿವೃದ್ಧಿ ಯೋಜನೆಗಳ ಜೊತೆ ಸಂಯೋಜನೆ ಗೊಳಿಸುವುದು.**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಇನ್ನುಳಿದ ಅಭಿವೃದ್ಧಿ ಯೋಜನೆಗಳ

ಜೊತೆಗೆ ಸಂಯೋಜಿಸಿಕೊಂಡು ಅನುಷ್ಠಾನ ಮಾಡಿದಲ್ಲಿ ಗ್ರಾಮೀಣ ಕುಟುಂಬಗಳ ಜೀವನಕ್ಕೆ ಭದ್ರತೆಯನ್ನು ವಿಸ್ತರಿಸಬಹುದು. ಅಂತರ ವಲಯ ಯೋಜನೆಗಳನ್ನು ಸಂಯೋಜಿಸಿದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಚೆನ್ನಾಗಿ ಯೋಜಿಸಿ, ಪರಿಣಾಮಕಾರಿಯಾಗಿ ಬಂಡವಾಳ ಹೂಡಬಹುದು. ಸರ್ಕಾರದ ವಿವಿಧ ಯೋಜನೆಗಳೊಂದಿಗೆ ಸಂಯೋಜಿಸುವುದರಿಂದ ಯೋಜನಾ ಪ್ರಕ್ರಿಯೆ ಮತ್ತು ಅನುಷ್ಠಾನ ಉತ್ತಮಪಡಿಸಬಹುದು.

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಂಯೋಜನೆಯಿಂದ ಆಗುವ ಲಾಭಗಳು.**

1. ಎಲ್ಲ ಮಳೆ ಆಶ್ರಿತ ಜಲಾನಯನ ಅಭಿವೃದ್ಧಿ, ನೀರಾವರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, ಗ್ರಾಮೀಣ ಸರ್ವಋತು ಸಂಪರ್ಕ ರಸ್ತೆಗಳನ್ನು ನಿರ್ಮಿಸಬಹುದು.
2. ಅನಿರ್ಬಂಧಿತ ಅನುದಾನ ಲಭ್ಯವಾಗುತ್ತದೆ.
3. ವಿಕೇಂದ್ರೀಕೃತ ಯೋಜನೆಯಿಂದ ತಳಮಟ್ಟದ ಅವಶ್ಯಕತೆ ನಿರ್ಧರಿಸಬಹುದು ಹಾಗೂ ಯೋಜನೆಗಳಲ್ಲಿ ಆಸಕ್ತಿ ವಹಿಸಬಹುದು.
4. ಅಧಿನಿಯಮದ ರಕ್ಷಣೆಯು ಸಿಗುತ್ತದೆ.
5. ಸರಿಯಾದ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯಿಂದ ಸುಸ್ಥಿರ ಅಭಿವೃದ್ಧಿಗೆ ಪ್ರೋತ್ಸಾಹ ನೀಡಬಹುದು.
6. ಈ ಕೆಳಗಿನ ವ್ಯಕ್ತಿ/ಸಂಸ್ಥೆಗಳ ನೆರವಿನೊಂದಿಗೆ ಬಂಡವಾಳ ಹಾಗೂ ಮಾನವ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಬಹುದು.
    1. ಜನಪ್ರತಿನಿಧಿಗಳು
    2. ಸರಕಾರಿ ಸಿಬ್ಬಂದಿ/ಅಧಿಕಾರಿಗಳು
    3. ಇತರೇ ಬ್ಯಾಂಕ್/ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವ.

**ಸಂಯೋಜನೆಯ ಅಳತೆಗೋಲು**

ಸಂಯೋಜನೆಗೆ ಗುರುತಿಸಿದ ಕೆಲಸಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಮಿತಿಯಲ್ಲಿಯೇ ಯೋಜಿಸಿ ಅನುಷ್ಠಾನ ಗೊಳಿಸಬಹುದು.

1. ಸಾಮಗ್ರಿ ವೆಚ್ಚ, ಕುಶಲಕರ್ಮಿ, ಅರೆಕುಶಲ ಕೂಲಿಯು ಸೇರಿದ ಒಟ್ಟು ಯೋಜನಾ ವೆಚ್ಚ ಶೇ.40 ರಷ್ಟು ಮೀರುವುದಿಲ್ಲ.
2. ಸಾಧ್ಯವಾದಷ್ಟು ಯೋಜನೆಗಳನ್ನು ಯಂತ್ರವಿಲ್ಲದೇ ಪೂರ್ಣ ಕೂಲಿ ಆಧಾರದ ಮೇಲೆ ಮುಗಿಸಬಹುದು.
3. ಯಾವುದೇ ಗುತ್ತಿಗೆದಾರರ ಅವಶ್ಯಕತೆ ಇಲ್ಲ.

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ ಯೋಜನೆಯಡಿ ಸಮನ್ವಯಗೊಳಿಸುವುದು.**

1. ಧಾರವಾಡ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 7500 ಎಕರೆ ಉಪಯೋಗಿಸದೇ ಇರುವ ಭೂಮಿಯಲ್ಲಿ ಮಾವು ಸಸಿಗಳನ್ನು ಬೆಳೆಸಿದ್ದು, ಮುಂಬರುವ ದಿನಗಳಲ್ಲಿ ಹೆಚ್ಚಿನ ಮಾವಿನ ಬೆಳೆ ನಿರೀಕ್ಷಿತ ಮಾವಿನ ಹಣ್ಣು ಸಂಸ್ಕರಣಾ ಘಟಕವನ್ನು ಕಲಘಟಗಿ ತಾಲ್ಲೂಕಿನಲ್ಲಿ ವಿಶೇಷ ಎಸ್.ಜಿ.ಎಸ್.ವೈ.ಯಡಿ ಪ್ರಾರಂಭಿಸಲು ಯೋಜಿಸ ಲಾಗಿದೆ. ಈ ಮೊದಲು ಯೋಜಿಸಿದ್ದ ರಾಷ್ಟ್ರೋತ್ಥಾನ ವಿಶೇಷ ಅಭಿವೃದ್ಧಿ ಯೋಜನೆಯಡಿ ಬೈಫ್ ಸ್ವಯಂ ಸೇವಾ ಸಂಸ್ಥೆಯ ಸಹಯೋಗದೊಂದಿಗೆ ಹತ್ತಿ ಸಂಸ್ಕರಣಾ ಘಟಕ(ಜಿನ್ನಿಂಗ್‌ಫ್ಯಾಕ್ಟರಿ)ದ ಯೋಜನೆಯನ್ನು ಹತ್ತಿ ಬೆಳೆಯುವ ಕ್ಷೇತ್ರ ಕಡಿಮೆಯಾಗಿರುವುದರಿಂದ ಬದಲಾವಣೆ ಮಾಡಿ ಮಾವು ಸಂಸ್ಕರಣಾ ಘಟಕ ಪ್ರಾರಂಭಿಸಲು ನಿರ್ಧರಿಸಲಾಗಿದೆ.
2. ತೋಟಗಾರಿಕಾ ಉತ್ಪನ್ನಗಳನ್ನು ಸಂಸ್ಕರಿಸುವುದರಿಂದ ಹೆಚ್ಚಿನ ಉದ್ಯೋಗವಕಾಶ, ಉತ್ಪನ್ನಗಳ ಮೌಲ್ಯವರ್ಧನೆ ಯೊಂದಿಗೆ ಸ್ಥಳೀಯ ಜನರ ಸುಸ್ಥಿರ ಅಭಿವೃದ್ಧಿಯಾಗುತ್ತದೆ ಹಾಗೂ ತೋಟಗಾರಿಕಾ ಉತ್ಪನ್ನ/ಬೆಳೆಗಳಿಗೆ ಮಾರಾಟ ಸೌಲಭ್ಯ ದೊರೆಯುತ್ತದೆ.

ಈ ಯೋಜನೆಯಡಿಯಲ್ಲಿಯ ತೋಟಗಾರಿಕೆ ಉತ್ಪನ್ನಗಳಿಗೆ ಹೆಚ್ಚಿನ ಮಾರಾಟ ಸೌಲಭ್ಯ ಒದಗಿಸಲು ಎಸ್.ಜಿ.ಎಸ್.ವೈ. ಯಡಿ ಜಿಲ್ಲಾ ಹಾಥ್, ಗ್ರಾಮೀಣ ಹಾಥ ಸ್ಥಾಪಿಸಲು ಯೋಜಿಸಿದೆ.

❑

# ಬಾವಿಯಲ್ಲಿ ನೀರು ಬಂದಾಗ

ಹಣಬರಹಟ್ಟಿ ಗ್ರಾಮ ಪಂಚಾಯತಿಯು ಬೈಲಹೊಂಗಲ ತಾಲ್ಲೂಕ ಬೆಳಗಾವಿ ಜಿಲ್ಲೆಯ ವ್ಯಾಪ್ತಿಗೆ ಬರುತ್ತದೆ. ಈ ಗ್ರಾಮದ ವ್ಯಾಪ್ತಿಗೆ ಬರುವ ಹೆಚ್ಚಿನ ಜನರು ಕೂಲಿ ಕಾರ್ಮಿಕರಾಗಿದ್ದಾರೆ. ಹಾಗೂ ಹೆಚ್ಚಿನ ರೈತರು ಒಣ ಬೇಸಾಯ ಹೊಂದಿದ್ದಾರೆ. ರೈತರು ಕೂರಿಗೆ ಲೆಕ್ಕದಲ್ಲಿ ಭೂಮಿ ಹೊಂದಿದ್ದಾರೆ. ಆದರೂ ಉತ್ಪನ್ನ ಮಾತ್ರ ಸ್ವಲ್ಪ ಬರುತ್ತಿತ್ತು. ಮಳೆ ಆಧಾರಿತ ಬೆಳೆಗಳಾದ ತಂಬಾಕು, ತೊಗರಿ, ಹೆಸರು ಇಂತಹ ಬೆಳೆಗಳನ್ನು ಬೆಳೆದು ಜೀವನ ಸಾಗಿಸುತ್ತಿದ್ದರು.

ಈ ಗ್ರಾಮದ ರೈತರಲ್ಲಿ ನೀರಿನ ವ್ಯವಸ್ಥೆ ಮಾಡಿಕೊಳ್ಳಲು ಹವಣಿಸುತ್ತಿದ್ದರು. ಆದರೆ ಅವರಿಗೆ ಸಾಧ್ಯವಾಗಿರಲಿಲ್ಲ. ಕಾರಣ ಬಡತನ, ಸಾಲದ ಬಾಧೆ ಕಾಡುತ್ತಿತ್ತು. ಬೈಲಹೊಂಗಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹಣಬರಹಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಡುಬಡವರ ಸಂಖ್ಯೆ ಹೆಚ್ಚಿನದಾಗಿ ಕಂಡು ಬರುತ್ತದೆ. ಇದು ಬೆಳಗಾವಿ ನಗರಕ್ಕೆ ಸ್ವಲ್ಪ ಸಮೀಪದ ಲ್ಲಿರುತ್ತದೆ. ಇಲ್ಲಿನ ಕೂಲಿ ಕಾರ್ಮಿಕರು ಕೂಲಿ ಸಿಗದೆ ಅವರ ಕೆಲಸಕ್ಕಾಗಿ ಬೆಳಗಾವಿ ನಗರಕ್ಕೆ ಹೋಗುವದು ರೂಢಿಯಲ್ಲಿತ್ತು.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಜಾರಿಯಾದ ನಂತರ ಇಲ್ಲಿನ ರೈತರು ಮತ್ತು ಕೂಲಿ ಕಾರ್ಮಿಕರು ದುಡಿಯಲು ತುಂಬಾ ಆಸಕ್ತರಾಗಿದ್ದರು. ಕೂಲಿ ಕಾರ್ಮಿಕರು 100 ದಿನವಲ್ಲ; ಒಂದು ವರ್ಷದವರೆಗೆ ಕೆಲಸ ನಿರ್ವಹಿಸಲು ಸಿದ್ಧರಿದ್ದರು. ಅಲ್ಲಿನ ರೈತರು ಒಣ ಬೇಸಾಯ ಅವಲಂಬಿತರಾಗಿದ್ದರು. ಈ ಸಮಯದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಪ್ರಾರಂಭವಾದ ನಂತರ ಯೋಜನೆಯಿಂದ ರೈತರ ಹೊಲಗಳಲ್ಲಿ ಅಲ್ಪ ಆಳದ ಬಾವಿ ನಿರ್ಮಾಣ ಮಾಡಿಕೊಳ್ಳಲು ಸಾಧ್ಯವಿದೆ ಎಂದು ರೈತರಿಗೆ ತಿಳಿದುಬಂದಿತು.

ಗ್ರಾಮ ಪಂಚಾಯತಿಯು ಗ್ರಾಮ ಸಭೆಯನ್ನು ಕರೆದು ಕಾಮಗಾರಿ ಗುಚ್ಛದ ವಿವರಣೆ ನೀಡಿದರು. ಅದರಲ್ಲಿ ದೊಡ್ಡಬಾಳಪ್ಪ ಜಿನ್ನಪ್ಪ ಬಿಲ್ ಎಂಬುವರ ಹೊಲದಲ್ಲಿ ಅಲ್ಪ ಆಳದ ಬಾವಿ ತೆಗೆಯುವ ಕಾಮಗಾರಿ ಆಯ್ಕೆ ಮಾಡಿದರು. ನಂತರ 35000 ರೂ. ಗಳಿಗೆ ತಾಂತ್ರಿಕ ಮಂಜೂರಾತಿ ಮತ್ತು ಆಡಳಿತಾತ್ಮಕ ಮಂಜೂರಾತಿ ಪಡೆದುಕೊಂಡರು. ಗ್ರಾಮದ ಕೂಲಿಕಾರರು ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದರು. ಎಲ್ಲ ಕೂಲಿ ಕಾರ್ಮಿಕರು ಸೇರಿ ಬಾವಿಯನ್ನು ತೆಗೆಯುವ ಸಂದರ್ಭದಲ್ಲಿ ಸ್ವಲ್ಪ ನೀರು ಬಂದಾಗ ರೈತನ ಮತ್ತು ಕೂಲಿ ಕಾರ್ಮಿಕರ ಮುಖದಲ್ಲಿ ಸಂತೋಷ ನಗೆ ಕಂಡು ಬಂತು. ನಂತರ ಪೂರ್ಣವಾಗಿ ಅಗೆದ ಮೇಲೆ ಆ ರೈತನ ಹೊಲಕ್ಕೆ ಸಾಕಾಗ ವಷ್ಟು ನೀರು ಬಂದಿದ್ದು ಸಂತೋಷ ವಾಯಿತು.



ಈಗ ರೈತನು ತನ್ನ ಹೊಲದಲ್ಲಿ ಕಬ್ಬು, ಗೋವಿನಜೋಳ, ತರಕಾರಿ ಬೆಳೆಯನ್ನು ಬೆಳೆದು ಆರ್ಥಿಕ ಸ್ವಾವಲಂಬಿ ಯಾಗಿದ್ದಾನೆ. ಕೂಲಿಗೆ ಬಂದಿದ್ದ ಕಾರ್ಮಿಕರಲ್ಲಿ ಉತ್ಸಾಹವೆ ಹೊರಹೊಮ್ಮಿತು. ನಾವೆಲ್ಲರೂ ನಮ್ಮ ನಮ್ಮ ಹೊಲಗಳಲ್ಲಿ ಅಲ್ಪ ಆಳದ ಬಾವಿಯನ್ನು

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾಗಿದ್ದು ಗ್ರಾಮೀಣರಿಗೆ ವರ್ಷಕ್ಕೆ ನೂರು ದಿನ ಉದ್ಯೋಗ ನೀಡುವುದರ ಮೂಲಕ ಅವರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ನೆರವಾಗಿದೆ.



ದೊಡ್ಡಬಾಳಪ್ಪ ಬಿಲ್ ಹೊಲದಲ್ಲಿ ನಿರ್ಮಿಸಿರುವ ಅಲ್ಪ ಆಳದ ಬಾವಿಯಲ್ಲಿ ಸಂಗ್ರಹವಾದ ನೀರಿನಿಂದ ಬೆಳೆದ ಬೆಳೆಯನ್ನು ವೀಕ್ಷಿಸುತ್ತಿರುವ ರೈತ.

ತೆಗೆಯೋಣ ಅಂತಾ ಮಾತನಾಡಿ ಕೊಂಡರು.

1. **ರೈತನ ಪ್ರತಿಕ್ರಿಯೆ :** ಬರಡು ಭೂಮಿಯಲ್ಲಿ ಬಂಗಾರ ಬೆಳೆದಂತಾಯಿತು ಎಂದರು.
2. **ಜನಪ್ರತಿನಿಧಿಗಳ ಪ್ರತಿಕ್ರಿಯೆ:** ರೈತರಿಗೆ ಈ ಯೋಜನೆ ಯಿಂದ ಬಹಳ ಅನೂಕೂಲವಾಗಿದ್ದು ಎಲ್ಲ ಜನರಿಗೂ ಹಿಂಗ ಸಹಾಯ ಮಾಡತಿವಿ ಎಂದು ಜನಪ್ರತಿನಿಧಿಗಳು ಮಾತನಾಡಿಕೊಂಡರು.
3. ರೈತನಿಗೆ ಆರ್ಥಿಕ ಅಭಿವೃದ್ಧಿ ಹೊಂದಲು ಈ ಯೊಜನೆ ಪೂರಕವಾಗಿದೆ.
4. ಕೂಲಿ ಕಾರ್ಮಿಕರಿಗೆ ಆರ್ಥಿಕವಾಗಿ ಸಹಾಯವಾಗಿದೆ.

ಹಣಬರಹಟ್ಟಿ ಗ್ರಾಮದ ದೊಡ್ಡಬಾಳಪ್ಪ ಜಿನ್ನಪ್ಪ ಬಿಲ್ ಹೋಲದಲ್ಲಿ ಅಲ್ಪ ಆಳದ ಬಾವಿ ನಿರ್ಮಾಣ ಮಾಡುದಕ್ಕಿಂತ ಮುಂಚೆ ರೈತನ ಆರ್ಥಿಕ ಪರಿಸ್ಥಿತಿ ತೀರಾ ಕಡಿಮೆ ಇತ್ತು. ಈ ಕಾಮಗಾರಿ ಮಾಡಿದ ನಂತರ ಆ ರೈತನ ಕುಟುಂಬ ಆರ್ಥಿಕವಾಗಿ ಸಾವಲಂಬಿಯಾಗಿ ಬಾಳಲು ಈ ಯೋಜನೆ ಸಹಾಯಕವಾಗಿದೆ.


## ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು

ಕರ್ನಾಟಕದ ಗಡಿಭಾಗದಲ್ಲಿರುವ ಬೆಳಗಾವಿ ಜಿಲ್ಲೆ. ವಿಶ್ವದಲ್ಲಿಯೇ ಕರದಂಟಿಗೆ ಹೆಸರುವಾಸಿಯಾದ ತಾಲ್ಲೂಕು ಗೋಕಾಕ. ತವಗ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಬರುವ 5 ಗ್ರಾಮಗಳಲ್ಲಿ ಕನಸಗೇರಿ ಒಂದು. ಈ ಗ್ರಾಮ ಜಿಲ್ಲಾ ಕೇಂದ್ರ ಬೆಳಗಾವಿಯಿಂದ 60 ಕಿ.ಮಿ ದೂರದಲ್ಲಿದ್ದು. ತಾಲ್ಲೂಕು ಕೇಂದ್ರ ಗೋಕಾಕದಿಂದ 15 ಕಿ.ಮಿ. ದೂರದಲ್ಲಿರುವ ಒಂದು ಪುಟ್ಟ ಗ್ರಾಮ ಕನಸಗೇರಿ.

ಸದರಿ ಗ್ರಾಮದಲ್ಲಿ ಕೆಂಪು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿದ್ದು ಗ್ರಾಮದ ಸುತ್ತಲೂ ಗುಡ್ಡಗಾಡು ಪ್ರದೇಶ ಹೊಂದಿದೆ. ಇಲ್ಲಿನ ಜನರ ಮುಖ್ಯ ಕಸಬು ಕೃಷಿಯಾಗಿರುತ್ತದೆ. ಈ ಗ್ರಾಮದಲ್ಲಿ ಕೃಷಿ ಆಧಾರಿತ ಕೂಲಿಕಾರರ ಸಂಖ್ಯೆ ಹೆಚ್ಚಾಗಿರುತ್ತದೆ. ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳಾದ ಶಾಲೆ, ಅಂಗನವಾಡಿ ಸೌಕರ್ಯಗಳು ಇದ್ದು. ಇವುಗಳಿಗೆ ಪೂರಕವಾದ ಸೌಕರ್ಯಗಳಾದ ಶಾಲಾ ಆಟದ ಮೈದಾನ, ಕಾಂಪೌಂಡ್, ನೀರಿನ ಸೌಲಭ್ಯ ಹೀಗೆ ಇನ್ನಿತರ ಸೌಕರ್ಯ ಗಳಿಂದ ವಂಚಿತವಾಗಿದೆ.

ತವಗ ಗ್ರಾಮ ಪಂಚಾಯತಿಯು ಸ್ವಂತ ಕಟ್ಟಡ ಹೊಂದಿದ್ದು. ವಿದ್ಯುತ್ ಮತ್ತು ಗಣಕಯಂತ್ರ ಹಾಗೂ ಅಂತರಜಾಲದ ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ಗ್ರಾಮ ಪಂಚಾಯತಿಯಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 1500 ಕುಟುಂಬಗಳು ನೊಂದಾಯಿಸಿಕೊಂಡಿರುತ್ತಾರೆ.

ಕನಸಗೇರಿ ಗ್ರಾಮದಲ್ಲಿ 512 ಕುಟುಂಬಗಳು ಈ ಯೋಜನೆಯಡಿಯಲ್ಲಿ ನೊಂದಾಯಿಸಿಕೊಂಡಿರುತ್ತವೆ. ಪ್ರಸ್ತುತ ಗ್ರಾಮದಲ್ಲಿ ಒಂದು ಕಿರಿಯ ಪ್ರಾಥಮಿಕ ಪಾಠ ಶಾಲೆಯಿದ್ದು. ಈ ಪಾಠ ಶಾಲೆಗೆ ಸುಮಾರು 3 ಎಕರೆ ವಿಶಾಲವಾದ ಆಟದ ಮೈದಾನವಿರುತ್ತದೆ.



ಕೆಲಸಕ್ಕೆ ಬಂದ ಕಾರ್ಮಿಕರು ಮತ್ತು ಕಾರ್ಯದರ್ಶಿಯವರು ಕಾಮಗಾರಿಯನ್ನು ಪೂಜೆ ಮಾಡುವರೊಂದಿಗೆ ಪ್ರಾರಂಭಿಸುತ್ತಿರುವುದು.




**ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಮತ್ತು ಕಾಮಗಾರಿ ಪರಿಶೀಲನೆಗೆ ಬಂದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಅಧಿಕಾರಿಗಳ ತಂಡ**

ಈ ಶಾಲಾ ಆವರಣವು ಕಲ್ಲು, ಮುಳ್ಳು, ತಗ್ಗು ದಿನ್ನೆಗಳಿಂದ ಕೂಡಿದ್ದು. ಮಕ್ಕಳಿಗೆ ಆಟವಾಡಲು ಅನುಕೂಲಕರವಾಗಿರುವದಿಲ್ಲ. ಅಲ್ಲದೆ ಶಾಲೆಗೆ ಕಾಂಪೌಂಡ್ ಇಲ್ಲದೆ ಮಕ್ಕಳಿಗೆ ಮತ್ತು ಶಾಲೆಗೆ ರಕ್ಷಣೆ ಇಲ್ಲದಂತಾಗಿತ್ತು.

ಈ ಸಮಸ್ಯೆಗಳನ್ನು ನಿವಾರಿಸಲು ಗ್ರಾಮಸ್ಥರು ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರು. ಯಾವುದೆ ಪ್ರಯೋಜನವಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಎಂಬ ಮಹತ್ವಾಕಾಂಕ್ಷೆ ಯೋಜನೆಯಡಿಯಲ್ಲಿ ಯಾವ ಕೆಲಸ ತಗೆದು ಕೊಳ್ಳಬಹುದು ಮತ್ತು ಕೂಲಿಯ ಬಗ್ಗೆ ವಿವರವಾಗಿ ಜನರಿಗೆ ಉನ್ನತ ಅಧಿಕಾರಿಗಳು ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆ ಸಂಯೋಜಕರು ಕಾರ್ಯದರ್ಶಿಗಳು ಕನಸಗೇರಿ ಗ್ರಾಮದ ಮತ್ತು ಎಲ್ಲ ಗ್ರಾಮಸ್ಥರು ಗ್ರಾಮಸಭೆಯ ಮೂಲಕ ಈ ಮಾಹಿತಿಯನ್ನು ನೀಡಿದರು. ಅದರಂತೆ ಗ್ರಾಮ ಸಭೆಯಲ್ಲಿ ಕಾಮಗಾರಿಯನ್ನು ಸೂಚಿಸಿದರು.ಈ ಕಾಮಗಾರಿಯನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆಯ್ಕೆಯಾದ ಕಾಮಗಾರಿಗೆ ನಿಯಮಾನುಸಾರ 4.00 ಲಕ್ಷ ತಾಂತ್ರಿಕ ಮಂಜೂರಾತಿ ಮತ್ತು ಆಡಳಿತಾತ್ಮಕ ಮಂಜೂರಾತಿ ಪಡೆದುಕೊಂಡರು.

ಆ ಸಮಯದಲ್ಲಿ 62 ಕುಟುಂಬಗಳು ಉದ್ಯೋಗ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಸಲ್ಲಿಸಿದ ಕುಟುಂಬಗಳಿಗೆ ಈ ಕಾಮಗಾರಿಯಲ್ಲಿ ಉದ್ಯೋಗ ನೀಡಿ ಕಾಮಗಾರಿಯನ್ನು ಪ್ರಾರಂಭಿಸಿದರು. 62 ಕಟುಂಬಗಳ ಸದಸ್ಯರುಗಳು ನಿರಂತರವಾಗಿ ಕೂಲಿ ಕೆಲಸವನ್ನು ನಿರ್ವಹಿಸಿದರು. ಅದರಲ್ಲಿ 27 ಕುಟುಂಬಗಳು 100 ದಿನಗಳ ಪೂರ್ಣ ಕೆಲಸವನ್ನು ನಿರ್ವಹಿಸಿದರು.

ಈ ಕಾಮಗಾರಿ ನಿರ್ವಹಿಸಿದ್ದರಿಂದ ಮಕ್ಕಳಿಗೆ ತುಂಬಾ ಸಂತೋಷವಾಗಿದ್ದು ಮಾತ್ರ ಸತ್ಯ. ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಬರುತ್ತಿದ್ದಾರೆ ಹಾಗೂ ಆಸಕ್ತಿಯಿಂದ ಆಟೋಟಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

1. ಮಕ್ಕಳ ಅನಿಸಿಕೆ : ಮೊದಲ ನಮಗ ಆಟ ಆಡೋಕೆ ಜಾಗ ಇರಲಿಲ್ರಿ. ಈಗ ಬಾಳ ಚಲೋ ಅಗೆತ್ರೀ.
2. ಮುಖ್ಯೋಪಾಧ್ಯಾಯರು: ಆಟದ ಮೈದಾನ ಮಾಡಿರುವುದರಿಂದ ಕುರುಡನಿಗೆ ಕಣ್ಣು ಬಂದಷ್ಟು ಸಂತೋಷ ವಾಯಿತು ಎಂದರು.
   - ಈ ಮೈದಾನವನ್ನು ನಿರ್ಮಾಣ ಮಾಡಿದ್ದರಿಂದ ಮಕ್ಕಳಿಗೆ ಆಟ ಆಡಲು ಒಳ್ಳೆಯ ಅನುಕೂಲ ವಾಯಿತು.
   - ಕೂಲಿಕಾರರಿಗೆ ಆರ್ಥಿಕವಾಗಿ ಸಹಾಯವಾಯಿತು.



ಈ ಮೇಲಿನ ಎಲ್ಲ ಅಂಶಗಳನ್ನು ನೋಡಿದಾಗ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ಕನಸಗೇರಿ ಆಟದ ಮೈದಾನ ತಯಾರಾಯಿತು. ಈ ಮೈದಾನದಲ್ಲಿ ಇಂದು ಆಟ ಆಡಲು ಪ್ರಾರಂಭಿಸಿದ ಮಕ್ಕಳು ಮುಂದೊಂದು ದಿನ ಈ ದೇಶದ ಒಬ್ಬ ಒಳ್ಳೆಯ ಕ್ರಿಡಾಪಟುಗಳಾಗಿ ದೇಶಕ್ಕೆ ಕೀರ್ತಿ ತರುತ್ತಾರೆ ಎಂದು ಹೇಳಬಹುದು.

❑

# ಒಣ ಭೂಮಿಯಲ್ಲಿ ನೀರು ಬಂದಾಗ

ಬೆಳಗಾವಿ ಸಕ್ಕರೆ ನಾಡಿನ ಜಿಲ್ಲೆಯೆಂದು ಪ್ರಸಿದ್ಧ. ಅಥಣಿ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದು. ಅಥಣಿ ಹಿಂದುಳಿದ ತಾಲ್ಲೂಕಗಳಲ್ಲಿ ಒಂದು. ಈ ತಾಲ್ಲೂಕಿನ ವ್ಯಾಪ್ತಿಗೆ 51 ಗ್ರಾಮ ಪಂಚಾಯತಿಗಳು ಬರುತ್ತವೆ. ಈ ತಾಲ್ಲೂಕು ಮೂಲಭೂತ ವ್ಯವಸ್ಥೆಯ ಕೊರತೆ ಎದ್ದು ಕಾಣುತ್ತದೆ. ಅಥಣಿ ನಗರವೇ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಇದರ ವ್ಯಾಪ್ತಿಗೆ ಬರುವ ಕಟಗೇರಿ ಗ್ರಾಮ ಪಂಚಾಯತಿಯು ಒಣ ಬೇಸಾಯದ ನಾಡು. ಅದರಲ್ಲೂ ಬಡಚಿ ಹಿಂದುಳಿದ ಊರು. ಇಲ್ಲಿ ಅಂತರ್ಜಲದ ಕೊರತೆ, ನೀರಿನ ಅಭಾವ ಎದ್ದು ಕಾಣುತ್ತದೆ. ರೈತರೆಲ್ಲ ಮುಗಿಲು ನೋಡಿ ಮಳೆರಾಯನ ಬರುವಿಗಾಗಿ ಕಾಯಬೇಕಾಗಿತ್ತು. ಕೆಲವರ ಬಾಳಲ್ಲಿ ಕತ್ತಲು ಕವಿದಿತ್ತು. ಕಾರಣ ಉತ್ಪನ್ನ ಬರುತ್ತಿರಲಿಲ್ಲ. ಬಂದರೂ ಜೀವನ ಸಾಗಿಸೋಕೆ ಸಾಕಾಗುತ್ತಿರಲಿಲ್ಲ. ಇಲ್ಲಿನ ಹೆಚ್ಚು ಜನರು ಕೃಷಿ ಅವಲಂಬಿತರು. ಆದರೆ ನೀರಿಗೆ ಬರ, ಹಾಗಾಗಿ ಇಲ್ಲಿನ ಜನರು ಒಣಬೇಸಾಯದ ಬೆಳೆಗಳನ್ನು ಅವಲಂಬಿತರು. ಈ ಊರಿನ ಸುತ್ತ ಮುತ್ತ ಒಂದೆರಡು ಹಳ್ಳವು ಇವೆ. ಆದರೆ ಅಲ್ಲಿ ನೀರೇ ನಿಲ್ಲಲ್ಲ. ಕೆಂಪು ಮಿಶ್ರಿತ ಮಣ್ಣು ಇದ್ದು. ಇದರಲ್ಲಿ ಚಿನ್ನವನ್ನು ಬೆಳೆಯಬಹುದು. ಆದರೆ ನೀರಿಗೆ ಬರಗಾಲ ಇಲ್ಲಿದೆ.

ಜನರು ಒಣ ಬೇಸಾಯದ ಬೆಳೆಗಳಾದ ಶೇಂಗಾ, ತೊಗರಿ, ಜೋಳ, ಹೆಸರು ಬಿತ್ತುತ್ತಾರೆ ಮಳೆ ಆಗದಿದ್ದರೆ ಬೆಳೆಗಳು ಇವರಿಗೆ ವರ್ಷ ಪೂರ್ತಿ ಜೀವನ ಸಾಗಿಸಲು ಕಷ್ಟವಾಗುತ್ತಿತ್ತು. ಇಂತಹ ಕಷ್ಟಕರ ಜೀವನ ಇಲ್ಲಿನ ಜನರದಾಗಿತ್ತು. ಇವರಲ್ಲಿ ಕೆಲಸಕ್ಕಾಗಿ ಮಹಾರಾಷ್ಟ್ರದ ನಗರಗಳಾದ ಕೊಲ್ಲಾಪುರ, ಮಿರಜ, ಸಾಂಗ್ಲಿಯಂತಹ ನಗರಗಳಿಗೆ ಕೆಲಸ ಅರಿಸಿ ಹೋಗುವ ಕಾಲ ಒಂದಿತ್ತು. ತಂದೆ ತಾಯಿಗಳು ಕೆಲಸಕ್ಕಾಗಿ ಹೊರ ರಾಜ್ಯಕ್ಕೆ ಹೋದರೆ ಇಲ್ಲಿ ಸಣ್ಣ ಪುಟ್ಟ ಮಕ್ಕಳು ವಯಸ್ಸಾದ ಅಜ್ಜ ಅಜ್ಜಿ ಮಾತ್ರ ಊರಲ್ಲಿ ಇರುತ್ತಿದ್ದರು. ಕೆಲಸಕ್ಕಾಗಿ ಹೋದವರು ಮನೆಯ ಬಗ್ಗೆ ಕಾಳಜಿ ವಹಿಸಿ ಬಂದರೆ ಅವರ ಜೀವನ ಕಂಡು ಬೇಸರವಾಗುತ್ತಿತ್ತು. ಇನ್ನೂ ಕೆಲವರು ಕೆಲಸಕ್ಕಾಗಿ ಹೋಗಿ ಎಲ್ಲಾ ಮರೆತು ದುಷ್ಟ ಚಟಗಳ ದಾಸರಾಗಿದ್ದವರು ಉಂಟು. ಅಂತಹ ಕುಟುಂಬಗಳು ಬಡತನದಲ್ಲಿ ಬಳಲಿದವರನ್ನು ಕಾಣಬಹುದಿತ್ತು. ಇಂತಹ ಕಷ್ಟಕರ ಜೀವನ ಇಲ್ಲಿಯದಾಗಿತ್ತು.

ಅಂತಹ ಸಮಯದಲ್ಲಿ ಬೆಳಕಿನಂತೆ ಕಂಡಿದ್ದು. ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಈ ಯೋಜನೆಯ ಬಗ್ಗೆ ಗ್ರಾಮ ಪಂಚಾಯತಿಯವರು ಜನರಿಗೆ ತಿಳಿಸಿದರು. ಜನರಿಗೆಲ್ಲ ಯೋಜನೆಯಲ್ಲಿ ಯಾವ ಕೆಲಸ ಹೇಗೆ ಆಯ್ಕೆ ಮಾಡಿಕೋಬೇಕು. ಯಾವುದಕ್ಕೆ ಎಷ್ಟು ಹಣ ಕೊಡುತ್ತಾರೆ. ಎಂದೆಲ್ಲ ಗ್ರಾಮ ಸಭೆ ಕರೆದು ಹಿರಿಯ ಅಧಿಕಾರಿಗಳು, ಸಾಮಾಜಿಕ ಲೆಕ್ಕ ಪರಿಶೋಧಕರು, ಕಾರ್ಯದರ್ಶಿಗಳು ಜನರಿಗೆ ತಿಳಿಸಿದರು. ಅಗ ಜನರು ಹಳ್ಳಕ್ಕೆ ತಡೆ ಆಣೆಕಟ್ಟು ಕಾಮಗಾರಿ ಯಾಕೆ ಮಾಡಬಾರದು ಎಂದು ತಿಳಿಸಿದರು. ಅದನ್ನು ಗ್ರಾಮ ಸಭೆಯಲ್ಲಿ ಬೇರೆ ಬೇರೆ ಕೆಲಸದ ಜೊತೆಗೆ ಈ ಕಾಮಗಾರಿಯನ್ನು ಆಯ್ಕೆ ಮಾಡಿಕೊಂಡರು.

ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಈ ಯೋಜನೆಯ ಬಗ್ಗೆ ಗ್ರಾಮ ಪಂಚಾಯತ್‌ನವರು ಜನರಿಗೆ ತಿಳಿಸಿದರು. ಗ್ರಾಮ ಸಭೆಯಲ್ಲಿ ಬೇರೆ ಬೇರೆ ಕೆಲಸದ ಜೊತೆಗೆ ಈ ಕಾಮಗಾರಿಯನ್ನು ಆಯ್ಕೆ ಮಾಡಿಕೊಂಡರು.

ಕೂಲಿ ಕಾರ್ಮಿಕರಿಗೆ ನೀವು ಕೆಲಸಕ್ಕೆ ಬಂದರೆ ಒಂದು ವಾರ್ಷಿಕ ಅವಧಿಯಲ್ಲಿ ಒಂದು ಕುಟುಂಬಕ್ಕೆ 100 ದಿನ ಕೂಲಿ ನೀಡುವದಾಗಿ ಹಾಗೂ ದಿನಕ್ಕೆ 125 ರೂಪಾಯಿ ಕೂಲಿ ಕೊಡತ್ತೇವೆ ಎಂದು ಗ್ರಾಮ ಸಭೆಯಲ್ಲಿ ಜನರಿಗೆಲ್ಲ ತಿಳಿಸಿದರು. ಆಗ ಜನರೆಲ್ಲ ನಾವು ಕೂಲಿ ಕೆಲಸಕ್ಕೆ ಬರುತ್ತೇವೆ ಎಂದು ಹೇಳಿದರು.



ಬಡಚಿ ಗ್ರಾಮದ ಹಳ್ಳಕ್ಕೆ ನಿರ್ಮಿಸಿರುವ ತಡೆ ಆಣೆಕಟ್ಟಿನ ಚಿತ್ರ.

ಕೂಲಿ ಕಾರ್ಮಿಕರು ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದರು. 2010–11ನೇ ಸಾಲಿನಲ್ಲಿ ತಡೆ ಆಣೆಕಟ್ಟು ಕಾಮಗಾರಿ 3 ಲಕ್ಷ ರೂ, ತಾಂತ್ರಿಕ ಮಂಜೂರಾತಿ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡಿದರು. ಈ ಕಾಮಗಾರಿಯಲ್ಲಿ ಕೂಲಿ ಕಾರ್ಮಿಕರು ಸುಮಾರು 1–2 ತಿಂಗಳವರಗೆ ಕೆಲಸ ಮಾಡಿದರು. ಅವರಿಗೆ ಎಲ್ಲ ಸೌಲಭ್ಯವನ್ನು ನೀಡಲಾಗಿತ್ತು. ಅದರ ಜೊತೆ ದಿನಕ್ಕೆ 125 ರಂತೆ ಕೂಲಿಯನ್ನು ಅವರವರ ಖಾತೆ ಜಮಾ ಮಾಡಿದರು.

ಈಗ ರೈತರ ಮುಖದಲ್ಲಿ ಮುಗಳ್ನಗೆ, ಸಂತೋಷ ಮೂಡಿತು. ನೀರಿಗಾಗಿ ಪರದಾಡುತ್ತಿದ್ದ ಜನರಲ್ಲಿ ಸಂತೋಷದ ನಗೆ ಬಿರಿದೆ. ಸರಿಯಾಗಿ ಉತ್ಪನ್ನ ಬರತಾಯಿಲ್ಲಾಂತಹ ಕೊರಗುತ್ತಾ ಇದ್ದ ಜನರಲ್ಲಿ ಸಾಕಷ್ಟು ಉತ್ಪನ್ನ ತೆಗೆಯುವ ಉತ್ಸಾಹ ಬಂದಿದೆ. ಕೆಲಸವಿಲ್ಲದೆ ಹುಣಸಿಗಿಡದ ಕಟ್ಟೆಯ ಮೇಲೆ ಕೂತು ಹರಟೆ ಹೊಡೆಯುತ್ತಿದ್ದ ಜನರೆಲ್ಲ ಈಗ ಕೆಲಸ ಅಂತಹ ಹೊಲದಲ್ಲಿಯೆ ಕಾಲ ಕಳಿಯುತ್ತಿದ್ದಾರೆ. ಇದಕೆಲ್ಲ ಕಾರಣ ಮಹಾತ್ಮಾಗಾಂಧಿ ರಾಷ್ಟೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ.

ಜೀವನದಲ್ಲಿ ನಿರುತ್ಸಾಹ ತುಂಬಿದ ಜನರಲ್ಲಿ ಜೀವನದ ಚೈತನ್ಯ ತುಂಬಿದೆ. ಈ ಯೋಜನೆಯಿಂದ ರೈತರೆಲ್ಲ ದ್ರಾಕ್ಷಿ, ಕಬ್ಬು ಇಂತಹ ಬೆಳೆಗಳನ್ನು ಬೆಳೆಯುತ್ತಾ ಆರ್ಥಿಕವಾಗಿ ಸಾಮಾಜಿಕವಾಗಿ ಎಲ್ಲ ರಂಗದಲ್ಲು ಮುಂದೆ ಬರುತ್ತಿದ್ದಾರೆ. ಇದಕೆಲ್ಲ ಕಾರಣ ಹಳ್ಳಕ್ಕೆ ನಿರ್ಮಿಸಿರುವ ತಡೆ ಆಣೆಕಟ್ಟು ಇದರಿಂದ ಹತ್ತಾರು ಬಾವಿ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಹೆಚ್ಚಾಗಿದೆ. ದನ ಕರುಗಳಿಗೆ ಕುಡಿಯಲು ನೀರು ಸಿಗುತ್ತಿದೆ. ಮೊದಲು ಎತ್ತ ನೋಡಿದರು ಖಾಲಿ ಜಮೀನು ಕಾಣುತ್ತಿತ್ತು. ಈಗ ದ್ರಾಕ್ಷಿ ತೋಟ ಬಾಳೆ ತೋಟ ಕಾಣತೊಡಗಿವೆ. ಇದೆಲ್ಲ ಸಾಧ್ಯವಾದದ್ದು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ಅನ್ನೋದು ಮಾತ್ರ ಸತ್ಯ..

### ಈ ಕಾಮಗಾರಿಯಿಂದ ರೈತರಿಗೆ ಆದ ಅನುಕೂಲಗಳು:

1. ಈ ತಡೆ ಗೋಡೆ ನಿರ್ಮಾಣದಿಂದ ಬಾವಿಗಳಿಗೆ ನೀರ ಸಂಗ್ರಹಣೆ ಹೆಚ್ಚಾಗಿದೆ
1. ಅಂತರ್ಜಲದ ಮಟ್ಟ ಹೆಚ್ಚಿತು.
2. ರೈತರು ಆರ್ಥಿಕ ಅಭಿವೃದ್ಧಿ ಪೂರಕವಾಯಿತು.
3. ಕೂಲಿಕಾರರಿಗೆ ವಲಸೆ ತಪ್ಪಿತು, ಕೂಲಿ ಸಿಕ್ಕಿತು.

ಈ ಯೋಜನೆಯಿಂದ ಬಡತನವನ್ನು ನಿಗಿಸುವ ಶಕ್ತಿಯಿದೆ. ಅದನ್ನು ಜನರಿಗೆ ಸರಿಯಾಗಿ ಮಾಹಿತಿ ಮುಟ್ಟಿಸಿ ಅವರಿಗೆ ಪ್ರೊತ್ಸಾಹ ನೀಡಿದರೆ ತಡೆ ಗೋಡೆ ಅಂತಹ ಸಾಕಷ್ಟು ಒಳ್ಳೆಯ ಕಾಮಗಾರಿಗಳು ನಿರ್ಮಾಣವಾಗುತ್ತವೆ. ಇದರಿಂದ ಅಂತರ್ಜಲ ಮಟ್ಟ ಹೆಚ್ಚಿತು. ರೈತರ ಮುಖದಲ್ಲಿ ಸಂತೋಷದ ನಗೆ ಬಿರಿತು.

### ಮುತಗಾದ ಮುತ್ತಿನಂತಹ ರಸ್ತೆ

ಕುಂದಾನಗರಿಯಂದೆ ಪ್ರಸಿದ್ಧಿ ಪಡೆದ ಜಿಲ್ಲೆ ಅದುವೇ ಬೆಳಗಾವಿ. ಇದರ ಇನ್ನೊಂದು ಹೆಸರೆ ಸಕ್ಕರೆ ನಾಡು ಕಬ್ಬಿನ ಬೀಡು ಎಂದು ಬಣ್ಣಿಸುವ ತಾಲ್ಲೂಕು. ಬೆಳಗಾವಿ ತಾಲ್ಲೂಕಿನ ವ್ಯಾಪ್ತಿಗೆ 54 ಗ್ರಾಮ ಪಂಚಾಯತಿಗಳು ಬರುತ್ತವೆ. 54 ಗ್ರಾಮ

ಪಂಚಾಯತಿಗಳಲ್ಲಿ ಮುತಗಾ ಗ್ರಾಮ ಪಂಚಾಯತಿಯು ಒಂದು. ಇಲ್ಲಿನ ಜನರಿಗೆ ರಸ್ತೆಯೊಂದು ದೊಡ್ಡ ಸಮಸ್ಯೆಯಾಗಿಯೇ ಕಾಡುತ್ತಿತ್ತು ಅನ್ನೂದು ಮಾತ್ರ ನಿಜ. ಸದರಿ ರಸ್ತೆಯು ತಗ್ಗು, ಹೊಂಡಗಳಲ್ಲಿ ನೀರು ತುಂಬಿ ತುಳಕಾಡುತ್ತಿತ್ತು.

ಇದರ ವ್ಯಾಪ್ತಿಗೆ ಬರುವಂತಹ ಮುತಗಾ ಗ್ರಾಮ ಪಂಚಾಯತಿ. ಇದರಲ್ಲಿ ಸಾಯಿನಗರವೆಂಬ ಕಾಲೋನಿಯಲ್ಲಿ ರಸ್ತೆ ಕೆಟ್ಟು ಮುರಾಬಟ್ಟೆ ಹಿಡಿದಿತ್ತು. ಇಲ್ಲಿನ ಜನರು ಹೊರಗಡೆ ಹೋಗಬೇಕೆಂದರೆ ಆ ಕೆಸರಿನಲ್ಲಿ ಓಡಾಡುವ ಪರಿಸ್ಥಿತಿ ಉಂಟಾಗಿತ್ತು. ಇಲ್ಲಿನ ಜನರು ಗ್ರಾಮ ಪಂಚಾಯತಿಗೆ ಮತ್ತು ಸಂಬಂದ ಪಟ್ಟ ಇಲಾಖೆಗಳಿಗೆ ಮೌಖಿಕ ಮತ್ತು ಲಿಖಿತ ಮನವಿ ಸಲ್ಲಿಸಿದ್ದರು. ಇದಕ್ಕೆ ಸರಿಯಾದ ಸ್ಪಂದನೆ ಸಿಕ್ಕಿರಲಿಲ್ಲ. ಪಂಚಾಯತಿಯ ಅನುದಾನವಿಲ್ಲ ಎಂದು ಹೇಳುತ್ತಿದ್ದರು.

ಅಂತಹ ಸಂದರ್ಭದಲ್ಲಿ ಮಹಾತ್ಮಾಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬಂದ ಮೇಲೆ ಜನರಿಗೆ ಇದರ ಬಗ್ಗೆ ಉನ್ನತ ಅಧಿಕಾರಿಗಳು ಕಾರ್ಯದರ್ಶಿಗಳು ಮತ್ತು ಸಾಮಾಜಿಕ ಲೆಕ್ಕ ಪರಿಶೋಧಕರು ಜನರಿಗೆ ಮಾಹಿತಿಯನ್ನು ನೀಡಿದರು. ಹಾಗೂ ಜನರಿಗೆ ನಿಮಗೆ ಕೂಲಿಯನ್ನು ನೀಡುತ್ತೇವೆ ಎಂದು ತಿಳಿಸಿದರು.

ಈ ಸಮಯದಲ್ಲಿ ಗ್ರಾಮ ಸಭೆ ಕರೆದು ಕಾಮಗಾರಿಗಳನ್ನು ಆಯ್ಕೆ ಮಾಡಿಕೊಂಡರು. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿಯಮದನುಸಾರವಾಗಿ ಕಾಮಗಾರಿಗೆ 3.00 ಲಕ್ಷ ರೂ, ಗೆ ತಾಂತ್ರಿಕ ಮಂಜೂರಾತಿ ಮತ್ತು ಆಡಳಿತಾತ್ಮಕ ಮಂಜೂರಾತಿ ಪಡೆದರು.

ಸದರಿ ಕಾಮಗಾರಿಯಲ್ಲಿ 1800 ಮಾನವ ದಿನಗಳನ್ನು ಸೃಜಿಸಿ ಈ ಕಾಮಗಾರಿಗೆ 2.97 ಲಕ್ಷ ಗಳನ್ನು ಖರ್ಚು ಮಾಡಿ ಕಾಮಗಾರಿ ಉತ್ತಮವಾಗಿ ನಿರ್ವಹಿಸಿದ್ದಾರೆ. ಕೆಲಸಕ್ಕಾಗಿ ಬೆಳಗಾವಿ ನಗರಕ್ಕೆ ಹೋಗುವವರು. ಇಲ್ಲಿಯೆ ಕೆಲಸ ನಿರ್ವಹಿಸಲು ಪ್ರಾರಂಭಿಸಿದರು. ಹಾಗೂ ಮಹಿಳೆಯರಿಗೆ ಮತ್ತು ಪುರುಷರಿಗೆ ಸಮನಾದ ಕೂಲಿ ನೀಡಿದ್ದರಿಂದ ಇಲ್ಲಿನ ಕೂಲಿ ಕಾರ್ಮಿಕರು ತುಂಬಾ ಸಂತೋಷ ವ್ಯಕ್ತ ಪಡಿಸಿದ್ದಾರೆ.

ಈ ರಸ್ತೆ ನಿರ್ಮಾಣದಿಂದ ಶಾಲೆ ಹೋಗಲು ಮಕ್ಕಳಿಗೆ ತುಂಬಾ ಅನುಕೂಲವಾಗಿದ್ದು ಸಂತೋಷದಿಂದ



ರಸ್ತೆ ನಿರ್ಮಾಣದ ಕಾಮಗಾರಿಯನ್ನು ಪರಿಶೀಲಿಸುತ್ತಿರುವ ಅಧಿಕಾರಿಗಳು

ಹೋಗುತ್ತಿದ್ದಾರೆ. ಹಾಗೂ ರೈತರಿಗೆ ಮತ್ತು ಸಾರ್ವಜನಿಕರಿಗೆ ಈ ಕಾಮಗಾರಿಯಿಂದ ಬಹಳ ಅನುಕೂಲವಾಗಿದೆ.

| ಗ್ರಾಮದ ಹೆಸರು | ಜನಸಂಖ್ಯೆ | ಕುಟುಂಬಗಳು | ನೋದಾಯಿತ ಕುಟುಂಬಗಳು | ಷರಾ |
|---|---|---|---|---|
| ಮುತಗಾ | 7457 | 2550 | 1933 | |

**ಈ ಕಾಮಗಾರಿಯಿಂದ ಸಾರ್ವಜನಿಕರಿಗೆ ಆದ ಅನುಕೂಲಗಳು:**

1. ಶಾಲೆಗೆ ಹೋಗುವ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಈ ರಸ್ತೆಯಿಂದ ಅನುಕೂಲವಾಯಿತು,
2. ಕಾಲೋನಿಯಲ್ಲಿ ಸ್ವಚ್ಚತೆ ನಿರ್ಮಾಣವಾಯಿತು.
3. ರೈತರಿಗೆ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ಅನುಕೂಲವಾಯಿತು.

ರಸ್ತೆ ನಿರ್ಮಾಣಕ್ಕಿಂತ ಪೂರ್ವದಲ್ಲಿ ಇಲ್ಲಿ ನಡೆದಾಡುವುದೆ ಕಷ್ಟವಾಗುತ್ತಿತ್ತು. ಅದರಿಂದ ಅಲ್ಲಿನ ಮಕ್ಕಳು ಮತ್ತು ಜನರು ಬೇರೆ ಕಡೆ ಹೋಗಲು ಕಷ್ಟವಾಗುತ್ತಿತ್ತು. ಈ ರಸ್ತೆ ನಿರ್ಮಾಣದಿಂದ ಅಲ್ಲಿನ ಕೂಲಿಕಾರರಿಗೆ ಕೂಲಿಯು ಸಿಕ್ಕಿತು. ಹಾಗೂ ರಸ್ತೆಯು ಉತ್ತಮವಾಗಿ ನಿರ್ಮಾಣವಾಯಿತು. ಅಲ್ಲದೇ ಗ್ರಾಮಸ್ಥರಿಗೆ ಅನುಕೂಲವಾಯಿತು. ಅದರಿಂದ ಹಳ್ಳಿ ಜನರ ಮುಖದಲ್ಲಿ ಸಂತೋಷದ ಛಾಯೆ ಮೂಡಿತು.

❑

# ಪ್ರಯತ್ನ ಎಲ್ಲವನ್ನೂ ಸಾಧಿಸಲು ಶಕ್ತಿಯಾಗಿದೆ

ಎ. ಭಾರತಿ *
ಮೊಬೈಲ್ : 9480854333

ಒಟ್ಟಾರೆ ಹೇಳುವುದಾದರೆ ಪ್ರಯತ್ನ ಇದ್ದರೆ ಸಾಧನೆ ಮಾರ್ಗ ಕಷ್ಟವೇನು ಅಲ್ಲ. ಸರ್ಕಾರ ಪಂ.ಅ.ಅ.ಗಳಿಗೆ ಹೆಚ್ಚಿನ ಪ್ರೋತ್ಸಾಹ, ಅಧಿಕಾರ, ಸೌಲಭ್ಯಗಳನ್ನು ಕೊಟ್ಟು ಅವರಿಂದ ಇನ್ನು ಹೆಚ್ಚಿನ ಕೆಲಸ ಪಡೆಯಲು ನೀತಿ-ನಿಯಮಗಳನ್ನು ರೂಪಿಸಬೇಕು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಆಯ್ಕೆಯಾದ ನಾನು ಬೆಳಗಾಂ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಕಣಯೆ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸಲು ಮೊದಲ ದಿನ ಹಾಜರಾಗಲು ಹೋದಾಗ, ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸದ ನಂತರ 5 ವರ್ಷ ವಕೀಲಿ ವೃತ್ತಿಯನ್ನು ಮಾಡಿ ಮೊದಲ ಬಾರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ನೆನೆದು ಪಂಚಾಯಿತಿ ವ್ಯಾಪ್ತಿ ಪ್ರದೇಶಕ್ಕೆ ಹೋಗುತ್ತಿದ್ದಂತೆ ನಿಸರ್ಗ ಸೌಂದರ್ಯಕ್ಕೆ ಮರುಳಾದೆ. ನಮ್ಮ ಪಂಚಾಯಿತಿಯೂ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ ಸೌಂದರ್ಯಧಾರೆ ಎರೆದಂತೆ ನಿಸರ್ಗ ನಿಂತಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿನ ಝುಳು-ಝುಳು ಹರಿಯುವ ನೀರಿನ ಕಾಲುವೆಗಳು  ಹಚ್ಚ ಹಸಿರಿನಿಂದ ಕಂಗೊಳಿಸುವ ಗಿಡ-ಮರ, ಹೊಲಗದ್ದೆಗಳು ಸುತ್ತಲು ಬೆಟ್ಟ ನೋಡಲು ಎರಡು ಕಣ್ಣು ಸಾಲದು **"ಓ ದೇವನೇ ನೀನೇನಜು ಕಲಿಯೆ । ಕಲೆಯೆ । ಕೂಲಿಯೆ ।"** ಎಂದು ಕೇಳುವಂತ ಸೌಂದರ್ಯದ ಗಣಿಯೆ ಆಗಿದೆ. ಇಂತಹ ಕೆಲಸ ಮಾಡಲು ತೊಂದರೆ ಎಂದರೆ ಒಂದೇ ಅದು ಭಾಷೆ. ಒಬ್ಬರಿಗೂ ಕನ್ನಡ ಬರುವುದೇ ಇಲ್ಲ. ಮರಾಠಿ ಪ್ರಾಂತ್ಯಕ್ಕೆ ಹೋದಂತೆ ಆಡಳಿತ




* ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಣಯೆ ಗ್ರಾಮ ಪಂಚಾಯಿತಿ, ಬೆಳಗಾವಿ ತಾ॥ ಮತ್ತು ಜಿಲ್ಲೆ.



ಸಂಪೂರ್ಣ ಮರಾಠಿಯಲ್ಲಿಯೇ ಜನರು ತುಂಬಾ ಒಳ್ಳೆಯವರು ನನ್ನ ಭಾಷೆಯ ತಿಳಿಯದಿದ್ದರೂ ಸಹ ನನ್ನ ಧ್ಯೇಯಗಳನ್ನು, ಉದ್ದೇಶಗಳನ್ನು ತಿಳಿಸಿದಾಗ ಅರ್ಥಮಾಡಿಕೊಂಡು ಜಾರಿಗೆ ತರುವಲ್ಲಿ ಸಹಾಯ ಮಾಡಿರುತ್ತಾರೆ. ಯಾವಾಗಲೂ ಮಳೆಯೆ ಹೆಚ್ಚು ಬರುವುದರಿಂದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಎಷ್ಟೆ ಕೈಗೊಂಡರೂ ಉಳಿಯುವುದಿಲ್ಲ. ಎಷ್ಟೆ ಕಾಮಗಾರಿಗಳು ಮಾಡಿದರೂ ಅದನ್ನು ಉಳಿಯಲು ಬಿಡದೇ ಹಾಳು ಮಾಡುವಷ್ಟು ಮಳೆಯಾದರೂ ಸಹ ಜನರ ಸಹಕಾರದಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಯಲ್ಲಿ ರಣಕುಂಡೆ ಗ್ರಾಮದಲ್ಲಿ ಕೆರೆ ನಿರ್ಮಾಣ ಸದಾ ನೀರು ಪೂರೈಕೆ ಮಾಡುವಂತ ಕೆಲಸ ಕೈಗೊಂಡಾಗ ಸಮಸ್ತ ಜನರು ಭಾಗಿಯಾಗಿ ಬೆಟ್ಟದ ಕಡಿದಾದ ಪ್ರದೇಶದಲ್ಲಿ ಕೆರೆ ನಿರ್ಮಾಣ ಕಾರ್ಯಕೈಗೊಂಡು ಯಶಸ್ವಿಯಾಗಿ ನೀರು ನಿಲ್ಲುವಂತೆ ಮಾಡಲು ಅವಕಾಶವಾಯಿತು. ಇದಕ್ಕೆ ಅಧ್ಯಕ್ಷರು, ಸದಸ್ಯರು, ಕಾರ್ಯದರ್ಶಿಗಳು, ಕ್ಲರ್ಕ್, ಸಂಯೋಜಕರು ಮತ್ತು ಎಲ್ಲ ಜನರ ಸಹಕಾರವೇ ಕಾರಣ. ಮುಖ್ಯವಾಗಿ ನಮ್ಮ ಮುಖ್ಯ ಕಾರ್ಯನಿರ್ವಾಹಕರಾದ ಗೋವಿಂದರಾಜು ಮತ್ತು ನಮ್ಮ ತಾಲ್ಲೂಕು ಕಾರ್ಯನಿರ್ವಾಹಕಾಧಿಕಾರಿಗಳ ಬೆಂಬಲವನ್ನು ನಾವು ನೆನಪಿಸಿಕೊಳ್ಳಬೇಕು. ಅವರ ಮಾರ್ಗದರ್ಶನವೇ ನಮಗೆ ದಾರಿ ದೀಪ ಎಂದರೆ ತಪ್ಪಾಗಲಾರದು. ಸರ್ಕಾರದ ಅನುದಾನಗಳಿಂದ ಗ್ರಾಮಗಳ ಸಂಪೂರ್ಣ ಅಭಿವೃದ್ಧಿ ಸಾಧ್ಯವೇ ಇಲ್ಲ. ಗಾಂಧಿಜೀಯವರ ಕನಸು ನನಸಾಗಿಸಲು ಸ್ವಲ್ಪ ಹೆಚ್ಚು ಪ್ರಯತ್ನದೊಂದಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಉಪಯೋಗಿಸಿಕೊಂಡು, ಗ್ರಾಮಗಳ ಅಭಿವೃದ್ಧಿ ದಾರಿಯನ್ನು ಕಂಡುಕೊಂಡು ಅಭಿವೃದ್ಧಿಪಡಿಸಿ ಭಾರತ ಹೆಸರನ್ನು ಉನ್ನತಮಟ್ಟಕ್ಕೆ ಏರಿಸಲು ಸಾಧ್ಯವಾಗಿದೆ. ನಮ್ಮ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಸಚಿವರ ಸಹಕಾರದಿಂದ ಖಂಡಿತವಾಗಿಯೂ ನಾವು ಏನಾದರೂ ಒಂದು ಗ್ರಾಮೀಣಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಿದೆ. ಏಕೆಂದರೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸರ್ಕಾರ ಯಾವ ಉದ್ದೇಶಕ್ಕಾಗಿ ತಂದಿದೆಯೋ ಅದನ್ನು ಸಫಲಗೊಳಿಸಲು ಸರ್ಕಾರವು ಇನ್ನು ಹೆಚ್ಚಿನ ಅಧಿಕಾರ, ಕರ್ತವ್ಯ, ಸುರಕ್ಷತೆ, ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಯುವ ಅಧಿಕಾರಿಗಳ ಉತ್ಸಾಹ, ಕೆಲಸಕ್ಕೆ ಯಾರಿಂದಲೂ ಅಡ್ಡಿ-ಆತಂಕಗಳು ಬರದಂತೆ ನೋಡಿಕೊಂಡರೇ ಗಾಂಧೀಜಿಯವರ ಕನಸನ್ನು ಇನ್ನು 3 ವರ್ಷಗಳಲ್ಲಿ ಸಂಪೂರ್ಣಗೊಳಿಸುವ ಶಕ್ತಿ ನಮ್ಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಲ್ಲಿದೆ. ಅದನ್ನು ಬೆಳೆಸುವುದು ಸರ್ಕಾರದ ಕೈಯಲ್ಲಿದೆ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು 2 ವರ್ಷಕ್ಕಿಂತ ಹೆಚ್ಚು ಒಂದೇ ಪಂಚಾಯಿತಿಯಲ್ಲಿರಿಸದೇ ಬೇರೆ ಬೇರೆ ಪಂಚಾಯಿತಿಗೆ ವರ್ಗಾಯಿಸುವುದು ಆಡಳಿತ. ಅಭಿವೃದ್ಧಿಯ ಹಿತ ದೃಷ್ಟಿಯಿಂದ ಒಳ್ಳೆಯದು ಎಂಬುವುದು ನನ್ನ ಭಾವನೆ. ಭಾಷೆಯೇ ಬರದ ಜಾಗದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡು ಜನರೊಡನೆ ಬೆರೆತು ಕೇವಲ ಭಾಷೆಯ ಭಾಷಾಂತರ. ಸಂಜ್ಞೆಗಳ





ಮೂಲಕ ಗ್ರಾಮೀಣಾಭಿವೃದ್ಧಿಯತ್ತ ಹೆಜ್ಜೆ ಇಡುತ್ತಿದ್ದೇನೆ. ಕರ ವಸೂಲಿಯಲ್ಲಿ, ಕುಡಿಯುವ ನೀರಿನ ಪೂರೈಕೆಯಲ್ಲಿ, ರಸ್ತೆ, ಗಟಾರಗಳ ನಿರ್ಮಾಣದಲ್ಲಿ ಸರ್ಕಾರದ ಮಹತ್ವದ ಯೋಜನೆ ವಸತಿ ಯೋಜನೆಗಳನ್ನು ಪ್ರತಿ ಮನೆಗಳನ್ನು ಪರಿಶೀಲಿಸಿ ನಿಜವಾದ ಫಲಾನುಭವಿಗಳಿಗೆ ತಲುಪಿಸುತ್ತಿದ್ದೇನೆ. ನಿರ್ಮಲ ಗ್ರಾಮವಾಗಿ ಮಾಡಲು ಶೌಚಾಲಯಗಳ ನಿರ್ಮಾಣಕ್ಕೆ ಉತ್ತೇಜನ ಮತ್ತು ಸಾಲ ಸೌಲಭ್ಯ ಕಲ್ಪಿಸಿಕೊಡುತ್ತಿದ್ದೇನೆ. ಸಾಕ್ಷರತ ಭಾರತ ಕಾರ್ಯಕ್ರಮವನ್ನು ತರಬೇತಿಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರಲು ಎಲ್ಲರೊಂದಿಗೆ ಸೇರಿ ಪ್ರಯತ್ನಪಡುತ್ತಿದ್ದೇನೆ. ಶಾಲಾ ಮಕ್ಕಳ ಬಿಸಿ ಊಟದ ವ್ಯವಸ್ಥೆ ಇತರೆಯೊಂದಿಗೆ ಶಾಲಾ ಮಕ್ಕಳೊಂದಿಗೆ ಬೆರೆತು ಅವರ ಕಡೆ ಸೆಮಿನಾರ್‌ಗಳನ್ನು ಮಾಡಿಸಿ ಒಂದು ಮಾದರಿ ಗ್ರಾಮ ಮಾಡಬೇಕೆಂದು ಪ್ರಯತ್ನಶೀಲಳಾಗಿದ್ದೇನೆ. ಇನ್‌ಚಾರ್ಜ್




ಎಂದು ಮತ್ತೊಂದು ಪಂಚಾಯಿತಿ ಹೀರೇಬಾಗೇವಾಡಿ ಕೊಟ್ಟಿದ್ದರೂ ಅಲ್ಲಿಯೂ ಇದೇ ಪ್ರಯತ್ನ ಮಾಡಿ ಕಾಮಗಾರಿಗಳ ಪರಿಶೀಲನೆ ಮಾಡಿ ಆಡಳಿತದಲ್ಲಿ ಹಿಡಿತ ತರಲು ಪ್ರಯತ್ನಿಸಿರುತ್ತೇನೆ.

ಒಟ್ಟಾರೆ ಹೇಳುವುದಾದರೆ ಪ್ರಯತ್ನ ಇದ್ದರೆ ಸಾಧನೆ ಮಾರ್ಗ ಕಷ್ಟವೇನು ಅಲ್ಲ. ಸರ್ಕಾರ ಪಂ.ಅ.ಅ.ಗಳಿಗೆ ಹೆಚ್ಚಿನ ಪ್ರೋತ್ಸಾಹ, ಅಧಿಕಾರ, ಸೌಲಭ್ಯಗಳನ್ನು ಕೊಟ್ಟು ಅವರಿಂದ ಇನ್ನು ಹೆಚ್ಚಿನ ಕೆಲಸ ಪಡೆಯಲು ನೀತಿ–ನಿಯಮಗಳನ್ನು ರೂಪಿಸಬೇಕು ಮತ್ತು ಯೋಜನೆಗಳ ನೀತಿ–ನಿಯಮದಲ್ಲಿ ಕೆಲವು ಬದಲಾವಣೆಯನ್ನು ತಂದು ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಬೇಕು. ಜನರಲ್ಲಿರುವ ಕೆಲವು ಮೂಢನಂಬಿಕೆಗಳನ್ನು ಬದಲಾಯಿಸಲು, ಬೇರೆಯೇ ದಾರಿಯನ್ನು




ಹುಡುಕಿದಾಗ ಇನ್ನು ಕೆಲವು ಯೋಜನೆ, ಆಂದೋಲನಗಳನ್ನು ಯಶಸ್ವಿಗೊಳಿಸಲು ಸಾಧ್ಯ. ಇದಕ್ಕೆ ಅಧಿಕಾರಿಗಳ ಮಾನಸಿಕ ಶಕ್ತಿ ಕುಂದದಂತೆ ನೋಡಿಕೊಂಡು ಅವರಿಗೆ ಸೂಕ್ತ ರಕ್ಷಣೆ, ಹೆಚ್ಚಿನ ಅಧಿಕಾರ ಕೊಟ್ಟು ಮೇಲ್ದರ್ಜೆಗೆ ಏರಿಸಿ ಜನರೊಂದಿಗೆ ನೇರ ಸಂಪರ್ಕದಲ್ಲಿರುವವರ ಅಗತ್ಯತೆ ಮನಗೊಂಡಾಗ ನಮ್ಮ ಪ್ರಯತ್ನ ಶಕ್ತಿಗೆ ಇನ್ನು ಹೆಚ್ಚಿನ ಬೆಂಬಲ ಸಿಗುತ್ತದೆ. ನಿಜವಾದ ಫಲಾನುಭವಿಗಳ ಆಯ್ಕೆ, ಯೋಜನೆಗಳ ಅನುಷ್ಠಾನಕ್ಕೆ ಪ್ರೇರಕವಾಗಲು ಸರ್ಕಾರದ ಪ್ರಯತ್ನವೇ ನಮ್ಮ ಪ್ರಯತ್ನ ಮತ್ತು ಗ್ರಾಮೀಣಾಭಿವೃದ್ಧಿಯ ಕನಸಿನ ಸಾಕಾರಕ್ಕೆ ಅಡಿಪಾಯ.

❑

## ಪರಿಸರ ನಿರ್ವಹಣ ಮಾರ್ಗಸೂಚಿ

*(ಆಗಸ್ಟ್ 2011ರ ಸಂಚಿಕೆಯಿಂದ ಮುಂದುವರೆದಿದೆ)*

### XII ಚರಂಡಿ ನಿರ್ಮಾಣ

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • 1.ಅಸಮರ್ಪಕ ಮಾದರಿಯ ಕಳಪೆ ಕಾರ್ಯ ನಿರ್ವಹಣೆಗೆ ಕಾರಣವಾಗಬಹುದು. | • ಉತ್ತಮ ಇಳಿಜಾರು, Cross section ಸಾಲುಗಳುಳ್ಳ ಮುಂತಾದವು ಹೂಳು ಕ್ರೋಢೀಕರಣ ವಾಗುವುದು ಹಾಗೂ ನೀರು ಹಿಮ್ಮುಖವಾಗಿ ಹರಿಯುವುದನ್ನು ತಡೆಗಟ್ಟುವುದಕ್ಕಾಗಿ ಸಮಂಜಸ ವಾದ ಚರಂಡಿ ಮಾದರಿಯನ್ನು ಸಿದ್ಧಪಡಿಸಬೇಕು. ಇದಕ್ಕಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ತಾಂತ್ರಿಕ ಸಹಾಯ ಪಡೆಯಬೇಕು. |
| • ಕಳಪೆಯಾದ ನಿರ್ವಹಣೆಯು ನೀರು ನಿಲ್ಲುವಿಕೆ ಮತ್ತು ಅದರಿಂದ ಸಮಸ್ಯೆಗಳು ಅಂದರೆ ಸೊಳ್ಳೆಗಳ ಮರಿಗಳ ಉತ್ಪಾದನೆಯ ನಿವೇಶನ ವಾಗುವುದು. | • ಚರಂಡಿಯಿಂದ ಹೂಳನ್ನು ತೆಗೆಯಬೇಕು. ಮತ್ತು ನಿಯಮಿತ ಕಾಲಾವಧಿಯಲ್ಲಿ ಸ್ವಚ್ಛಗೊಳಿಸಬೇಕು. |
| • ಕೃಷಿ ಪ್ರದೇಶಗಳ ಮೇಲೆ ತ್ಯಾಜ್ಯ ಸಾಮಗ್ರಿಗಳು ಹಾಗೂ ಚೂರು ಚೂರಾದ ಭಗ್ನಾವಶೇಷಗಳು ಗಳನ್ನು ವಿಲೇವಾರಿ ಮಾಡುವುದು. | • ಚರಂಡಿಯಲ್ಲಿ ಯಾವುದೇ ಕಸ/ಗಲೀಜು ಸೇರದಂತೆ ನೋಡಿಕೊಳ್ಳುವ ಬಗ್ಗೆ ಸಮುದಾಯಕ್ಕೆ ಶೈಕ್ಷಣಿಕ ವಾದ ಮಾರ್ಗದರ್ಶನ ಮಾಡಿ ಜಾಗೃತಿ ಮೂಡಿಸು ವುದು. ಇದರ ಪರಿಣಾಮವಾಗಿ ನೀರು ಯಾವುದೇ ಒಂದು ಕಡೆ ನಿಲ್ಲದಂತೆ ತಪ್ಪಿಸಬಹುದು. |
| • ಚರಂಡಿಯ ಗಲೀಜನ್ನು ಸಂಸ್ಕರಣೆ ಮಾಡದೆ ಬಿಟ್ಟರೆ ರೊಚ್ಚುಗುಂಡಿಯಾಗಿ ನೀರು ಕಲುಷಿತ ಗೊಳ್ಳುತ್ತದೆ. | • ಮಲಿನಗೊಂಡ ನೀರು ಮತ್ತು ಟ್ಯಾಂಕಿನಿಂದ ಹರಿಯುವ ಕೊಳೆತ ನೀರು ಸುಲಭವಾಗಿ ಹರಿದು ಹೋಗುವಂತೆ ಚರಂಡಿಯನ್ನು ಮಾಡುವುದು.<br>• ಮಲಿನಗೊಂಡ/ಕಲುಷಿತಗೊಂಡ ನೀರನ್ನು ಸಂಸ್ಕರಿಸಿ ಸುರಕ್ಷಿತವಾದ ಮತ್ತು ಮರು ಉಪಯೋಗದ ನೀರಾಗಿ ಪರಿವರ್ತಿಸುವುದು. |
| • ಮರಗಳನ್ನು ಕಟಾವುಗೊಳಿಸುವುದು. | • ಒಂದು ಮರ ಕಡಿದಲ್ಲಿ ಅದಕ್ಕೆ ಪ್ರತಿಯಾಗಿ ಕನಿಷ್ಠ ಎರಡಕ್ಕಿಂತ ಹೆಚ್ಚು ಸಸಿಗಳನ್ನು ನೆಡಬೇಕು. |

* ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಎಂ.ಎಸ್.ಐ.ಎಲ್. ಕಟ್ಟಡ, 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.

## XIII ಸಮುದಾಯದ ಜೈವಿಕ (ಕೊಳೆತ ಸಾಮಗ್ರಿಗಳ ಸಂಯೋಜನೆಯಿಂದ ಮಾಡಿದ) ಗೊಬ್ಬರ, ಭೂಮಿಯಲ್ಲಿ ಹೂಳುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ

| ಪರಿಸರ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • ವಿಶೇಷವಾಗಿ ನಗರ ಪ್ರದೇಶದ ಸುತ್ತ ಇರುವ ಗ್ರಾಮ ಪಂಚಾಯುತಿಗಳಲ್ಲಿ ಅಸಮರ್ಪಕ ಯೋಜನೆ ಮತ್ತು ಘನವಸ್ತು ತ್ಯಾಜ್ಯಗಳ ಕಳಪೆ ನಿರ್ವಹಣೆಗೆ ಕಾರಣವಾಗಬಹುದು. | • ಜೈವಿಕವಾಗಿ ಶಿಥಿಲಗೊಳ್ಳುವ ಹಾಗೂ ಜೈವಿಕವಾಗಿ ಶಿಥಿಲಗೊಳ್ಳದಿರುವ ತ್ಯಾಜ್ಯ ವಸ್ತುಗಳನ್ನು ಪ್ರತ್ಯೇಕಿಸುವುದು, ಅವುಗಳ ಮರುಪರಿವರ್ತನೆ ಮತ್ತು ಉಪಚಾರಕ್ಕೆ ಆಯ್ಕೆ ಮಾಡುವ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು. |
| • ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಬಗ್ಗೆ ಸೂಕ್ತ ಜಾಗೃತಿಯ ಕೊರತೆ ಮತ್ತು ಘನವಸ್ತುಗಳ ಸಂಗ್ರಹಿಸುವ ವ್ಯವಸ್ಥೆ ಇಲ್ಲದೆ ಇರುವುದು. ಘನ ತ್ಯಾಜ್ಯ ವಸ್ತುಗಳ ನಿರ್ವಹಣೆಯ ಕಳಪೆ ಮಟ್ಟದ್ದಾಗಲು ಕಾರಣವಾಗುವುದು. | • ಘನ ತ್ಯಾಜ್ಯ ವಸ್ತುಗಳ ಸಂಗ್ರಹಣೆಯನ್ನು ಪ್ರತಿಯೊಂದು ರಸ್ತೆ ಮತ್ತು ಮನೆಗಳ ಹಂತದಲ್ಲಿ ಮಾಡುವುದು.<br>• ಘನ ತ್ಯಾಜ್ಯ ವಸ್ತುಗಳನ್ನು ರಾಶಿ ಹಾಕುವುದಕ್ಕಾಗಿ ನಿರ್ದಿಷ್ಟ ಸ್ಥಳವನ್ನು ಗೊತ್ತು ಮಾಡುವುದು ಮತ್ತು ಘನ ತ್ಯಾಜ್ಯ ವಸ್ತುಗಳ ಶೇಖರಣೆ / ಸ್ಥಳವನ್ನು ಗುರುತು ಮಾಡಬೇಕು.<br>• ಘನ ತ್ಯಾಜ್ಯ ವಸ್ತುಗಳನ್ನು ನಿರ್ವಹಿಸುವ ಕೆಲಸಗಾರರು ಸಾಕಷ್ಟು ಸುರಕ್ಷತಾ ಕ್ರಮಗಳನ್ನು (ಸುರಕ್ಷತಾ ಉಪಕರಣಗಳು, ಆರೋಗ್ಯಕರ ಅಭ್ಯಾಸಗಳು) ಅನುಸರಿಸಬೇಕು. |
| • ಭೂಮಿಯ ಅವಶ್ಯಕತೆ. | • ಸರ್ಕಾರ / ಗ್ರಾಮ ಪಂಚಾಯತಿ / ಸಮುದಾಯದ ಪ್ರತಿಬಂಧಕವಿಲ್ಲದ ಅಥವಾ ಯಾವುದೇ ಅಡಚಣೆಯಿಲ್ಲದೆ ಇರುವ ಭೂಮಿಯನ್ನು ಈ ಉದ್ದೇಶಕ್ಕಾಗಿ ಬಳಸುವುದು. ಸಣ್ಣ ಭೂಮಿಯ ಸ್ವಾಧೀನವನ್ನು ಸಮಾಲೋಚನೆಯ ಮೂಲಕ/ ಖರೀದಿಸಬೇಕು. ಅಥವಾ ಸ್ವಯಂಪ್ರೇರಣೆ (ಜೊತೆಗೆ ಸುರಕ್ಷತೆಯುಳ್ಳ ಸ್ಥಳದಲ್ಲಿ) ಮೂಲಕ ಪಡೆದುಕೊಳ್ಳಬೇಕು. |

*(ಮುಂದುವರೆಯುತ್ತದೆ)*

## ಕರ್ನಾಟಕ ಸರ್ಕಾರ

ಸಂ. ಗ್ರಾಅಪ : 174 : ಗ್ರಾಪಂಅ : 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 08–07–2011

## ಸುತ್ತೋಲೆ

**ವಿಷಯ :** ಬಾಲ್ಯ ವಿವಾಹವನ್ನು ತಡೆಗಟ್ಟುವ ಹಾಗೂ ಮಕ್ಕಳ ಹಕ್ಕನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಅನುಸರಿಸಬೇಕಾದ ವಿಧಿ ವಿಧಾನಗಳ ಮಾರ್ಗಸೂಚಿಗಳು.

**ಉಲ್ಲೇಖ:** 1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 638 ಗ್ರಾಪಂಅ 2007, ದಿನಾಂಕ: 30–10–2007.

2. ರಾಜ್ಯ ಉಚ್ಛ ನ್ಯಾಯಾಲಯದ ನಿರ್ದೇಶನದನ್ವಯ ರಚಿತವಾದ ಅತ್ಯುನ್ನತ ಸಮಿತಿಯ ವರದಿ.

3. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಸಿಡಿ 377 ಎಸ್‌ಡಬ್ಲ್ಯೂಡಬ್ಲ್ಯೂ 2004, ದಿನಾಂಕ: 6–2–2008

* * *

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 3–ಎ, 58 ಮತ್ತು 61 (2) ಸಿ ರಡಿಯ ನಿರೂಪಣೆಯಂತೆ ಗ್ರಾಮೀಣ ಪ್ರದೇಶದ ಮಹಿಳಾ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಚರ್ಚಿಸಿ ಅವರುಗಳ ಸಾಮಾಜಿಕ ಭದ್ರತೆಗಾಗಿ ಕಾರ್ಯಕ್ರಮ ರೂಪಿಸುವುದು ಪಂಚಾಯತ್ ರಾಜ್ ಸಂಸ್ಥೆಗಳ ಅದರಲ್ಲೂ ಕೆಳಸ್ತರದ ಹಂತವಾದ ಗ್ರಾಮ ಪಂಚಾಯಿತಿಯ ಆದ್ಯ ಕರ್ತವ್ಯವಾಗಿರುತ್ತದೆ.

ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸುವ ಹಾಗೂ ಅವರುಗಳ ಸಾಮಾಜಿಕ, ಭೌತಿಕ ಮತ್ತು ಬೌದ್ಧಿಕ ರಕ್ಷಣೆಗಾಗಿ ವಿವರವಾಗಿ ಚರ್ಚಿಸಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲು ಮಕ್ಕಳ ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸುವಂತೆ ಉಲ್ಲೇಖ (1) ರಲ್ಲಿನ ಸುತ್ತೋಲೆಯಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಬಾಲ್ಯ ವಿವಾಹವನ್ನು ತಡೆಗಟ್ಟಲು ರಾಜ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 11154/2006 ರಲ್ಲಿ ದಿನಾಂಕ: 10–11–2010 ರಂದು ನೀಡಿರುವ ನಿರ್ದೇಶನದನ್ವಯ ದಿನಾಂಕ: 21–12–2010 ರ ಸಂಖ್ಯೆ: 310/2010 ರಲ್ಲಿ ರಚಿತವಾಗಿದ್ದ ಕೋರ್ ಕಮಿಟಿಯು ಸರ್ಕಾರಕ್ಕೆ ಸಲ್ಲಿಸಿರುವ ಶಿಫಾರಸ್ಸಿನನ್ವಯ ರಾಜ್ಯ ಸರ್ಕಾರವು ಅನುಸರಣಾ ಕ್ರಮವನ್ನು ಕೈಗೊಳ್ಳಬೇಕಾಗಿರುತ್ತದೆ. ಈ ಸಂಬಂಧವಾಗಿ ಗ್ರಾಮೀಣ ಪ್ರದೇಶ ಜನತೆಗೆ ತಿಳುವಳಿಕೆಯನ್ನು ಮೂಡಿಸುವುದು ಗ್ರಾಮ ಪಂಚಾಯಿತಿಗಳ ಕರ್ತವ್ಯವಾಗಿರುತ್ತದೆ. ಗ್ರಾಮ ಪಂಚಾಯಿತಿಗಳು ವಾರ್ಡ್ ಸಭೆ/ಗ್ರಾಮ ಸಭೆಗಳಲ್ಲಿ ಬಾಲ್ಯ ವಿವಾಹದಂತಹ ಅನಿಷ್ಟ ಸಾಮಾಜಿಕ ಪಿಡುಗಿನ ಬಗ್ಗೆ ಚರ್ಚಿಸಿ ಇಂತಹ ಅಮಾನವೀಯ ಪದ್ಧತಿಯನ್ನು ತಡೆಹಿಡಿಯಲು, ಖಂಡಿಸಲು ಹಾಗೂ ಅಂತಹ ಕೃತ್ಯಗಳು ಪುನರಾವರ್ತನೆಯಾಗದಂತೆ ಜನ–ಸಾಮಾನ್ಯರಲ್ಲಿ ತಿಳುವಳಿಕೆ ಮೂಡಿಸಲು ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 61 (2) ರಡಿ ರಚಿತವಾಗಿರುವ ಸಾಮಾಜಿಕ ನ್ಯಾಯ ಸಮಿತಿಯು ಪ್ರತಿ ಸಭೆಯಲ್ಲಿಯೂ ಬಾಲ್ಯ ವಿವಾಹದ ಸಮಸ್ಯೆಯ ಬಗ್ಗೆ ಚರ್ಚಿಸಲು, ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಿ ನಿಗಾ ವಹಿಸಲು ಸೂಚಿಸಿದೆ.

ಪಂಚಾಯತ್ ರಾಜ್ ಸಂಸ್ಥೆಯ ಸದಸ್ಯರುಗಳಿಗೆ ಬಾಲ್ಯ ವಿವಾಹದ ಸಮಸ್ಯೆಗಳ ಬಗ್ಗೆ ಅರಿವನ್ನು ಮೂಡಿಸಲು ಕ್ರಮ ವಹಿಸಬೇಕು. ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, ಸದಸ್ಯರುಗಳು ಹಾಗೂ ಪಂಚಾಯಿತಿ

ಅಭಿವೃದ್ಧಿ ಅಧಿಕಾರಿಗಳನ್ನೊಳಗೊಂಡಂತೆ ಕಾರ್ಯನಿರತ ಅಧಿಕಾರಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮಗಳಲ್ಲಿ ಬಾಲ್ಯ ವಿವಾಹದ ಪಿಡುಗು ಹಾಗೂ ಮಕ್ಕಳ ಗ್ರಾಮ ಸಭೆಯ ಮಹತ್ವದ ಬಗ್ಗೆ ಸೂಕ್ತ ತರಬೇತಿಯನ್ನು ನೀಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಸೂಚಿಸಿದೆ.

ಬಾಲ್ಯ ವಿವಾಹ ಪದ್ಧತಿಯ ಪಿಡುಗನ್ನು ನಿವಾರಿಸುವ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹೊರಡಿಸಿರುವ ಉಲ್ಲೇಖ (3) ರಲ್ಲಿನ ಅಧಿಸೂಚನೆಯನ್ವಯ ಗ್ರಾಮ ಪಂಚಾಯಿತಿಗಳು ಸೂಕ್ತ ಕ್ರಮ ವಹಿಸಬೇಕು. ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯವನ್ನು ನಿರ್ಮಿಸಬೇಕು. ಹಾಗೂ ಇದನ್ನು ಖಚಿತಪಡಿಸಿಕೊಳ್ಳಬೇಕು.

2012 ನೇ ನವೆಂಬರ್ ಮಾಹೆಯಿಂದ ಸರ್ಕಾರದ ವತಿಯಿಂದ ಯಾವುದೇ ಸವಲತ್ತುಗಳನ್ನು ಪಡೆಯಲು ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅಂತಹ ವ್ಯಕ್ತಿಗಳಿಂದ ಈ ಕೆಳಕಂಡ ಪ್ರತಿಜ್ಞಾ ವಿಧಿಯನ್ನು ಪಡೆಯಬೇಕು.

"ಬಾಲ್ಯ ವಿವಾಹವನ್ನು ನಾನು ನೆರವೇರಿಸುವುದಿಲ್ಲ. ಅಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದಿಲ್ಲ. ಮತ್ತು ಇಂತಹ ಸಂಭವನೀಯ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ತಪ್ಪಿದಲ್ಲಿ, ನನಗೆ ಒದಗಿಸಿರುವ ಫಲಾನುಭವವನ್ನು ಹಿಂಪಡೆದುಕೊಳ್ಳಬಹುದು."

ಪ್ರತಿ ಗ್ರಾಮ ಪಂಚಾಯಿತಿಯ ಹಂತದಲ್ಲಿ ಇಂತಹ ಪ್ರಕರಣಗಳು ಸಂಭವಿಸಬಹುದಾದ ಕುಟುಂಬಗಳ ಬಗ್ಗೆ ಸಮೀಕ್ಷೆ ನಡೆಸಿ ಅವರುಗಳಿಗೆ ತಿಳುವಳಿಕೆ ಮೂಡಿಸುವುದು ಹಾಗೂ ಅಗತ್ಯ ನೆರವನ್ನು ನೀಡುವಂತೆ ಸೂಚಿಸಿದೆ. ಈ ಸಂಬಂಧವಾಗಿ ಅಂಕಿ ಅಂಶಗಳ ಪ್ರದೇಶವಾರು ವಿವರಗಳ ದಾಖಲಾತಿಯನ್ನು ಗ್ರಾಮ ಪಂಚಾಯಿತಿಯಲ್ಲಿ ನಿರ್ವಹಿಸಬೇಕು. 0–18 ವಯೋಮಾನದ ಮಕ್ಕಳ ವಿವರಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ನಿರ್ವಹಿಸಲು ಅನುವಾಗುವಂತೆ MIS ತಂತ್ರಾಂಶ ರೂಪಿಸಬೇಕು.

ಗ್ರಾಮ ಪಂಚಾಯಿತಿಗಳ ಆದ್ಯ ಕರ್ತವ್ಯಗಳಲ್ಲಿ ಸೇರ್ಪಡೆಗೊಳಿಸಿರುವ ಮೇಲಿನ ಅಂಶಗಳ ಬಗ್ಗೆ ವಿಚಕ್ಷಣೆ ವಹಿಸದ, ಜವಾಬ್ದಾರಿಯನ್ನು ನಿರ್ವಹಿಸಿದ ಹಾಗೂ ಈ ಸಂಬಂಧವಾಗಿ ಉದಾಸೀನ ಮನೋಭಾವ ಪ್ರದರ್ಶಿಸುವ ಪಂಚಾಯತ್ ರಾಜ್ ಸಂಸ್ಥೆಗಳ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 268 ರಡಿ ಕ್ರಮ ವಹಿಸುವಂತೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿಗಳು ಅದರಲ್ಲೂ ವಿಶೇಷವಾಗಿ ಗ್ರಾಮ ಪಂಚಾಯಿತಿ ಹಂತದ ಅಧಿಕಾರಿ/ನೌಕರರುಗಳ ವಿರುದ್ಧ ಕಠಿಣ ಕ್ರಮ ಅಂದರೆ ಕಾರ್ಯನಿರ್ವಹಣಾ ವರದಿಯಲ್ಲಿ ಆಕ್ಷೇಪಣಾ ಅಭಿಪ್ರಾಯವನ್ನು ನಮೂದಿಸಬೇಕು. ಹಾಗೂ ಅಂತಹವರ ವಿರುದ್ಧ ಕಠಿಣ ಶಿಕ್ಷೆಯನ್ನು ನೀಡಲು ಕ್ರಮ ವಹಿಸಬೇಕು.

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು.
2) * ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.

* ಈ ಸುತ್ತೋಲೆಯ ಪ್ರತಿಯನ್ನು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಳುಹಿಸಿ ಸುತ್ತೋಲೆಯಂತೆ ಕ್ರಮ ವಹಿಸುವಂತೆ ನಿರ್ದೇಶನ ನೀಡಲು ಸೂಚಿಸಿದೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆ ಸಲುವಾಗಿ ಸೃಜಿಸಲಾದ ಪ್ರತ್ಯೇಕ ಇಂಜಿನಿಯರಿಂಗ್ ವಿಭಾಗಗಳನ್ನು ಕುರಿತು.

**ಉಲ್ಲೇಖ** : 1. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 32 ಗ್ರಾನೀಸ (5) 08, ದಿನಾಂಕ : 26.10.2010. 29.11.2010 ಮತ್ತು 22.01.2011.

2. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 32 ಗ್ರಾನೀಸ (5) 08, ದಿನಾಂಕ : 27.01.2010.

3. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 32 ಗ್ರಾನೀಸ (5) 08, ದಿನಾಂಕ : 15.04.2011, 20.04.2011 ಮತ್ತು 16.07.2011.

* * *

**ಪೀಠಿಕೆ**

ಕೇಂದ್ರ ಪುರಸ್ಕೃತ NRDWP ಮಾಗಸೂಚಿಗಳನ್ವಯ ಮಿಷನ್ ಮೋಡ್‌ನಲ್ಲಿ ರಾಜ್ಯ ವಲಯ, ಕೇಂದ್ರ ವಲಯ ಮತ್ತು ವಿದೇಶಿ ನೆರವಿನ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳನ್ನು ನಿಗದಿತ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಪ್ರತ್ಯೇಕ ಇಂಜಿನಿಯರಿಂಗ್ ವಿಭಾಗಗಳನ್ನು ಅವುಗಳಿಗೆ ಹೊಂದಿಸಿದ ಉಪ ವಿಭಾಗಗಳೊಂದಿಗೆ ಸೃಜಿಸಿ, ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಘೋಷಿಸಲಾಗಿದೆ. ತದನಂತರ, ಸದರಿ PRED ಮತ್ತು RWS ಇಂಜಿನಿಯರಿಂಗ್ ವಿಭಾಗಗಳ ಕಾರ್ಯತಂತ್ರ ವಿಧಾನ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಾಗೂ ವೇತನ ಡ್ರಾ ಮಾಡುವ ಕುರಿತಂತೆ, ಮೇಲೆ ಓದಲಾದ ಸುತ್ತೋಲೆ/ಆದೇಶಗಳಲ್ಲಿ ಅಗತ್ಯ ಸ್ಪಷ್ಟೀಕರಣ/ನಿರ್ದೇಶನಗಳನ್ನು ನೀಡಿ ಸಾರ್ವಜನಿಕ ಹಿತದೃಷ್ಟಿಯಿಂದ ಆದೇಶ ಹೊರಡಿಸಲಾಗಿದೆ.

ಆದಾಗ್ಯೂ, ಹೊಸದಾಗಿ ಸೃಜಿಸಲಾಗಿರುವ ಗ್ರಾಮೀಣ ನೀರು ಸರಬರಾಜು ಇಂಜಿನಿಯರಿಂಗ್ ವಿಭಾಗಗಳಲ್ಲಿ ಮತ್ತು ಘೋಷಿಸಲಾದ PRED ಇಂಜಿಂಯರಿಂಗ್ ವಿಭಾಗಗಳ ವ್ಯಾಪ್ತಿಗೆ ಬರುವ ಸಿಬ್ಬಂದಿ ಬಲವರ್ಧನೆಯಾಗದಿರುವುದಿಂದ ಹಾಗೂ ಈ ಎರಡು ವಿಭಾಗಗಳ ವ್ಯಾಪ್ತಿಯಲ್ಲಿನ ಉಪ ವಿಭಾಗಗಳ ವ್ಯಾಪ್ತಿಗೆ ಒಂದಕ್ಕಿಂತ ಹೆಚ್ಚಿನ ತಾಲ್ಲೂಕುಗಳನ್ನು ಒಳಪಡಿಸಿರುವುದರಿಂದ, ನಿರೀಕ್ಷಿತ ಮಟ್ಟದಲ್ಲಿ ಅನುಮೋದಿತ ಹಾಗೂ ಉದ್ದೇಶಿತ ಗ್ರಾಮೀಣಾಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತಂತೆ, ಚುನಾಯಿತ ಜನಪ್ರತಿನಿಧಿಗಳು ಪ್ರಶ್ನಿತ ಹೊಸ ವ್ಯವಸ್ಥೆಯನ್ನು ಬದಲಿಸಿ, ಹಿಂದಿನ ಮಾದರಿಯಲ್ಲಿಯೇ ಎಲ್ಲಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಚಟುವಟಿಕೆ/ಕಾಮಗಾರಿಗಳನ್ನು PRED ವ್ಯಾಪ್ತಿಯ ಇಂಜಿನಿಯರಿಂಗ್ ವಿಭಾಗಗಳು ನೋಡಿಕೊಳ್ಳಲು ಅನುಕೂಲವಾಗುವಂತೆ ಆದೇಶ ಹೊರಡಿಸಲು ವಿನಂತಿಸಿರುತ್ತಾರೆ. ಸದರಿ ವ್ಯವಸ್ಥೆಯ ಕಾರ್ಯವೈಖರಿ/ಕಾರ್ಯಕ್ಷಮತೆಯನ್ನು ಪರಿಶೀಲಿಸಿ, ಉದ್ದೇಶಿತ ಪ್ರತ್ಯೇಕ PRED ಮತ್ತು RWS ಇಂಜಿನಿಯರಿಂಗ್/ ವಿಭಾಗಗಳಿಗೆ ಅಗತ್ಯವಿರುವ ಸಿಬ್ಬಂದಿ ಒದಗಿಸಿ ಬಲವರ್ಧನೆ ಮಾಡುವ ತಹಲ್, ಹಿಂದಿನ ವ್ಯವಸ್ಥೆಯ ಮಾದರಿಯಲ್ಲಿಯೇ ಇಂಜಿನಿಯರಿಂಗ್ ವಿಭಾಗಗಳನ್ನು ಮುಂದುವರಿಸಲು ನಿರ್ಧರಿಸಿದೆ. ಆದ್ದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/ /ಗ್ರಾನೀಸ (2) 2010 ಬೆಂಗಳೂರು, ದಿನಾಂಕ : 05.08.2011**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ರಾಜ್ಯದಲ್ಲಿ ಹೊಸದಾಗಿ ಸೃಜಿಸಿರುವ/ಘೋಷಿಸಿರುವ PRED ಮತ್ತು RWS ಇಂಜಿನಿಯರಿಂಗ್ ವಿಭಾಗಗಳ ಸಂಬಂಧ, ಹೊರಡಿಸಿರುವ ಮೇಲೆ ಓದಲಾಗಿರುವ ಎಲ್ಲಾ ಆದೇಶಗಳನ್ನು ಹಿಂಪಡೆಯಲಾಗಿದೆ.

2. ಅಂತೆಯೇ, ಮುಂದಿನ ಆದೇಶದವರೆಗೆ, ಅಂದರೆ ಪ್ರತ್ಯೇಕ ಇಂಜಿನಿಯರಿಂಗ್ ವಿಭಾಗಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಆಡಳಿತಾತ್ಮಕ ಮತ್ತು ತಾಂತ್ರಿಕ ಸಿಬ್ಬಂದಿ ಮಂಜೂರು ಮಾಡಿ ಸರ್ಕಾರವು ಹೊರಡಿಸಬಹುದಾದ ಆದೇಶದ ತಹಲ್, ದಿನಾಂಕ : 26.10.2010ರ ಆದೇಶಕ್ಕಿಂತ ಹಿಂದೆ ಇದ್ದ ಮಾದರಿಯಲ್ಲಿಯೇ PRED ಇಂಜಿನಿಯರಿಂಗ್ ವಿಭಾಗಗಳು ಗ್ರಾಮೀಣ ನೀರು ಸರಬರಾಜು ಜೊತೆಗೆ ಎಲ್ಲಾ ಗ್ರಾಮೀಣಾಭಿವೃದ್ಧಿ ಚಟುವಟಿಕೆ/ಕಾಮಗಾರಿಗಳ ಅನುಷ್ಠಾನ ಮತ್ತು ನಿರ್ವಹಣೆಯನ್ನು ನೋಡಿಕೊಳ್ಳತಕ್ಕದ್ದು.

3. ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ನಂ. ಗ್ರಾಅಪ/358/ಗ್ರಾಪಂಅ/2010

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 03–08–2011

## ಸುತ್ತೋಲೆ

**ವಿಷಯ :** ಆರ್.ಐ.ಡಿ.ಎಫ್.–14, 15 ಮತ್ತು 16 ರಡಿ ಮಂಜೂರಾದ ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡ ನಿರ್ಮಾಣ ಕಾರ್ಯವನ್ನು ಭೌತಿಕ ಮತ್ತು ಆರ್ಥಿಕವಾಗಿ ಶೀಘ್ರವಾಗಿ ಮುಕ್ತಾಯಗೊಳಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 160 ಗ್ರಾಪಂಅ 2009 (ಭಾಗ) ದಿನಾಂಕ : 6–10–2009.
2. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 160 ಗ್ರಾಪಂಅ 2009 (ಭಾಗ) ದಿನಾಂಕ : 11–02–2010.
3. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 276 ಗ್ರಾಪಂಅ 2009 (ಭಾಗ) ದಿನಾಂಕ : 14–12–2009.
4. ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 2 ಜಡ್‌ಪಿಎ 2010, ದಿನಾಂಕ : 7–4–2010, 18–06–2010, 30–7–2010, 23–09–2010 ಮತ್ತು 20–12–2010.
5. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 173 ಗ್ರಾಪಂಅ 2010, ದಿನಾಂಕ : 06–06–2011.
6. ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 2 ಜಡ್‌ಪಿಎ 2011, ದಿನಾಂಕ: 8–4–2011.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಇವರ ಪತ್ರ ಸಂಖ್ಯೆ : ಕೆಆರ್ ಐಡಿಎಲ್/ಕಾಮಗಾರಿ/ಗ್ರಾಪಂ/2011–12, ದಿನಾಂಕ : 12/19–7–2011.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಆರ್.ಐ.ಡಿ.ಎಫ್–14 ರಡಿ 269 ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅಂದಾಜು ವೆಚ್ಚ ₹. 44.38 ಕೋಟಿಗಳಲ್ಲಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಇವರ ಮುಖಾಂತರ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ 2009–10ನೇ ಸಾಲಿನ ಲೆಕ್ಕ ಶೀರ್ಷಿಕೆ 2515–00–197–1–22 (ಯೋಜನೆ) (ಲಿಂಕ್ ಹೆಡ್ 2515–00–103–0–03) ರಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದಲೇ ಜಿಲ್ಲಾ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಮಾಡಿರುತ್ತದೆ.

ಉಲ್ಲೇಖ (3) ರ ಸರ್ಕಾರದ ಆದೇಶದಲ್ಲಿ ಆರ್.ಐ.ಡಿ.ಎಫ್–15 ರಡಿ 103 ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅಂದಾಜು ವೆಚ್ಚ ₹. 17.00 ಕೋಟಿಗಳಲ್ಲಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಇವರ ಮುಖಾಂತರ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಉಲ್ಲೇಖ (4) ರ ಸರ್ಕಾರದ ಆದೇಶಗಳಲ್ಲಿ ಆರ್ಥಿಕ ಇಲಾಖೆಯು ಲೆಕ್ಕ ಶೀರ್ಷಿಕೆ 2515–00–197–1–22 ರಡಿ 4 ತ್ರೈಮಾಸಿಕ ಕಂತುಗಳಲ್ಲಿ ತಾಲ್ಲೂಕು ಪಂಚಾಯಿತಿಗಳಿಗೆ ಸಂಪೂರ್ಣ ಅನುದಾನ ಬಿಡುಗಡೆ ಮಾಡಿರುತ್ತದೆ.

ಉಲ್ಲೇಖ (5) ರ ಸರ್ಕಾರದ ಆದೇಶದಲ್ಲಿ ಆರ್.ಐ.ಡಿ.ಎಫ್–16 ರಡಿ 84 ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅಂದಾಜು ವೆಚ್ಚ ₹. 13.86 ಕೋಟಿಗಳಲ್ಲಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಇವರ ಮುಖಾಂತರ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಉಲ್ಲೇಖ (6) ರ ಸರ್ಕಾರದ ಆದೇಶಗಳಲ್ಲಿ ಆರ್ಥಿಕ ಇಲಾಖೆಯು ಲೆಕ್ಕ ಶೀರ್ಷಿಕೆ 2515–00–197–1–22 ರಡಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನವಾಗಿ ₹. 197.47 ಲಕ್ಷಗಳನ್ನು ತಾಲ್ಲೂಕು ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಮಾಡಿರುತ್ತದೆ.

ಹೀಗಿದ್ದರೂ ಸಹ ಈ ಕಟ್ಟಡಗಳ ನಿರ್ಮಾಣ ಕಾರ್ಯವು ಮಂದಗತಿಯಲ್ಲಿ ಸಾಗುತ್ತಿರುವುದನ್ನು ಸರ್ಕಾರವು ತೀವ್ರವಾಗಿ ಪರಿಗಣಿಸಿದೆ. ಜೊತೆಗೆ ಆರ್.ಐ.ಡಿ.ಎಫ್–14 ಮತ್ತು 15 ರಡಿ ಮಂಜೂರಾಗಿದ್ದ ಕೆಲವು ಗ್ರಾಮ ಪಂಚಾಯಿತಿ ಕಚೇರಿ ಕಟ್ಟಡಗಳ ಬದಲಾಗಿ ಬೇರೆ ಗ್ರಾಮ ಪಂಚಾಯಿತಿಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಿರುವ ಪ್ರಕರಣಗಳಲ್ಲಿ ಇದುವರೆವಿಗೂ ಕಾರ್ಯಾದೇಶ ನೀಡದಿರುವುದೂ ಸಹ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ ಆರ್.ಐ.ಡಿ.ಎಫ್–14 ಮತ್ತು 15 ರಡಿ ಮಂಜೂರಾಗಿರುವ ಎಲ್ಲಾ ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಭೌತಿಕವಾಗಿ ಮತ್ತು ಆರ್ಥಿಕವಾಗಿ ದಿನಾಂಕ : 31–12–2011 ರೊಳಗೆ ಹಾಗೂ ಆರ್.ಐ.ಡಿ.ಎಫ್–16 ರಡಿ ಮಂಜೂರಾಗಿರುವ ಕಾಮಗಾರಿಗಳನ್ನು ದಿನಾಂಕ : 31–12–2012 ರೊಳಗೆ ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸಂಬಂಧಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560 001.
ದೂರವಾಣಿ/ ಫ್ಯಾಕ್ಸ್ 080–22372738 E-mail: nregs-ka@nic.in

ಸಂ: ಗ್ರಾಅಪ 204 ಉಖಾಯೋ 2011 ದಿನಾಂಕ : 22–08–2011

## ಸುತ್ತೋಲೆ

**ವಿಷಯ** : ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳಲ್ಲಿ ನಿರ್ವಹಿಸಬೇಕಾದ ದಾಖಲೆಗಳ ಹಾಗೂ ಕಾಮಗಾರಿ ಮುಕ್ತಾಯ ಪ್ರಮಾಣ ಕುರಿತು.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ/ಗೊಳಿಸಲಾಗುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಮರ್ಪಕವಾಗಿ ದಾಖಲಾತಿಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಈಗಾಗಲೇ ಹಲವಾರು ಸುತ್ತೋಲೆ/ ಆದೇಶಗಳನ್ನು ಸರಕಾರದಿಂದ ಹೊರಡಿಸಲಾಗಿರುತ್ತದೆ. ಇದರೊಂದಿಗೆ ಈ ಕೆಳಗಿನಂತೆ ದಾಖಲೆಗಳನ್ನು ನಿರ್ವಹಿಸಲು ಸೂಚಿಸಿದೆ.

1) ಪ್ರತಿ ಕಾಮಗಾರಿಗೆ ಒಂದು ಪ್ರತ್ಯೇಕ ಕಡತವನ್ನು ಕಡ್ಡಾಯವಾಗಿ ನಿರ್ವಹಿಸುವುದು.
2) ಸದರಿ ಕಡತದಲ್ಲಿ ಕಡ್ಡಾಯವಾಗಿ ನಿರ್ವಹಿಸಬೇಕಾದ ದಾಖಲಾತಿಗಳ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.
3) ಕಾಮಗಾರಿಯ ಛಾಯಾ ಚಿತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಿಗದಿತ ನಮೂನೆಯಲ್ಲಿ ನಿರ್ವಹಿಸುವುದು (ಲಗತ್ತಿಸಿದೆ)
4) ಎಂಐಎಸ್ ನಲ್ಲಿ ಅವಲೋಕಿಸಿದಾಗ ಯೋಜನೆಯ ಪ್ರಾರಂಭದಿಂದ ಹಲವಾರು ಕಾಮಗಾರಿಗಳು ಅಪೂರ್ಣಗೊಂಡಿರುವುದಾಗಿ ವರದಿಕರಿಸಿದ್ದು ಅಥವಾ ಪೂರ್ಣಗೊಂಡ ಕಾಮಗಾರಿಯ ಮುಕ್ತಾಯ ಪ್ರಮಾಣಪತ್ರವಿಲ್ಲದೇ ಹಾಗೆಯೇ ಮುಂದುವರೆದ ಕಾಮಗಾರಿಯಾಗಿ ಇದುವರೆಗೂ ತೋರಿಸಲಾಗುತ್ತಿದೆ. ಕೇಂದ್ರ ಸರ್ಕಾರವು ಭಾರೀ ಪ್ರಮಾಣದಲ್ಲಿ ಕಾಮಗಾರಿಗಳು ಈ ರೀತಿ ಮುಂದುವರೆದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ. ಆದ್ದರಿಂದ, ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸಂಬಂಧ ತಮ್ಮ ವೈಯುಕ್ತಿಕ ಗಮನಹರಿಸಿ, ಪೂರ್ಣಗೊಂಡ ಕಾಮಗಾರಿಗಳಿಗೆ ಅನುಷ್ಠಾನಾಧಿಕಾರಿಗಳಿಂದ ನಿಗದಿತ ಪ್ರಪತ್ರ ಪಿಡಬ್ಲ್ಯೂಜಿ–46 ರಲ್ಲಿ (ಲಗತ್ತಿಸಿದೆ) ಮಾಹಿತಿಯೊಂದಿಗೆ ಕಡ್ಡಾಯವಾಗಿ ಎಂಐಎಸ್‌ನಲ್ಲಿ ದಾಖಲಿಸುವುದು.

(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಂದ ಟಿಪ್ಪಣೆ ಅನುಮೋದಿಸಲ್ಪಟ್ಟಿದೆ.)

**(ಪಿ. ಶಿವಶಂಕರ)**
ನಿರ್ದೇಶಕರು,
ಮಹಾತ್ಮಾಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಕಡತದ ಒಳಗೆ ಲಗತ್ತಿಸಬೇಕಾದ ದಾಖಲೆಗಳು

| ಕ್ರ.ಸಂ. | ವಿವರ | ಪುಟ ಸಂಖ್ಯೆ |
|---|---|---|
| 1 | ನಮೂನೆ–6 ಕೆಲಸಕ್ಕಾಗಿ ಅರ್ಜಿ | |
| 2 | ನಮೂನೆ–8 ಕೆಲಸಕ್ಕಾಗಿ ಹಾಜರಾಗಲು ತಿಳಿಸುವ ನೋಟೀಸ್ | |
| 3 | ನಮೂನೆ–9 ಕೆಲಸಕ್ಕಾಗಿ ತಿಳಿಸುವ ಸಾರ್ವಜನಿಕ ನೋಟೀಸ್ | |
| 4 | ಕಾಮಗಾರಿಯ ಬೇಡಿಕೆ ಅರ್ಜಿ | |
| 5 | ಕಾಮಗಾರಿ ಅಂದಾಜು ಪಟ್ಟಿ | |
| 6 | ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿ ಪತ್ರ | |
| 7 | ಕಾಮಗಾರಿ ಪ್ರಾರಂಭದ ಆದೇಶ ಪತ್ರ (ಕಾರ್ಯಾದೇಶ) | |
| 8 | ಎನ್.ಎಂ.ಆರ್. ಹಾಜರಾತಿ ಪಟ್ಟಿ | |
| 9 | ಎಂ.ಬಿ. ಪುಸ್ತಕದ ನಕಲು ಪ್ರತಿ | |
| 10 | ಎಂ.ಐ.ಎಸ್. ಮುದ್ರಿತ ಎನ್.ಎಂ.ಆರ್. ಪ್ರತಿ | |
| 11 | ಸಾಮಗ್ರಿ ವೆಚ್ಚದ ವೋಚರ್‌ಗಳು | |
| 12 | ಕೂಲಿ ಪ್ರತಿಯನ್ನು ಸಂಬಂಧಿಸಿದ ಬ್ಯಾಂಕ್/ಅಂಚೆ ಕಛೇರಿಗೆ ಸಲ್ಲಿಸಿದ ವಿವರ | |
| 13 | ಸಾಮಗ್ರಿ ವೆಚ್ಚದ ಹಣ ಪಾವತಿಯ ವಿವರಗಳು | |
| 14 | ಕಾಮಗಾರಿಯ ಮೂರು ಪೋಟೋ ಪ್ರತಿಗಳು (ಹಂತವಾರು) | |
| 15 | ಕಾಮಗಾರಿಯ ಪೂರ್ಣಗೊಂಡ ಬಗ್ಗೆ ಅನುಷ್ಠಾನ ಇಲಾಖೆಯಿಂದ ದೃಢೀಕರಣ ಪತ್ರ | |
| 16 | ಕಾಮಗಾರಿಗಳ ಸ್ಥಳಗಳಲ್ಲಿ ಹಾಕಿದ ನಾಮಫಲಕದ ವಿವರ (ಅಳತೆ 3 X 2.5) | |

**________________ಜಿಲ್ಲಾ ಪಂಚಾಯಿತ್**

**____________ ತಾಲ್ಲೂಕು ಪಂಚಾಯತ್ ______________ ಗ್ರಾಮ ಪಂಚಾಯಿತಿ**

**ಸಾಲಿನ ಕಾಮಗಾರಿಗಳ ವಿವಿಧ ಹಂತದ ಛಾಯಾ ಚಿತ್ರಗಳು**

1. ಯೋಜನೆ ಹೆಸರು — ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
2. ಗ್ರಾಮದ ಹೆಸರು : ____________________
3. ಕಾಮಗಾರಿಯ ಹೆಸರು : ____________________
4. ಕಾಮಗಾರಿ ಕೊಡ್ ನಂಬರ್ : ____________________
5. ಅಂದಾಜು ಮೊತ್ತ ರೂ. : ____________________
6. ವಾಸ್ತವ ವೆಚ್ಚ ರೂ. : ____________________
7. ಕಾಮಗಾರಿ ಪ್ರಾರಂಭಿಸಿದ ದಿನಾಂಕ : ____________________
8. ಉತ್ಪನ್ನವಾದ ಮಾನವ ದಿನಗಳು : ____________________
9. ಕಾಮಗಾರಿ ಪೂರ್ತಿಯಾದ ದಿನಾಂಕ : ____________________

| | | |
|---|---|---|
| ಅನುಷ್ಠಾನ ಅಧಿಕಾರಿ | ಕಾರ್ಯದರ್ಶಿ<br>ಗ್ರಾಮ ಪಂಚಾಯತಿ | ಅಧ್ಯಕ್ಷರು<br>ಗ್ರಾಮ ಪಂಚಾಯತಿ |

| ಮೊದಲನೇ ಹಂತ (ಕಾಮಗಾರಿ ಪ್ರಾರಂಭಿಸುವ ಮೊದಲು) | ಎರಡನೇ ಹಂತ (ಕಾಮಗಾರಿ ಪ್ರಗತಿಯಲ್ಲಿದ್ದಾಗ) | ಮೂರನೇ ಹಂತ (ಕಾಮಗಾರಿ ಪೂರ್ಣಗೊಂಡ ನಂತರ) |
|---|---|---|

## FORM P.W.G. 46.

### (See paragraph 294)

### Detailed Completion Report

Mahtma Gandhi Rashtriya Grameen Udyog Khatri Yojane

Taluka panchayat…………………… Gram panchayat…………..

Name of Work…………………………

…………………………………………

…………………………………………

Amount of Estimate……………………

Expenditure……………………………

Difference………………………………

Percentage of Excess (if any)………….

Date of Commencement ……………….

Date of Completion ……………………

No……………… dated………………… 20—

Forwarded to the Accountant General in Karnataka, for verification

Divisional Officer,

……………………………………….. Division

No …………………… Dated ………………….. 20—

Transmitted to the ………………… Engineer …………… duly verified

Accountant General.

Names of Engineers and Subordinates by whom the work was supervised, giving the dates of their several incumbencies, i.e., the dates of taking and making over charge in connection therewith.

| Name | Period of Incumbency | |
|---|---|---|
| | From | To |
| • Technical Officer(Officer who did Check measurement) | | |
| • Technical officer (Officer who recorded MB) | | |
| • Adhyaksha | | |
| • Panchayat Development officer | | |

Name of Work ………………………………………………

Fund, Department and Service Heads…MGNREGS for year…………………….

Main and Sub-beads of Classification …… MGNREGS for year ……………..

Reference to last progress report submitted…………………

Authority …………………………………………………….

| Item | Sub Heads of estimate (if any) | As estimated | | | | | As executed | | | | | Difference | | | | | Reference to paras overleaf explaining differences |
|---|---|---|---|---|---|---|---|---|---|---|---|---|---|---|---|---|---|
| | | Qty | Rate | | Amount | | Qty | Rate | | Amount | | Qty | Rate | | Amount | | |
| | | | Rs. | nP | Rs. | nP | | Rs. | nP | Rs. | nP | | Rs. | nP | Rs. | nP | |
| | | | | | | | | | | | | | | | | | |

Note: - Excesses to be entered in red ink; and savings in black ink.

Date ……………………..20— Technical Officer Panchayat Development Ofiicer

# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ

ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ

2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560 001.

ದೂರವಾಣಿ/ ಫ್ಯಾಕ್ಸ್ 080–22372738 E-mail: nregs-ka@nic.in


ಸಂ : ಗ್ರಾಅಪ 204 ಉಖಾಯೋ 2011 ದಿನಾಂಕ : 22–08–2011

## ಸುತ್ತೋಲೆ

**ವಿಷಯ** : ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳ ಪರಿವೀಕ್ಷಣಾ ವರದಿಯನ್ನು ನಿಗದಿತ ನಮೂನೆಯಲ್ಲಿ ನೀಡುವ ಕುರಿತು.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾಚರಣೆಯ ಮಾರ್ಗಸೂಚಿಗಳು 2008, ಅಧ್ಯಾಯ 10 ರ ಕಂಡಿಕೆ 10.3.1 ರಲ್ಲಿ ಯೋಜನೆಯಡಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳ ಆಂತರಿಕ ಪರಿವೀಕ್ಷಣೆಯನ್ನು ನಡೆಸಬೇಕಾದ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ತ್ರೈಮಾಸಿಕ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ.

- ಅದರಂತೆ ತಾಲ್ಲೂಕು ಮಟ್ಟದಲ್ಲಿ ಶೇಕಡಾ 100, ಜಿಲ್ಲಾ ಮಟ್ಟದಲ್ಲಿ ಶೇಕಡಾ 10 ಮತ್ತು ರಾಜ್ಯಮಟ್ಟದಲ್ಲಿ ಶೇಕಡಾ 2 ಗುರಿಯನ್ನು ನಿಗದಿಪಡಿಸಲಾಗಿದೆ.
- ಈ ಸಂಬಂಧ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿ ಹಲವು ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ವಿವಿಧ ನಮೂನೆಗಳಲ್ಲಿ ಯೋಜನೆಯ ಪರಿವೀಕ್ಷಣಾ ವರದಿಯನ್ನು ಸಲ್ಲಿಸಲಾಗುತ್ತಿದೆ ಹಾಗೂ ಹಲವು ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಯೋಜನೆಯ ಪರಿವೀಕ್ಷಣೆ ನಡೆಸದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
- ಎಲ್ಲಾ ಹಂತದ ಪರಿವೀಕ್ಷಣಾಧಿಕಾರಿಗಳು ನಿಗದಿಪಡಿಸಲಾದ ಗುರಿಯನ್ನು ನಿಗದಿತ ಅವಧಿಯೊಳಗೆ ಸಾಧಿಸಲು ಸೂಚಿಸಿದೆ.
- ಪರಿವೀಕ್ಷಣೆಯನ್ನು ನಡೆಸುವ ಎಲ್ಲಾ ಹಂತದ ಪರಿವೀಕ್ಷಣಾಧಿಕಾರಿಗಳು ತಮ್ಮ ವರದಿಯನ್ನು ಏಕರೂಪದ ನಮೂನೆಗಳಲ್ಲಿ ನೀಡುವ ಅವಶ್ಯಕತೆ ಇರುತ್ತದೆ. ಆದುದರಿಂದ ಇದಕ್ಕಾಗಿ ವಿನ್ಯಾಸಗೊಳಿಸಲಾದ ನಮೂನೆಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ. ನಮೂನೆ – 1 ರಲ್ಲಿ ಗ್ರಾಮ ಪಂಚಾಯಿತಿ ದಾಖಲಾತಿಗಳ ಪರಿಶೀಲನೆ ಹಾಗೂ ನಮೂನೆ–2 ರಲ್ಲಿ ಕಾಮಗಾರಿಗಳ ಪರಿಶೀಲನೆ ಸಂಬಂಧ ಪರಿವೀಕ್ಷಿಸಬೇಕಾದ ಹಾಗೂ ವರದೀಕರಿಸಬೇಕಾದ ವಿವರಗಳನ್ನು ಒಳಗೊಂಡಿದೆ.
- ಯೋಜನೆಯ ಅನುಷ್ಠಾನದ ಪರಿವೀಕ್ಷಣೆ ಸಡೆಸುವ ರಾಜ್ಯಮಟ್ಟದ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪರಿವೀಕ್ಷಣಾಧಿಕಾರಿಗಳು ಇನ್ನು ಮುಂದೆ ಕಡ್ಡಾಯವಾಗಿ ನಿಗದಿತ ನಮೂನೆಗಳಲ್ಲಿಯೇ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ವರದೀಕರಿಸುವಂತೆ ಸೂಚಿಸಿದೆ. ಇದಲ್ಲದೇ ಹೆಚ್ಚಿನ ಅತಿ ಅವಶ್ಯ ಮಾಹಿತಿ ಇದ್ದಲ್ಲಿ ಅದನ್ನೂ ಸಹ ಪರಿಗಣಿಸಿ ವರದಿಸಲು ಸೂಚಿಸಿದೆ.
- ಅನುಷ್ಠಾನಗೊಳಿಸುವ ಪ್ರತಿ ಕಾಮಗಾರಿಗೆ ಪ್ರತ್ಯೇಕ ಕಡತವನ್ನು ನಿರ್ವಹಿಸತಕ್ಕದ್ದು. ಈ ಕಡತದಲ್ಲಿ ನಮೂನೆ –2 ರಲ್ಲಿ ಸಂಬಂಧಿಸಿದ ಲಭ್ಯ ಮಾಹಿತಿಯೊಂದಿಗೆ ದಾಖಲೆಗಳನ್ನು ತಯಾರಿಸಿಟ್ಟುಕೊಳ್ಳುವುದು. ದಾಖಲಿಸಿದ ಮಾಹಿತಿಗಳನ್ನು ಪರಿಶೀಲನಾಧಿಕಾರಿಗಳು ಖಚಿತಪಡಿಸಿಕೊಂಡು ದೃಢೀಕರಿಸುವುದು.

(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಂದ ಟಿಪ್ಪಣೆ ಅನುಮೋದಿಸಲ್ಪಟ್ಟಿದೆ.)

**(ಪಿ. ಶಿವಶಂಕರ)**

ನಿರ್ದೇಶಕರು,

ಮಹಾತ್ಮಾಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ತಪಾಸಣಾ ವರದಿ

## ನಮೂನೆ-1 (ಗ್ರಾಮ ಪಂಚಾಯಿತಿ ದಾಖಲಾತಿಗಳ ಪರಿಶೀಲನೆ)

| | |
|---|---|
| ಜಿಲ್ಲೆಯ ಹೆಸರು | |
| ತಾಲ್ಲೂಕಿನ ಹೆಸರು | |
| ಗ್ರಾಮ ಪಂಚಾಯಿತಿ ಹೆಸರು | |
| ಪರಿಶೀಲನೆ ದಿನಾಂಕ | |

| | | | |
|---|---|---|---|
| 1) | **ಗ್ರಾಮ ಪಂಚಾಯಿತಿಯಲ್ಲಿ ಕುಟುಂಬಗಳ ಸಂಖ್ಯೆ :** | | |
| 2) | **ಗ್ರಾಮ ಪಂಚಾಯಿತಿಯಲ್ಲಿ ವಿತರಿಸಿದ ಉದ್ಯೋಗ ಚೀಟಿಗಳ ಸಂಖ್ಯೆ :** | | |
| | ಅ) | ಒಟ್ಟು ವಿತರಿಸಿದ ಉದ್ಯೋಗ ಚೀಟಿಗಳಲ್ಲಿ ಬಿಪಿಎಲ್ ಕುಟುಂಬಗಳ ಉದ್ಯೋಗ ಚೀಟಿಗಳ ಸಂಖ್ಯೆ: | |
| | ಆ) | ಎಂಐಎಸ್‌ನಲ್ಲಿ ನಮೂದಿಸಿದ ಬಿಪಿಎಲ್ ಕುಟುಂಬಗಳ ಸಂಖ್ಯೆ: | |
| | ಇ) | ಒಟ್ಟು ವಿತರಿಸಿದ ಉದ್ಯೋಗ ಚೀಟಿಗಳಲ್ಲಿ ಎಸ್‌ಸಿ/ಎಸ್‌ಟಿ ಕುಟುಂಬಗಳ ಉದ್ಯೋಗ ಚೀಟಿಗಳ ಸಂಖ್ಯೆ: | |
| | ಈ) | ಎಂಐಎಸ್‌ನಲ್ಲಿ ನಮೂದಿಸಿದ ಎಸ್‌ಸಿ/ಎಸ್‌ಟಿ ಕುಟುಂಬಗಳ ಸಂಖ್ಯೆ: | |
| | ಉ) | ಉದ್ಯೋಗ ಚೀಟಿ ಪಡೆದುಕೊಂಡ ಬಗ್ಗೆ ಫಲಾನುಭವಿಗಳಿಂದ ಸಹಿ ಪಡೆಯಲಾಗಿದೆಯೇ? | ಹೌದು/ಇಲ್ಲ |
| 3) | ನೋಂದಣಿಗೆ ಸಂಬಂಧಿಸಿದಂತೆ ನಮೂನೆ-1ರಲ್ಲಿ ಅರ್ಜಿಗಳನ್ನು ಪಡೆಯಲಾಗಿದೆಯೇ? | | ಹೌದು/ಇಲ್ಲ |
| 4) | ನೋಂದಣಿಯಾದ ಕುಟುಂಬಗಳ ವಿವರಗಳನ್ನು ನಮೂನೆ-2ರ ವಹಿಯಲ್ಲಿ ದಾಖಲಿಸಿದೆಯೇ? | | ಹೌದು/ಇಲ್ಲ |
| 5) | ನಮೂನೆ-3ರಲ್ಲಿ ಉದ್ಯೋಗಾಂಕ್ಷಿಗಳ ಭಾವಚಿತ್ರ ಪಡೆಯಲಾಗಿದೆಯೇ? | | ಹೌದು/ಇಲ್ಲ /ಕೆಲವು |
| 6) | ನಮೂನೆ-5ರ ವಹಿಯಲ್ಲಿ ಉದ್ಯೋಗ ಚೀಟಿ ವಿತರಿಸಿದ ಬಗ್ಗೆ ವಿವರ ದಾಖಲಿಸಲಾಗಿದೆಯೇ? | | ಹೌದು/ಇಲ್ಲ |
| 7) | ನಮೂನೆ-6ರಲ್ಲಿ ಉದ್ಯೋಗಗಳ ಬೇಡಿಕೆ ಸಲ್ಲಿಸಿದ ಕುಟುಂಬಗಳ ಸಂಖ್ಯೆ : | | |
| 8) | ಉದ್ಯೋಗಗಳ ಬೇಡಿಕೆ ಬಗ್ಗೆ ನಮೂನೆ-6ರಲ್ಲಿ ಅರ್ಜಿ ನೀಡಿದ ಫಲಾನುಭವಿಗಳ ವಿವರಗಳನ್ನು ನಮೂನೆ-7ರಲ್ಲಿ ದಾಖಲಿಸಿದೆಯೇ? | | ಹೌದು/ಇಲ್ಲ |
| 9) | ನಮೂನೆ-8ರಲ್ಲಿ ಕೆಲಸಕ್ಕೆ ಹಾಜರಾಗುವಂತೆ ಫಲಾನುಭವಿಗಳಿಗೆ ತಿಳಿಸಲಾಗಿದೆಯೇ? | | ಹೌದು/ಇಲ್ಲ |
| 10) | **ಕ್ರಿಯಾ ಯೋಜನೆ ತಯಾರಿಕೆ ಬಗ್ಗೆ :** | | |
| | ಅ) | ಉದ್ಯೋಗಗಳ ಬೇಡಿಕೆಗೆ ತಕ್ಕಂತೆ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ? | ಹೌದು/ಇಲ್ಲ |
| | ಆ) | ಕ್ರಿಯಾ ಯೋಜನೆ ಗ್ರಾಮ ಸಭೆಯಲ್ಲಿ ಅನುಮೋದನೆಗೊಂಡಿದೆಯೇ? | ಹೌದು/ಇಲ್ಲ |
| | | 1) ಗ್ರಾಮ ಸಭೆ ನಿರ್ಣಯ ಸಂಖ್ಯೆ ಮತ್ತು ದಿನಾಂಕ : | |
| | ಇ) | ಕ್ರಿಯಾಯೋಜನೆ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡಿದೆಯೇ? | ಹೌದು/ಇಲ್ಲ |
| | | 1) ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ನಿರ್ಣಯ ಸಂಖ್ಯೆ ಮತ್ತು ದಿನಾಂಕ : | |
| | | 2) ತಾಲ್ಲೂಕು ಪಂಚಾಯಿತಿ ಅನುಮೋದನೆ ಸಂಖ್ಯೆ ಮತ್ತು ದಿನಾಂಕ : | |
| | | 3) ಜಿಲ್ಲಾ ಪಂಚಾಯಿತಿ ಅನುಮೋದನೆ ಸಂಖ್ಯೆ ಮತ್ತು ದಿನಾಂಕ : | |
| 11) | **ಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ಮಾಹಿತಿ ಗೋಡೆಯಲ್ಲಿ ಗ್ರಾಮ ಪಂಚಾಯಿತಿ ಮುಂದೆ ಪ್ರದರ್ಶಿಸಲಾಗಿದೆಯೇ? (ಪೋಟೋ ಲಗ್ಗತ್ತಿಸುವುದು)** | | ಹೌದು/ಇಲ್ಲ |
| 12) | **ನಗದು ಪುಸ್ತಕ ಪರಿಶೀಲನೆ ಬಗ್ಗೆ** | | |
| | ಅ) | ನಗದು ಪುಸ್ತಕ ಪೂರ್ಣವಾಗಿ ನಿರ್ವಹಿಸಲಾಗಿದೆಯೇ? | ಹೌದು/ಇಲ್ಲ |
| | ಆ) | ನಗದು ಪುಸ್ತಕದಲ್ಲಿನ ವಿವರಗಳು ಪಾಸ್ ಬುಕ್‌ಗೆ ತಾಳೆಯಾಗುತ್ತಿದೆಯೇ? | ಹೌದು/ಇಲ್ಲ |
| 12ಎ) | ಅ) | ಚಾಟೆಡ ಅಕೌಂಟೆಂಟ್ ಅವರಿಂದ ಲೆಕ್ಕಪತ್ರ ಪರಿಶೀಲಿಸಲ್ಪಟ್ಟಿದೆ | ಹೌದು/ಇಲ್ಲ |
| | ಆ) | ಸ್ಥಳೀಯ ಲೆಕ್ಕ ಪರಿಶೋಧನೆಯಿಂದ ಲೆಕ್ಕ ತಪಾಸಣೆ ಆಗಿದೆಯೇ? | ಹೌದು/ಇಲ್ಲ |

13) **ಅನುದಾನ ಬಿಡುಗಡೆ ವಿವರ**

| ಬಿಡುಗಡೆಯಾದ ಅನುದಾನ | | | | | | ವೆಚ್ಚ | | | |
|---|---|---|---|---|---|---|---|---|---|
| ಕ್ರ.ಸಂ. | ಆರಂಭಿಕ ಶಿಲ್ಕು | ತಾಲ್ಲೂಕು ಪಂಚಾಯಿತಿಯಿಂದ | ಜಿಲ್ಲಾ ಪಂಚಾಯಿತಿಯಿಂದ | ಸರ್ಕಾರದಿಂದ | ಒಟ್ಟು | ಕೂಲಿ | ಸಾಮಾಗ್ರಿ | ಒಟ್ಟು | ಉಳಿಕೆ |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

14) ದೂರು ಪಟ್ಟಿಗೆ ಇಡಲಾಗಿದೆಯೇ? ಹೌದು/ಇಲ್ಲ

15) ಕಾಮಗಾರಿಗಳ ವಹಿ ನಿರ್ವಹಿಸಲಾಗಿದೆಯೇ? ಹೌದು/ಇಲ್ಲ

16) 100 ದಿನಗಳ ಕೆಲಸ ಪೂರೈಸಿದ ಕುಟುಂಬಗಳ ಸಂಖ್ಯೆ :

17) **ಕಾಮಗಾರಿಗಳ ವಿವರ**

| ವಿವರ | ಕಾಮಗಾರಿಗಳ ಸಂಖ್ಯೆ | ಬಳಿಕೆಯಾದ ಎನ್‌ಎಂಆರ್‌ಗಳು | ಖರ್ಚು | | |
|---|---|---|---|---|---|
| | | | ಕೂಲಿ | ಸಾಮಾಗ್ರಿ | ಒಟ್ಟು |
| ಸಾಲಿನಲ್ಲಿ | | | | | |
| | | | | | |
| | | | | | |

18) ದೂರುಗಳ ದಾಖಲೆ ವಹಿ ನಿರ್ವಹಿಸಲಾಗಿದೆಯೇ? ಹೌದು/ಇಲ್ಲ

ಅ) ಎಷ್ಟು ದೂರುಗಳು ಸ್ವೀಕೃತವಾಗಿದೆ:

ಆ) ಎಷ್ಟು ದೂರುಗಳು ವಿಲೇ ಮಾಡಲಾಗಿದೆ:

19) ನಿರುದ್ಯೋಗ ಭತ್ಯೆ ಸಂದಾಯ ಮಾಡಲಾದ ಪ್ರಕರಣಗಳು? ಇದೆ/ಇಲ್ಲ

20) ತಪಾಸಣಾ ಪುಸ್ತಕ ನಿರ್ವಹಿಸಲಾಗಿದೆಯೇ? ಹೌದು/ಇಲ್ಲ

21) ಷರಾ ( ಇತರೆ ನ್ಯೂನತೆಗಳಿದ್ದಾರೆ ದಾಖಲಿಸುವುದು)

22) ಪರಿಶೀಲನಾ ಅಧಿಕಾರಿಗಳ ಹೆಸರು ಮತ್ತು ಪದನಾಮ

ಅ) ಆ) ಇ)

23) ತಂಡದ ಮುಖ್ಯಸ್ಥರ ಅಭಿಪ್ರಾಯ

24) ತಂಡದ ಮುಖ್ಯಸ್ಥರ ಸಹಿ ಮತ್ತು ಪದನಾಮ

# ನಮೂನೆ–2 (ಕಾಮಗಾರಿ ಪರಿಶೀಲನೆ)

| | | | |
|---|---|---|---|
| 1) | ಗ್ರಾಮ ಪಂಚಾಯಿತಿ ಹೆಸರು: | | |
| 2) | ಆರ್ಥಿಕ ವರ್ಷ | | |
| 3) | ಕಾಮಗಾರಿಯ ಹೆಸರು ಹಾಗೂ ಅಂದಾಜು ಮೊತ್ತ | | |
| 4) | ಕಾಮಗಾರಿಯನ್ನು ಅನುಷ್ಠಾನಗೊಳಿಸಿದ ಇಲಾಖೆ : | | |
| 5) | ಕಾಮಗಾರಿಯ ಸಂಖ್ಯೆ | | |
| 6) | ಸಂಯೋಜನೆ ಅನುಮೋದನೆ ಸಂಖ್ಯೆ | | |
| 7) | ಕಾಮಗಾರಿ ಪ್ರತ್ಯೇಕ ಕಡತ ನಿರ್ವಹಿಸಲಾಗಿದೆಯೇ ? | | ಹೌದು/ಇಲ್ಲ |
| 8) | ಕಡತದಲ್ಲಿ ಈ ಕೆಳಗಿನ ದಾಖಲೆಗಳು ಇರುವುದೇ? | | |
| | ಅ) | ನಮೂನೆ–6 | ಇದೆ/ಇಲ್ಲ |
| | ಆ) | ನಮೂನೆ–8 | ಇದೆ/ಇಲ್ಲ |
| | ಇ) | ಅಂದಾಜು ಪಟ್ಟಿ | ಇದೆ/ಇಲ್ಲ |
| | ಈ) | ಎನ್‌ಎಂಆರ್ | ಇದೆ/ಇಲ್ಲ |
| | ಉ) | ಸಾಮಾಗ್ರಿ ಬಿಲ್ಲು (ವೋಚರ್ ಬಿಲ್ಲು) | ಇದೆ/ಇಲ್ಲ |
| | ಊ) | ಕಾಮಗಾರಿಯ ಫೋಟೋ ವಿವರ | |
| | | ಎ) ಕಾಮಗಾರಿಯ ಮೊದಲು | ಇದೆ/ಇಲ್ಲ |
| | | ಬಿ) ಕಾಮಗಾರಿ ನಡೆಯುವ ವೇಳೆ | ಇದೆ/ಇಲ್ಲ |
| | | ಸಿ) ಕಾಮಗಾರಿ ಮುಗಿದ ನಂತರ | ಇದೆ/ಇಲ್ಲ |
| | ಋ) | ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ಪಡೆಯಲಾಗಿದೆಯೇ? | ಹೌದು/ಇಲ್ಲ |
| | | 1) ಮಂಜೂರಾತಿ ಸಂಖ್ಯೆ ಮತ್ತು ದಿನಾಂಕ: | |
| | ಎ) | ಕಾಮಗಾರಿಗೆ ಆಡಳಿತ ಮಂಜೂರಾತಿ ಪಡೆಯಲಾಗಿದೆಯೇ? | ಹೌದು/ಇಲ್ಲ |
| | | 1) ಮಂಜೂರಾತಿ ಸಂಖ್ಯೆ ಮತ್ತು ದಿನಾಂಕ: | |
| | ಏ) | ಕಾಮಗಾರಿಗೆ ಪ್ರಾರಂಭ ಪತ್ರ ಪಡೆಯಲಾಗಿದೆಯೇ? | ಹೌದು/ಇಲ್ಲ |
| | ಐ) | ಕಾಮಗಾರಿಗೆ ಮುಕ್ತಾಯ ವರದಿ ಪಡೆಯಲಾಗಿದೆಯೇ? | ಹೌದು/ಇಲ್ಲ |
| | ಒ) | ಮುಕ್ತಾಯ ವರದಿ ಎಂಐಎಸ್‌ನಲ್ಲಿ ಅಳವಡಿಸಿದೆಯೇ? | ಹೌದು/ಇಲ್ಲ |
| 9) | ಎನ್‌ಎಂಆರ್‌ಗಳ ಪರಿಶೀಲನೆಯ ಬಗ್ಗೆ | | |
| | ಅ) | ಕಾಮಗಾರಿಗೆ ಸಂಬಂಧಿಸಿದಂತೆ ಎನ್‌ಎಂಆರ್ ನಿರ್ವಹಿಸಲಾಗಿದೆಯೇ? | ಹೌದು/ಇಲ್ಲ |

ಆ)

| ಕ್ರ.ಸಂ | ಎನ್‌ಎಂಆರ್ ಸಂಖ್ಯೆ | ಎನ್‌ಎಂಆರ್ ತಯಾರಿಸಿದ ದಿನಾಂಕ | ಎನ್‌ಎಂಆರ್ ಅವಧಿ | ಎನ್‌ಎಂಆರ್ ಪಾವತಿಸಿದ ದಿನಾಂಕ | ಎನ್‌ಎಂಆರ್ ಮೊತ್ತ |
|---|---|---|---|---|---|
| | | | | | |
| | | | | | |
| | | | | | |
| | | | | | |

| | | | |
|---|---|---|---|
| | ಇ) | ಎನ್‌ಎಂಆರ್ ಪಾವತಿಯು 15 ದಿನಗಳಿಗಿಂತ ಹೆಚ್ಚಿಗೆ ವ್ಯತ್ಯಾಸ ಇದ್ದರೇ ವಿವರ ನೀಡುವುದು. | |
| | ಈ) | ಎನ್‌ಎಂಆರ್‌ನಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ /ಕಾರ್ಯದರ್ಶಿಯವರ ಸಹಿ ಇರುವುದೆ? | ಇದೆ/ಇಲ್ಲ |
| | ಉ) | ಕೆಲಸಕ್ಕೆ ಹಾಜರಾದ ಎಲ್ಲಾ ಕೂಲಿಕಾರರ ಸಹಿ ಪಡೆಯಲಾಗಿದೆಯೇ? | ಹೌದು/ಇಲ್ಲ |
| | ಊ) | ಕಾಮಗಾರಿಯಲ್ಲಿ ಉತ್ಪತ್ತಿಯಾದ ಮಾನವ ದಿನಗಳು ಸಂಖ್ಯೆ: | |
| 10) | ಅಳತೆ ಪುಸ್ತಕ ಪರಿಶೀಲನೆಯ ಬಗ್ಗೆ | | |
| | ಅ) | ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕದಲ್ಲಿ ಅಳತೆಗಳನ್ನು ನಿರ್ವಹಿಸಲಾಗಿದೆಯೇ? | ಹೌದು/ಇಲ್ಲ |
| | ಆ) | ಕೂಲಿ ಮತ್ತು ಸಾಮಾಗ್ರಿ ವೆಚ್ಚಗಳನ್ನು ಪ್ರತ್ಯೇಕವಾಗಿ ನಮೂದಿಸಲಾಗಿದೆಯೇ? | ಹೌದು/ಇಲ್ಲ |
| | ಇ) | ಅಳತೆ ಪುಸ್ತಕದಲ್ಲಿನ ಅಳತೆಗಳನ್ನು ಸಂಬಂಧಪಟ್ಟ ಇಲಾಖೆಯ ಹೋಬಳಿ ಮಟ್ಟದ ಅಧಿಕಾರಿಗಳು ದೃಢೀಕರಿಸಿರುತ್ತಾರೆಯೇ? (ಅಂತಿಮ ಬಿಲ್ಲು) | ಹೌದು/ಇಲ್ಲ |

| | | | |
|---|---|---|---|
| 11) | **ಕೂಲಿ ಪಾವತಿ** | | |
| | ಅ) | ಕಾಮಗಾರಿಗೆ ಸಂಬಂಧಿಸಿದಂತೆ ಕೂಲಿಕಾರರಿಗೆ ಕೂಲಿಪಾವತಿ ಆಗಿದೆಯೇ? | ಹೌದು/ಇಲ್ಲ |
| | ಆ) | ಕೂಲಿ ಮೊತ್ತವು ನೇರವಾಗಿ ಕೂಲಿಗಾರರ ಬ್ಯಾಂಕ್/ ಅಂಚೆ ಕಛೇರಿ ಖಾತೆಗೆ ಜಮೆಯಾಗಿದೆಯೇ? | ಹೌದು/ಇಲ್ಲ |
| | ಇ) | ಕನಿಷ್ಠ ಒಂದು ಕಾಮಗಾರಿಗೆ ಸಂಬಂಧಿಸಿದಂತೆ 2 ಕೂಲಿಕಾರರ ಬ್ಯಾಂಕ್ ಪುಸ್ತಕ ಪರಿಶೀಲಿಸಿ ದೃಢೀಕರಿಸಿಕೊಳ್ಳುವುದು. ಕೂಲಿಪಾವತಿ ಬಗ್ಗೆ ಕೂಲಿಕಾರರ ಅಭಿಪ್ರಾಯ ದಾಖಲಿಸಿಕೊಳ್ಳುವುದು: (ಅಭಿಪ್ರಾಯ ದಾಖಲಿಸಲಾಗಿದೆ/ದಾಖಲಾಗಿಸಿಲ್ಲ) | |
| 12) | **ಕಾಮಗಾರಿಗಳ ಸ್ಥಳ ಪರಿಶೀಲನೆ** | | |
| | ಅ) | ಕಾಮಗಾರಿಯನ್ನು ಸ್ಥಳದಲ್ಲಿ ಕೆಲಸ ನಿರ್ವಹಿಸಲಾಗಿದೆಯೇ? | ಹೌದು/ಇಲ್ಲ |
| | ಅ) | ಕಾಮಗಾರಿಯು ಕ್ರಿಯಾಯೋಜನೆಯಲ್ಲಿ ಅನುಮೋದನೆಗೊಂಡಿದೆಯೇ? | ಹೌದು/ಇಲ್ಲ |
| | ಇ) | ಕಾಮಗಾರಿಯ ಗುಣಮಟ್ಟ ತೃಪ್ತಿಕರವಾಗಿದೆಯೇ? | ಉತ್ತಮ/ಸಾಧಾರಣ/ಕಳಪೆ |
| | ಈ) | ಅಳತೆ ಪುಸ್ತಕದಲ್ಲಿರುವ ಅಳತೆ/ ಸಂಖ್ಯೆಗಳಂತೆ ಕಾಮಗಾರಿ ಆಗಿರುತ್ತದೆಯೇ? | ಹೌದು/ಇಲ್ಲ |
| | ಉ) | ಕಾಮಗಾರಿ ಸ್ಥಳದಲ್ಲಿ ಕಾಮಗಾರಿಗೆ ಸಂಬಂಧಿಸಿದ ವಿವರಗಳನ್ನೆಲ್ಲ ನಾಮಫಲಕದಲ್ಲಿ ಅಳವಡಿಸಲಾಗಿದೆಯೇ? (ಫೋಟೋ ಲಗತ್ತಿಸುವುದು) | ಹೌದು/ಇಲ್ಲ |
| | ಊ) | ಕಾಮಗಾರಿ ಅಪೂರ್ಣಗೊಂಡಿದೆಯೇ/ ಸ್ಥಗಿತಗೊಂಡಿದೆಯೇ? | ಹೌದು/ಇಲ್ಲ |
| | ಋ) | ಕಾಮಗಾರಿ ಸ್ಥಳದಲ್ಲಿ ಯಂತ್ರಗಳನ್ನು ಬಳಸಲಾಗಿದೆಯೇ? | ಹೌದು/ಇಲ್ಲ/ಸ್ಪಷ್ಟತೆ ಇಲ್ಲ |
| | ಎ) | ಕಾಮಗಾರಿಯನ್ನು ಎಂಐಎಸ್‌ನಲ್ಲಿ ದಾಖಲಿಸಲಾಗಿದೆಯೇ? | ಹೌದು/ಇಲ್ಲ |
| 13) | **ಸಾಮಾಗ್ರಿ ಬಿಲ್ಲು** | | |
| | ಅ) | ಕಾಮಗಾರಿಗೆ ಸಾಮಾಗ್ರಿ ಖರ್ಚು ಮಾಡಲಾಗಿದೆಯೇ? | ಹೌದು/ಇಲ್ಲ |
| | ಆ) | ಸಾಮಾಗ್ರಿ ವೋಚರಿನಲ್ಲಿ ಸರಬರಾಜುದಾರರ ಸಹಿ ಇರುತ್ತದೆಯೇ? | ಹೌದು/ಇಲ್ಲ |
| | ಇ) | ಕಾಮಗಾರಿಯ ಸಾಮಾಗ್ರಿ ಖರೀದಿಗೆ ಸಂಬಂಧಿಸಿದ ವೋಚರುಗಳನ್ನು ಪಡೆಯಲಾಗಿದೆಯೇ? | ಹೌದು/ಇಲ್ಲ |
| | ಈ) | ವೋಚರಿನಲ್ಲಿ ಮೊತ್ತವನ್ನು ಪಾವತಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆಯೇ? | ಹೌದು/ಇಲ್ಲ |
| | ಉ) | ಸಾಮಾಗ್ರಿ ಬಿಲ್ಲಿನಲ್ಲಿ ಆದಾಯ ತೆರಿಗೆ ವ್ಯಾಟ್ ರಾಯಲ್ಟಗಳು ಕಡಿತಗೊಳಿಸಲಾಗಿದೆಯೇ? | ಹೌದು/ಇಲ್ಲ |
| | ಊ) | ಸಾಮಾಗ್ರಿ ಮೊತ್ತ 40% ಮೀರಿರುತ್ತದೆಯೇ? | ಹೌದು/ಇಲ್ಲ |
| 14) | ಕಾಮಗಾರಿಯ ಪ್ರಯೋಜನಕಾರಿ ಬಗ್ಗೆ | | |
| | ಅ) | ದೀರ್ಘಕಾಲ ಬಾಳಿಕೆ ಬರುವ ಸ್ಥಿರಾಸ್ತಿ ಸೃಷ್ಟಿಸಲಾಗಿದೆಯೇ? | ಹೌದು/ಇಲ್ಲ |
| | ಆ) | ಉದ್ದೇಶ ಈಡೇರಿದೆಯೇ? | ಹೌದು/ಇಲ್ಲ |
| | ಇ) | ಕಾಮಗಾರಿಯ ಅನುಷ್ಠಾನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕಾಯ್ದೆ ಮತ್ತು ನಿಯಮಗಳಂತೆ ಆಗಿದೆಯೇ? | ಹೌದು/ಇಲ್ಲ |
| | ಈ) | ಈ ಕಾಮಗಾರಿ ಜನರಿಗೆ ಉಪಯುಕ್ತವೇ? | ಹೌದು/ಇಲ್ಲ |
| 15) | ಷರಾ (ಇತರ ನ್ಯೂನತೆಗಳಿದ್ದಾರೆ ದಾಖಲಿಸುವುದು) | | |
| 16) | ಪರಿಶೀಲನಾ ಅಧಿಕಾರಿಯ ಹೆಸರು ಮತ್ತು ಪದನಾಮ<br>ಅ) ಆ) ಇ) | | |
| 17) | ತಂಡದ ಮುಖ್ಯಸ್ಥರ ಅಭಿಪ್ರಾಯ | | |
| 18) | ತಂಡದ ಮುಖ್ಯಸ್ಥರ ಸಹಿ ಮತ್ತು ಪದನಾಮ | | |

# ಕರ್ನಾಟಕ ಸರ್ಕಾರ

ನಂ. ಗ್ರಾಅಪ 212 ಗ್ರಾಪಂಅ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 01-08-2011

## ಸುತ್ತೋಲೆ

**ವಿಷಯ** : 2011-12ನೇ ಸಾಲಿನಲ್ಲಿ ವಿಶೇಷ ಗ್ರಾಮ ಸಭೆಯನ್ನು ಆಯೋಜಿಸುವ ಬಗ್ಗೆ.

**ವಿಷಯ** : ಉಪ ಕಾರ್ಯದರ್ಶಿಗಳು, ಪಂ.ರಾಜ್ ಮಂತ್ರಾಲಯ, ಭಾರತ ಸರ್ಕಾರ ಇವರ ಪತ್ರ ಸಂ. ಎನ್-11019/5/2010-ಡಬ್ಲ್ಯೂಸಿಡಿ/ ಪಿಎಂಇವೈಎಸ್‌ಎ, ದಿನಾಂಕ 31.1.2011, 29.06.2011, 12.07.2011.

* * *

ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಅಡಿಯಲ್ಲಿ ಪ್ರತಿ ವರ್ಷ ವಾರ್ಡ್ ಸಭೆ ಹಾಗು ಗ್ರಾಮ ಸಭೆಗಳನ್ನು ನಡೆಸುವುದು ಗ್ರಾಮ ಪಂಚಾಯತಿಯ ಆದ್ಯ ಕರ್ತವ್ಯವಾಗಿರುತ್ತದೆ.

ದಿನಾಂಕ 05.01.2011 ರಲ್ಲಿ ನಡೆದ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಷತ್ ಮೊದಲನೇ ಸಭೆಯಲ್ಲಿ ಭಾರತದಲ್ಲಿ ಪೌಷ್ಠಿಕ ಆಹಾರದ ಸವಾಲುಗಳ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿದ್ದು, ಅದರಂತೆ ಪೌಷ್ಠಿಕ ಆಹಾರದ ಸವಾಲುಗಳು ಹಾಗು ಅದಕ್ಕೆ ಸಂಬಂಧಿಸಿದ ಇತರೆ ವಿಷಯದ ಬಗ್ಗೆ ವಿಶೇಷ ಗ್ರಾಮ ಸಭೆಗಳನ್ನು ನಡೆಸಲು ಉಲ್ಲೇಖದ ಪತ್ರದಲ್ಲಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಕ್ರಮ ವಹಿಸಲು ರಾಜ್ಯದ ಎಲ್ಲಾ ಪಂ.ರಾಜ್ ಸಂಸ್ಥೆಯ ಮುಖ್ಯಸ್ಥರಿಗೆ (ಚುನಾಯಿತ ಪಂ.ರಾಜ್ ಪ್ರತಿನಿಧಿಗಳು/ಅಧಿಕಾರಿಗಳು) ಸೂಚಿಸಲಾಗಿದೆ :

### ಗ್ರಾಮ ಸಭೆ ವಿಷಯ- ಪೌಷ್ಠಿಕ ಆಹಾರದ ಸವಾಲುಗಳು ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳು

(1) ದಿನಾಂಕ 15.08.2011 ರಿಂದ 31.08.2011 ರವರೆಗೆ ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸುವುದು.

(2) ಪೌಷ್ಠಿಕ ಆಹಾರದ ಸವಾಲುಗಳು ವಿಷಯದ ಬಗ್ಗೆ ಪಂ.ರಾಜ್ ಸಂಸ್ಥೆಯ ಚುನಾಯಿತ ಸದಸ್ಯರಿಗೆ ಮಾಹಿತಿ ನೀಡುವುದು.

(3) ಮಹಿಳಾ ಪಂಚಾಯತ್ ಸದಸ್ಯರುಗಳು ಪ್ರತಿನಿಧಿಸುವ ಕ್ಷೇತ್ರಗಳು ನ್ಯೂನ್ಯ ಪೌಷ್ಠಿಕ ಆಹಾರದ ಪೋಷಣೆ (ಪೌಷ್ಠಿಕ ಆಹಾರದ ಕೊರತೆ-Mal Nutrition free) ಮುಕ್ತವಾಗಿಸುವ ಸವಾಲುಗಳು.

(4) ನ್ಯೂನ್ಯ ಪೋಷಣೆ ರಹಿತ ಕ್ಷೇತ್ರಗಳನ್ನಾಗಿ ಮಾಡಲು ತೆಗೆದುಕೊಳ್ಳಬೇಕಾದ ನೂತನ ಅವಿಷ್ಕಾರ ಕಾರ್ಯಕ್ರಮಗಳನ್ನು ರೂಪಿಸುವುದು.

(5) ನ್ಯೂನ್ಯ ಪೋಷಣೆಯನ್ನು ಹೋಗಲಾಡಿಸಲು ಹಮ್ಮಿಕೊಳ್ಳಲಾದ ಉತ್ತಮ ಪದ್ಧತಿ (Best Practice) ಗಳನ್ನು ಸರ್ಕಾರಕ್ಕೆ ಕಳುಹಿಸುವುದು.

(6) ಈ ಗ್ರಾಮ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ, ನೈರ್ಮಲ್ಯ, ಕುಡಿಯುವ ನೀರು, ಸಾರ್ವಜನಿಕ ವಿತರಣಾ ವ್ಯವಸ್ಥೆ, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಹಾಗು ಮೀನುಗಾರಿಕೆ ತಾಲ್ಲೂಕು ಹಾಗು ಕ್ಷೇತ್ರ ಮಟ್ಟದ ಅಧಿಕಾರಿಗಳು ಭಾಗವಹಿಸುವುದು.

(7) ಈ ಗ್ರಾಮ ಸಭೆಯಲ್ಲಿ ಮೇಲೆ ವಿವರಿಸಿರುವ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಪೂರ್ಣ ಮಾಹಿತಿಯನ್ನು ವಾರ್ಡ್ ಸಭೆ/ಗ್ರಾಮ ಸಭೆಗಳಲ್ಲಿ ಅರ್ಥಪೂರ್ಣ ಚರ್ಚೆ ನಡೆಸಿ ಫಲದಾಯಕ ನಿರ್ಣಯಗಳನ್ನು ಕೈಗೊಳ್ಳಲು ತಿಳಿಸಿದೆ.

(8) ಈ ಗ್ರಾಮ ಸಭೆಯ ವಿಡಿಯೋ ಚಿತ್ರೀಕರಣವನ್ನು ಕಡ್ಡಾಯವಾಗಿ ಮಾಡತಕ್ಕದ್ದು.

(9) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲೆ ತಿಳಿಸಿದಂತೆ ಕಟ್ಟುನಿಟ್ಟಿನ ಕ್ರಮ ವಹಿಸಿ ಸರ್ಕಾರಕ್ಕೆ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿದೆ.

**ಇವರಿಗೆ :**
1. ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು/ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯ ಮುಖಾಂತರ).



(ಎಂ.ಎಸ್. ರವಿಶಂಕರ್)
ಸರ್ಕಾರದ ಕಾರ್ಯದರ್ಶಿ, (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : 2011-12ನೇ ಸಾಲಿನ ಶಾಸನಬದ್ಧ ಅನುದಾನ - ಎರಡನೇ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ವಿಷಯ** :
1) ಸರ್ಕಾರದ ಆದೇಶ ಸಂಖ್ಯೆ.ಗ್ರಾಅಪ 129 ಗ್ರಾಪಂಕಾ 2002(3) ದಿನಾಂಕ : 2-12-2003.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 234 ಗ್ರಾಪಂಅ 2007, ದಿನಾಂಕ: 27-3- 2008.
3) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ.ಆಇ 229 ವೆಚ್ಚ-6/2011, ದಿನಾಂಕ : 08-06-2011.
4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ಗ್ರಾಪಂಅ 2011, ದಿನಾಂಕ: 14-6-2011.
5) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ.ಆಇ 229 ವೆಚ್ಚ-6/2011, ದಿನಾಂಕ : 09-08-2011.

* * *

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾಗುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿಪಂ) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರಿಗೆ ಸರ್ಕಾರವು ಆದೇಶಿಸಿದೆ.

2011–12 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ನೀಡುತ್ತಿರುವ ಶಾಸನಬದ್ಧ ಅನುದಾನವನ್ನು ಪ್ರಸಕ್ತ ಸಾಲಿನಿಂದ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ₹. 6.00 ಲಕ್ಷಗಳಿಂದ ₹. 8.00 ಲಕ್ಷಗಳಿಗೆ ಹೆಚ್ಚಿಸಲಾಗಿದ್ದು, 2011-12ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯುತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಆಯುವ್ಯಯು ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಅಡಿ ಒಟ್ಟಾರೆ ₹. 45,436.00 ಲಕ್ಷಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ ಪ್ರತಿ ಗ್ರಾಮ ಪಂಚಾಯತಿಗೆ ವಾರ್ಷಿಕವಾಗಿ ತಲಾ ₹.8.00 ಲಕ್ಷಗಳು ಲಭ್ಯವಾಗುತ್ತದೆ. ಈ ಸಾಲಿನ ಮೊದಲನೇ ತ್ರೈಮಾಸಿಕ ವೆಚ್ಚಕ್ಕಾಗಿ ಪ್ರಸ್ತಾಪಿತ ಲೆಕ್ಕ ಶೀರ್ಷಿಕೆಯಿಂದ ಒಟ್ಟು ರೂ. 11254.00 ಲಕ್ಷಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿನ ಅನಧಿಕೃತ ಟಿಪ್ಪಣಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಎರಡನೇ ತ್ರೈಮಾಸಿಕ ಅನುದಾನ ರೂ.11254.00 ಲಕ್ಷಗಳನ್ನು ಬಿಡುಗಡೆ ಮಾಡಲು ಸಹಮತಿ ನೀಡಿದೆ.

ಪ್ರಸ್ತುತ ರಾಜ್ಯದಲ್ಲಿ 5627 ಗ್ರಾಮ ಪಂಚಾಯಿತಿಗಳಿರುವುದರಿಂದ, ಪ್ರತಿ ಗ್ರಾಮ ಪಂಚಾಯಿತಿಗೆ ಪ್ರತಿ ಕಂತಿಗೆ ₹.2.00 ಲಕ್ಷಗಳಂತೆ ₹.11254.00 ಲಕ್ಷಗಳನ್ನು ಬಿಡುಗಡೆಗೊಳಿಸಲು ಪರಿಶೀಲಿಸಲಾಗಿದ್ದು, ಸದರಿ ಅನುದಾನದ ಪೈಕಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಂತೆ, ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವೇತನಕ್ಕಾಗಿ ಶೇಕಡಾ 40 ರಷ್ಟು ಮತ್ತು ಉಳಿದ ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಜುಲೈ 2011 ರಿಂದ ಸೆಪ್ಟೆಂಬರ್ 2011 ರ ಅವಧಿಯ ವಿದ್ಯುತ್ ಬಿಲ್ ಪಾವತಿಸಲು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮುಖಾಂತರ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 105 ಗ್ರಾಪಂಅ 2011, ಬೆಂಗಳೂರು, ದಿನಾಂಕ: 24-08-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರತಿ ಗ್ರಾಮ ಪಂಚಾಯಿತಿಗೆ 2011-12ನೇ ಸಾಲಿನ ಶಾಸನಬದ್ಧ ಅನುದಾನದ ಎರಡನೇ ತ್ರೈಮಾಸಿಕ ಕಂತಿನ ಮೊತ್ತ ₹.11254.00 ಲಕ್ಷಗಳನ್ನು (ಹನ್ನೊಂದು ಸಾವಿರದ ಎರಡ ನೂರ ಐವತ್ತನಾಲ್ಕು ಲಕ್ಷ ರೂಪಾಯಿಗಳು) 2011-12ನೇ ಸಾಲಿನ ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಅಡಿಯಲ್ಲಿ ಬಿಡುಗಡೆ ಮಾಡಿ ಆದೇಶಿಸಿದೆ. ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು, ಇಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಉಳಿತಾಯ ಖಾತೆ ಸಂಖ್ಯೆ: 04462010088409 ಮುಖಾಂತರ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ತಲಾ ₹.2.00 ಲಕ್ಷದಂತೆ ಎರಡನೇ ತ್ರೈಮಾಸಿಕ ಕಂತಿನ ಅನುದಾನವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿನ ಷರತ್ತುಗಳನ್ನು ಪಾಲಿಸುವ ನಿಬಂಧನೆಗಳಿಗೊಳಪಟ್ಟು, ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವೇತನ ಮತ್ತು ಗ್ರಾಮ ಪಂಚಾಯಿತಿಗಳ ಜುಲೈ 2011 ರಿಂದ ಸೆಪ್ಟೆಂಬರ್ 2011 ರ ಅವಧಿಯ ವಿದ್ಯುತ್ ಬಿಲ್ ಪಾವತಿಸಲು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ. ಈ ಉದ್ದೇಶಗಳಲ್ಲದೇ ಈ ಅನುದಾನದಿಂದ ಯಾವುದೇ ಕಾಮಗಾರಿಗಳಿಗೆ ವಿನಿಯೋಸತಕ್ಕದ್ದಲ್ಲ. ಹಾಗೂ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ದಿನಾಂಕ: 15-09-2011 ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಹಲವಾರು ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ಶೇಕಡ 40 ರಷ್ಟು ಅನುದಾನವನ್ನು ಬಿಡುಗಡೆ ಮಾಡುವಲ್ಲಿ 15 ದಿನಗಳಿಂದ 3-4 ತಿಂಗಳುಗಳವರೆಗೆ ವಿಳಂಬ ಮಾಡುತ್ತಿರುವುದು ಮತ್ತು ಈ ಅನುದಾನವನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ ದಿನಾಂಕದಿಂದ 7 ದಿನಗಳ ಒಳಗೆ ಗ್ರಾಮ ಪಂಚಾಯಿತಿಯ ಖಾತೆಗೆ ಆನ್-ಲೈನ್ ಮುಖಾಂತರ ವರ್ಗಾಯಿಸತಕ್ಕದ್ದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಪಟ್ಟವರಿಂದ ವಿಳಂಬದ ಅವಧಿಗೆ ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸ ಲಾಗುವುದು.

ಮುಂದುವರೆದು ವಿದುಚ್ಛಕ್ತಿ ಬಿಲ್‌ಗೆ ಸಂಬಂಧಿಸಿದ ಮೊತ್ತವನ್ನು ಸೂಕ್ತವಾಗಿ ಪರಿಶೀಲಿಸಿ, ಪರಿಶೋಧಿಸಿ ತಕ್ಷಣವೇ ಪಾವತಿಸಲು ಕ್ರಮವಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 229 ವೆಚ್ಚ 6/2011, ದಿನಾಂಕ: 09-08-2011 ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸ್ವರ್ಣಲತಾ ಎಂ. ಭಂಡಾರೆ)**
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

## ಅನುಬಂಧ

### ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ಗ್ರಾಪಂಅ 2011, ದಿನಾಂಕ : 24-8-2011.

| ಕ್ರಮ ಸಂಖ್ಯೆ | ಉಪ ಲೆಕ್ಕ ಶೀರ್ಷಿಕೆ | ಜಿಲ್ಲಾ ಪಂಚಾಯಿತಿ ಹೆಸರು | ಗ್ರಾಮ ಪಂಚಾಯಿತಿಗಳ ಸಂಖ್ಯೆ | 2011-12ನೇ ಸಾಲಿನ ಬಜೆಟ್ (ರೂ. ಲಕ್ಷಗಳಲ್ಲಿ) | 2011-12 ನೇ ಸಾಲಿನ ಎರಡನೇ ತ್ರೈಮಾಸಿಕ ಕಂತಿನ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|---|---|
| 1 | 2 | 3 | 4 | 5 | 6 |
| 1 | 401 | ಬೆಂಗಳೂರು (ನಗರ) | 86 | 688 | 172.00 |
| 2 | 402 | ಬೆಂಗಳೂರು (ಗ್ರಾ) | 98 | 784 | 196.00 |
| 3 | 403 | ಚಿತ್ರದುರ್ಗ | 185 | 1480 | 370.00 |
| 4 | 404 | ಕೋಲಾರ | 156 | 1248 | 312.00 |
| 5 | 405 | ಶಿವಮೊಗ್ಗ | 260 | 2080 | 520.00 |
| 6 | 406 | ತುಮಕೂರು | 321 | 2568 | 642.00 |
| 7 | 407 | ಮೈಸೂರು | 235 | 1880 | 470.00 |
| 8 | 408 | ಚಿಕ್ಕಮಗಳೂರು | 226 | 1808 | 452.00 |
| 9 | 409 | ದಕ್ಷಿಣ ಕನ್ನಡ | 203 | 1624 | 406.00 |
| 10 | 410 | ಹಾಸನ | 258 | 2064 | 516.00 |
| 11 | 411 | ಕೊಡಗು | 98 | 784 | 196.00 |
| 12 | 412 | ಮಂಡ್ಯ | 232 | 1856 | 464.00 |
| 13 | 413 | ಬೆಳಗಾಂ | 485 | 3880 | 970.00 |
| 14 | 414 | ಬಿಜಾಪುರ | 199 | 1592 | 398.00 |
| 15 | 415 | ಧಾರವಾಡ | 127 | 1016 | 254.00 |
| 16 | 416 | ಉತ್ತರ ಕನ್ನಡ | 207 | 1656 | 414.00 |
| 17 | 417 | ಗುಲ್ಬರ್ಗಾ | 220 | 1760 | 440.00 |
| 18 | 418 | ಬಳ್ಳಾರಿ | 189 | 1512 | 378.00 |
| 19 | 419 | ಬೀದರ್ | 175 | 1400 | 350.00 |
| 20 | 420 | ರಾಯಚೂರು | 164 | 1312 | 328.00 |
| 21 | 421 | ಯಾದಗಿರಿ | 117 | 936 | 234.00 |
| 22 | 451 | ದಾವಣಗೆರೆ | 230 | 1840 | 460.00 |
| 23 | 452 | ರಾಮನಗರ | 130 | 1040 | 260.00 |
| 24 | 453 | ಚಿಕ್ಕಬಳ್ಳಾಪುರ | 151 | 1208 | 302.00 |
| 25 | 456 | ಚಾಮರಾಜನಗರ | 120 | 960 | 240.00 |
| 26 | 457 | ಉಡುಪಿ | 146 | 1168 | 292.00 |
| 27 | 461 | ಬಾಗಲಕೋಟೆ | 161 | 1288 | 322.00 |
| 28 | 462 | ಗದಗ | 106 | 848 | 212.00 |
| 29 | 463 | ಹಾವೇರಿ | 208 | 1664 | 416.00 |
| 30 | 466 | ಕೊಪ್ಪಳ | 134 | 1072 | 268.00 |
| | | ಒಟ್ಟು | 5627 | 45016 | 11254.00 |

# ಧಾರವಾಡ ಜಿಲ್ಲಾ ಅಭಿವೃದ್ಧಿ ಕಾಮಗಾರಿಗಳು



ಗ್ರಾಮಸಭೆಯ ಮೂಲಕ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಮಾಹಿತಿ ನೀಡುತ್ತಿರುವುದು



ಯೋಜನೆಯಡಿ ಸಾಮಾಜಿಕ ಅರಣ್ಯೀಕರಣ


## ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

# KARNATAKA VIKASA : SEPTEMBER, 2011

A Monthly Magazine of Rural Development and Panchayat Raj Department, Government of Karnataka

Regd. No. KA/BGGPO/2531/09-11. Licence to post "Without Prepayment" WPP-32

RNI. No. 28103, KAR, KAN-02190, Total No. of Pages 52. Despatch Date : 1st week of every month


ಬೆಲೆ : 5 ರೂಪಾಯಿಗಳು


Despatcher

**OFFICE OF THE CHIEF EDITOR, KARNATAKA VIKASA**

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

Printed at : GEETANJALI GRAPHICS

B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346